ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಸೋಮವಾರ, ಅಕ್ಟೋಬರ್ 30, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 168 RNI : 27369/75

janathavani@mac.com
www.janathavani.com
☎ 08192 254736 91642 99999


# ಗೂಗಲ್ ಡಿಜಿಟಲ್ ಗೋಡೆ ಒಡೆಯಲು ಸಾಧ್ಯವೇ?

## ಅಂತರ್ಜಾಲ ಶೋಧದಲ್ಲಿನ ಏಕಸ್ವಾಮ್ಯದ ಭವಿಷ್ಯ ನಿರ್ಧರಿಸಲಿರುವ ಅಮೆರಿಕದ ಕೋರ್ಟ್

ವಾಷಿಂಗ್ಟನ್, ಅ. 29 - ಡಕ್ ಡಕ್ ಗೋ, ಯಾಂಡೆಕ್ಸ, ಬೈಡು, ಬಿಂಗ್... ಇವುಗಳ ಹೆಸರು ಕೇಳಿದ್ದೀರಾ? ಇವೆಲ್ಲಾ ಅಂತರ್ಜಾಲ ಶೋಧ ಅಥವಾ ಇಂಟರ್‌ನೆಟ್ ಸರ್ಚ್ ಕಂಪನಿಗಳು. ಆದರೆ, ಇದಾವುದೂ ಜನಸಾಮಾನ್ಯರಿಗೆ ಗೊತ್ತಿರುವ ಸಾಧ್ಯತೆ ಇಲ್ಲ. ಗೂಗಲ್ ಎಂದರೆ ಇಂಟರ್‌ನೆಟ್‌ನಲ್ಲಿ ಸರ್ಚ್ ಮಾಡುವ ಏಕೈಕ ಸಾಧನ ಎಂದು ಸಾಕಷ್ಟು ಜನರು ಭಾವಿಸಿದ್ದಾರೆ.

ಮೊಬೈಲ್‌ನಲ್ಲಂತೂ ಜನರು ಗೂಗಲ್ ಹೊರತಾಗಿ ಬೇರೆ ಸರ್ಚ್ ಇಂಜಿನ್ ಬಳಸುವುದೇ ಕಡಿಮೆ. ಕಳೆದ ದಶಕಗಳಲ್ಲಿ ಗೂಗಲ್ ಜೀವನದ ಅವಿಭಾಜ್ಯ ಅಂಗದಂತಾಗಿದೆ. ಈ ಗೂಗಲ್ ಪ್ರಾಬಲ್ಯ ಸ್ವಸಾಮರ್ಥ್ಯದಿಂದ ಬಂದಿದೆಯೋ? ಅಥವಾ ಬೇರೆ ಕಂಪನಿಗಳಿಗೆ ಸರಿಯಾದ ಅವಕಾಶ ನೀಡದೇ ಬಂದಿದೆಯೋ? ಎಂಬ ಬಗ್ಗೆ ಕೆಲವರು ಪ್ರಶ್ನಿಸುತ್ತಿದ್ದಾರೆ.

ಈ ಕಾರಣಕ್ಕಾಗಿಯೇ ಅಮೆರಿಕದಲ್ಲಿ ಗೂಗಲ್ ಕುರಿತು ವಿಚಾರಣೆ ನಡೆಸಲಾಗುತ್ತಿದೆ. ಇದು ಕಳೆದ ಕಾಲು ಶತಮಾನದ ಅತಿ ದೊಡ್ಡ ವಿಶ್ವಾಸ ವಿರೋಧಿ ಪ್ರಕರಣ ಎಂದು ಬಣ್ಣಿಸಲಾಗುತ್ತಿದೆ. ಈ



ಪ್ರಕರಣದ ತೀರ್ಪು ಮುಂದಿನ ದಿನಗಳಲ್ಲಿ ಅಂತರ್ಜಾಲ ಬಳಕೆಯ ವಿಧಾನವನ್ನೇ ಬದಲಿಸಬಹುದು ಎಂದೂ ಹೇಳಲಾಗುತ್ತಿದೆ.

ಗೂಗಲ್ ಕಾರ್ಯನಿರ್ವಹಣೆ ಪದ್ಧತಿ ಕುರಿತು ಹತ್ತು ವಾರಗಳ ವಿಚಾರಣೆ ಆರಂಭವಾಗಿದೆ. ವಿಚಾರಣೆ ಈಗ ಮಧ್ಯಾವಧಿಗೆ ತಲುಪಿದೆ. ಅಮೆರಿಕದ ಜಿಲ್ಲಾ ನ್ಯಾಯಮೂರ್ತಿ ಅಮಿತ್ ಮೆಹ್ತಾ ಅವರು ಗೂಗಲ್ ಸರ್ಚ್ ಕುರಿತು ಅಂತಿಮ ನಿರ್ಧಾರ ತೆಗೆದುಕೊಳ್ಳಲಿದ್ದಾರೆ.

ಗೂಗಲ್ ಅಕ್ರಮವಾಗಿ ಇಂಟರ್‌ನೆಟ್ ಸರ್ಚ್‌ನಲ್ಲಿ ಏಕಸ್ವಾಮ್ಯ ಸಾಧಿಸಿದೆ ಎಂದು ಮೆಹ್ತ ತೀರ್ಪು ನೀಡಿದರೆ, ಇದು ಗ್ರಾಹಕರಿಗೆ ಹಾಗೂ ಉದ್ಯಮಗಳಿಗೆ ಹೊಸ ಅವಕಾಶದ ಬಾಗಿಲು ತೆರೆಯಲಿದೆ. ತೀರ್ಪು ಆಪಲ್ ಹಾಗೂ ಗೂಗಲ್ ಮುಂತಾದ ಕಂಪನಿಗಳು ನಿರ್ಮಿಸಿರುವ ಡಿಜಿಟಲ್ ಗೋಡೆ ಒಡೆಯಬಹುದಾಗಿದೆ. ಇದು ಅಂತರ್ಜಾಲ ಬಳಕೆಯ ವಿಧಾನವನ್ನೇ ಬದಲಿಸುವ ಸಾಧ್ಯತೆಯೂ ಇದೆ.

ನ್ಯಾಯಮೂರ್ತಿಗಳ ತೀರ್ಪಿನ ಕಾರಣದಿಂದ ನವೋದ್ಯಮಗಳು ಹಾಗೂ ಮೂರನೇ ಪಾರ್ಟಿ ಸ್ಪರ್ಧೆಯ ಯುಗವೇ ಆರಂಭವಾಗಬಹುದು. ಗೂಗಲ್ ಮೇಲೆ ಹೆಚ್ಚಿನ ಸ್ಪರ್ಧೆಯ ಒತ್ತಡ ಬೀಳಬಹುದು. ಇದು ಉತ್ತಮ ಗುಣಮಟ್ಟದ ಆನ್‌ಲೈನ್ ಸೇವೆಗಳಿಗೂ ದಾರಿ ಮಾಡಿಕೊಡಬಹುದು ಎಂದು ಯೆಲ್ಪ್ ಕಂಪನಿಯ ಸಾರ್ವಜನಿಕ ನೀತಿಯ ಹಿರಿಯ ಉಪಾಧ್ಯಕ್ಷ ಲೂಥರ್ ಲೊವೆ ಹೇಳಿದ್ದಾರೆ.

ಆನ್‌ಲೈನ್ ಉದ್ಯಮ ಪರಾಮರ್ಶೆ ಕಂಪನಿಯಾದ ಯೆಲ್ಪ್, ಕಳೆದ ಹಲವಾರು ವರ್ಷಗಳಿಂದ ಗೂಗಲ್ ನೀತಿಗಳನ್ನು ಕಟುವಾಗಿ ಟೀಕಿಸುತ್ತಾ ಬಂದಿದೆ. ಗೂಗಲ್ ಸರ್ಚ್, ಸ್ವಂತ ಸೇವೆಗಳ ಪರವಾಗಿದೆ ಎಂದು ಯೆಲ್ಪ್ ಆರೋಪಿಸಿದೆ. ಈ ಬಗ್ಗೆ ಹೇಳಿಕೆ ನೀಡಿದ್ದ ಮೈಕ್ರೋಸಾಫ್ಟ್ ಸಿಇಒ ಸತ್ಯ ನಡೆಲ್ಲ, ಗೂಗಲ್ **(2ನೇ ಪುಟಕ್ಕೆ)**



# ಟೆನ್ನಿಸ್: ಬಾಗ್ಡನ್ ಬೊಬ್ರಾವ್ ಚಾಂಪಿಯನ್

ದಾವಣಗೆರೆ, ಅ.29- ಇಲ್ಲಿನ ಹೈಸ್ಕೂಲ್ ಮೈದಾನದಲ್ಲಿನ ಟೆನ್ನಿಸ್ ಕ್ರೀಡಾಂಗಣದಲ್ಲಿ ನಡೆದ ಐಟಿಎಫ್ ದಾವಣಗೆರೆ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಬಾಗ್ಡಾನ್ ಬೊಬ್ರಾವ್ ಚಾಂಪಿಯನ್ ಶಿಪ್ ಮುಡಿಗೇರಿಸಿ ಕೊಂಡರು.

ಭಾನುವಾರ ಬೆಳಿಗ್ಗೆ 10.30ಕ್ಕೆ ಆರಂಭವಾದ ಅಂತಿಮ ಹಣಾಹಣಿಯಲ್ಲಿ ಅಮೆರಿಕಾದ ನಿಕ್ ಚಾಪೆಲ್ ವಿರುದ್ಧ ಬಾಗ್ಡಾನ್ 6-3, 7-6 ನೇರ ಸೆಟ್ ಗಳ ಜಯಗಳಿಸುವ ಮೂಲಕ ಆರನೇ ಐಟಿಎಫ್ ಪ್ರಶಸ್ತಿ ಪಡೆದರು.

ಸೆಮಿಫೈನಲ್ ನಲ್ಲಿ ಬೊಬ್ರಾವ್ ಭಾರತದ ರಾಮಕುಮಾರ್ ರಾಮನಾಥನ್ ವಿರುದ್ಧ 6-4, 7-6 ರಲ್ಲಿ ಗೆದ್ದಿದ್ದರು.

ಅಮೆರಿಕಾದ ನಿಕ್ ಚಾಪೆಲ್ ಭಾರತದ ವರೇ ಆದ ನಿಕಿ ಕಲಿಯಂಡ ಪೂಣಚ್ಚ ವಿರುದ್ಧ 6-3, 6-2 ರಲ್ಲಿ ಗೆಲುವು ಸಾಧಿಸಿದ್ದರು.

ಡಬಲ್ ಜೋಡಿಯಾಗಿರುವ ನಿಕ್ ಚಾಪೆಲ್ ಮತ್ತು ಬೊಬ್ರಾವ್ ನಡುವೆ ಪ್ರಶಸ್ತಿಗಾಗಿ ರೋಚಕ ಹಣಾಹಣಿ ನಡೆಯಿತು. ಪಾಯಿಂಟ್ ಗಾಗಿ ಇಬ್ಬರೂ ಬಲದ ಹೋರಾಟ ನಡೆಸಿದರು. ಅಂತಿಮವಾಗಿ ಮೊದಲ ಸೆಟ್ ನ್ನು 6-3 ರಲ್ಲಿ ಬೊಬ್ರಾವ್ ಗೆದ್ದರು.

ಎರಡನೇ ಸೆಟ್ ನಲ್ಲಿ ನಿಕ್ ಚಾಪೆಲ್ ನಿರೀಕ್ಷೆಗೂ ಮೀರಿದ ಹೋರಾಟ ನಡೆಸಿದರು. ಪಂದ್ಯ ಟ್ರೈಬೇಕರ್ ವರೆಗೆ ಸಾಗಿತು. ಕೊನೆಗೆ ಬೊಬ್ರಾವ್ 7-6 ರಲ್ಲಿ ಸೆಟ್ ಜೊತೆಗೆ ಪಂದ್ಯ ಗೆದ್ದರು. 1.38 ಗಂಟೆಗಳ ರೋಚಕ ಪೈಪೋಟಿ ಟೆನ್ನಿಸ್ ಅಭಿಮಾನಿಗಳ ಮನಸೂರೆಗೊಂಡಿತು.

# ಮಹಾಕಾವ್ಯಗಳನ್ನು ಬರೆದವರೇ ಹಿಂದುಳಿದ ಋಷಿ-ಮುನಿಗಳು

ದಾವಣಗೆರೆ, ಅ. 29- ಹಿಂದುಳಿದ ಜನಾಂಗದವರೇ ರಾಮಾಯಣ-ಮಹಾಭಾರತದಂತಹ ಮಹಾಕಾವ್ಯ ಬರೆದವರು. ಇಂತಹ ಮಹಾಕಾವ್ಯಗಳ ಮೂಲಕ ಸಮಾಜಕ್ಕೆ ಮಾರ್ಗದರ್ಶನ ಮಾಡಲಾಗಿದೆ ಎಂದು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಪುರಿ ಸ್ವಾಮೀಜಿ ಹೇಳಿದರು.

ನಗರದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಮಹರ್ಷಿ ವಾಲ್ಮೀಕಿ ಪ್ರತಿಷ್ಠಾನ ಹಾಗೂ ವಾಲ್ಮೀಕಿ ಜಯಂತ್ಯುತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ 11 ದಿನಗಳ ಸಾರ್ವಜನಿಕ ವಾಲ್ಮೀಕಿ ಜಯಂತ್ಯುತ್ಸವವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದರು.



ದಾವಣಗೆರೆ ನಗರದ ಪ್ರಮುಖ ಬೀದಿಗಳಲ್ಲಿ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಮಹರ್ಷಿ ವಾಲ್ಮೀಕಿ ಭಾವಚಿತ್ರದ ಬೃಹತ್ ಮೆರವಣಿಗೆ ನಡೆಯಿತು.

ಧರ್ಮ ಎಂದರೆ ತ್ಯಾಗ. ತ್ಯಾಗದ ಮೂಲಕವೇ ಧರ್ಮ ಸ್ಥಾಪನೆಯಾಗುತ್ತದೆ ಎಂದು ವಾಲ್ಮೀಕಿ ಋಷಿಗಳು ಹೇಳಿದ್ದಾರೆ. ರಾಮಾಯಣದಲ್ಲಿ ಅಣ್ಣ-ತಮ್ಮಂದಿರ ತ್ಯಾಗವಿದ್ದರೆ, ಮಹಾಭಾರತದಲ್ಲಿ ಅಣ್ಣ-ತಮ್ಮಂದಿರಲ್ಲಿ ಜಗಳವಿತ್ತು. ಈ ಎರಡು ವ್ಯತ್ಯಸಗಳಿರುವ ಮಹಾಕಾವ್ಯ ಬರೆದವರೇ ಹಿಂದುಳಿದ ಜನಾಂಗದವರು ಎಂದರು.

ವಾಲ್ಮೀಕಿ ಮತ್ತು ವ್ಯಾಸ ಮುನಿಗಳು ತಮ್ಮ ಮಹಾನ್ ಗ್ರಂಥಗಳ ಮೂಲಕ ಸಮಾಜಕ್ಕೆ ಮಾರ್ಗದರ್ಶನ ನೀಡಿದ್ದಾರೆ. ಐದು ಸಾವಿರ ವರ್ಷಗಳ ಹಿಂದೆಯೇ ಧಾರ್ಮಿಕ ಸಂವಿಧಾನ ಬರೆದಿದ್ದಾರೆ. ಅಂಥವರ ಜಯಂತಿ ಆಚರಣೆ ಮಾಡುವುದು ಎಲ್ಲರ ಸೌಭಾಗ್ಯವೇ ಸರಿ ಎಂದು ಹೇಳಿದರು.

11 ದಿನಗಳ ಕಾಲ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಆಚರಿಸುತ್ತಿರುವುದು ಸ್ವಾಗತಾರ್ಹ. ಇಂತಹ ಕಾರ್ಯಕ್ರಮಗಳಿಗೆ ಶ್ರೀಮಠದ ಸಂಪೂರ್ಣ ಸಹಕಾರವಿದೆ ಎಂದು ತಿಳಿಸಿದರು.

ಹಿಂದಿನ ವರ್ಷಕ್ಕಿಂತ ಈ ಬಾರಿ ವಾಲ್ಮೀಕಿ ಜಯಂತ್ಯುತ್ಸವ ವಿಜೃಂಭಣೆಯಿಂದ ಜರುಗಿದೆ. ಮುಂಬರುವ ದಿನಗಳಲ್ಲಿ ಜಯಂತ್ಯುತ್ಸವ ಇನ್ನೂ ವಿಶಾಲ ರೂಪ ಪಡೆಯಲಿದೆ ಎಂದರು.

ಕ್ಷೀಣಿಸುತ್ತಿರುವ ಜಾನಪದ ಕಲೆ ಮತ್ತು ಕಲಾವಿದರನ್ನು ಪೋಷಿಸುವ ಪ್ರಯತ್ನವನ್ನು ಜಯಂತಿ ಮೂಲಕ ಮಾಡುತ್ತಿರುವುದು ಸಂತಸದ ವಿಚಾರವಾಗಿದೆ. ದಾವಣಗೆರೆಯ ಕಾರ್ಯಕ್ರಮ ಇಡೀ ನಾಡಿಗೆ ಮಾದರಿಯಾಗಲಿ ಎಂದು ಹೇಳಿದರು.

ಬೆಂಗಳೂರಿನಲ್ಲಿ ನಡೆದ **(2ನೇ ಪುಟಕ್ಕೆ)**

# ಕೇರಳದ ಕ್ರಿಶ್ಚಿಯನ್ ಕೇಂದ್ರದಲ್ಲಿ ಸರಣಿ ಸ್ಫೋಟ : ಇಬ್ಬರ ಸಾವು

ಕೊಚ್ಚಿ, ಅ. 29 – ಕೇರಳದ ಕಲಮಶೇರಿಯಲ್ಲಿರುವ ಕ್ರಿಶ್ಚಿಯನ್ ಧಾರ್ಮಿಕ ಸಮುದಾಯ ಭವನವೊಂದರಲ್ಲಿ ನಡೆಸಲಾದ ಸರಣಿ ಬಾಂಬ್ ಸ್ಫೋಟದಲ್ಲಿ ಇಬ್ಬರು ಮಹಿಳೆಯರು ಸಾವನ್ನಪ್ಪಿದ್ದಾರೆ ಹಾಗೂ 51 ಜನ ಗಾಯಗೊಂಡಿದ್ದಾರೆ.

ಕಲಮಶೇರಿಯ ಅಂತರರಾಷ್ಟ್ರೀಯ ಕೇಂದ್ರದಲ್ಲಿ ಜೆಹೋವಾಸ್ ವಿಟ್ನೆಸಸ್ ಕ್ರಿಶ್ಚಿಯನ್ ಗುಂಪಿನವರು ಮೂರು ದಿನಗಳ ಪ್ರಾರ್ಥನೆಗಾಗಿ ಸೇರಿದ್ದರು. ಈ ಸಂದರ್ಭದಲ್ಲಿ ಸ್ಫೋಟ ನಡೆಸಲಾಗಿದೆ.



ಸ್ಫೋಟ ನಡೆದ ಕೆಲ ಗಂಟೆಗಳ ನಂತರ ಜೆಹೋವಾಸ್ ವಿಟ್ನೆಸಸ್ ಸಂಘಟನೆಗೆ ಸೇರಿದವನೆಂದು ಹೇಳಿಕೊಳ್ಳುವ ವ್ಯಕ್ತಿಯೋರ್ವ, ಸ್ಫೋಟದ ಹೊಣೆ ಹೊತ್ತುಕೊಂಡು ಪೊಲೀಸರ ಎದುರು ಶರಣಾಗಿದ್ದಾನೆ.

ಸ್ಫೋಟದಲ್ಲಿ 51 ಜನ ಗಾಯಗೊಂಡಿದ್ದಾರೆ. ಇವರ ಪೈಕಿ 30 ಜನರನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ ಹಾಗೂ ಇವರಲ್ಲಿ 18 ಜನ ಐ.ಸಿ.ಯು.ನಲ್ಲಿದ್ದಾರೆ ಎಂದು ಕೇರಳದ ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ.

ಡಾಮಿನಿಕ್ ಮಾರ್ಟಿನ್ ಎಂಬ ವ್ಯಕ್ತಿ ಪೊಲೀಸರ ಎದುರು ಶರಣಾಗಿದ್ದು, ದಾಳಿಯ ಹೊಣೆ ಹೊತ್ತುಕೊಂಡಿದ್ದಾನೆ ಎಂದು ಎ.ಡಿ.ಜಿ.ಪಿ. (ಕಾನೂನು ಹಾಗೂ ಸುವ್ಯವಸ್ಥೆ) ಎಂ.ಆರ್. ಅಜಿತ್ ಕುಮಾರ್ ತಿಳಿಸಿದ್ದಾರೆ.

ಸ್ಫೋಟಕ್ಕೆ ಸಂಬಂಧಿಸಿದಂತೆ ವ್ಯಕ್ತಿಯಿಂದ ಹಲವು ಸಾಕ್ಷಿಗಳು ದೊರೆತಿವೆ. ಸ್ಫೋಟ ನಡೆಸಿದ್ದರ ಹಿಂದಿರುವ ಕಾರಣಗಳ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಪೊಲೀಸರಿಗೆ ಶರಣಾಗುವುದಕ್ಕೆ ಮುಂಚೆ ಈ ವ್ಯಕ್ತಿ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ಸಂದೇಶವೊಂದನ್ನು ಹರಿ ಬಿಟ್ಟು, ಈ ಕೃತ್ಯ ಎಸಗಿದ್ದಕ್ಕೆ ಕಾರಣಗಳನ್ನು ತಿಳಿಸಿದ್ದ. **(2ನೇ ಪುಟಕ್ಕೆ)**

# ಫ್ರಾನ್ಸ್ ಮಹಿಳೆಯರಿಗೆ ಗರ್ಭಪಾತದ ಹಕ್ಕು ನೀಡಲು ಕ್ರಮ : ಮೆಕ್ರಾನ್

ಪ್ಯಾರಿಸ್, ಅ. 29-ಮುಂದಿನ ವರ್ಷ ಫ್ರಾನ್ಸ್ ಸಂವಿಧಾನದಲ್ಲಿ ಮಹಿಳೆಯರಿಗೆ ಗರ್ಭಪಾತದ ಹಕ್ಕು ನೀಡುವುದಾಗಿ ಅಧ್ಯಕ್ಷ ಎಮ್ಯಾನ್ಯುಯಲ್ ಮೆಕ್ರಾನ್ ಭರವಸೆ ನೀಡಿದ್ದಾರೆ.

ಈ ವರ್ಷದ ಅಂತ್ಯಕ್ಕೆ ಗರ್ಭಪಾತದ ಹಕ್ಕು ನೀಡುವ ಮಸೂದೆಯನ್ನು ಸಂಪುಟದ ಎದುರು ತರಲಾಗುವುದು. 2024ರಲ್ಲಿ ಮಹಿಳೆಯರಿಗೆ ಈ ಕುರಿತ ಸ್ವಾತಂತ್ರ್ಯ ನೀಡಲಾಗುವುದು. ಇದು ವಾಪಸ್ ಪಡೆಯಲಾಗದ ಕ್ರಮವಾಗಿರಲಿದೆ ಎಂದು ಮೆಕ್ರಾನ್ ಹೇಳಿದ್ದಾರೆ.

1975ರಲ್ಲಿ ಗರ್ಭಪಾತವನ್ನು ಅಪರಾಧ ಮುಕ್ತಗೊಳಿಸಲಾಗಿತ್ತು. ಆದರೆ, ಸಂವಿಧಾನದಲ್ಲಿ ಗರ್ಭಪಾತದ ಹಕ್ಕಿನ ಗ್ಯಾರಂಟಿ ಇಲ್ಲ. ಅಮೆರಿಕದ ಸುಪ್ರೀಂ ಕೋರ್ಟ್ 50 ವರ್ಷಗಳ ಹಳೆಯ **(2ನೇ ಪುಟಕ್ಕೆ)**

# ಗಾಜಾದಲ್ಲಿ ಉಲ್ಬಣಿಸಿದ ಮಾನವ ಬಿಕ್ಕಟ್ಟು ವಿಶ್ವಸಂಸ್ಥೆಯ ಗೋದಾಮುಗಳ ಲೂಟಿ

ಗಾಜಾ, ಅ. 29- ಗಾಜಾದಲ್ಲಿ ಮಾನವ ಬಿಕ್ಕಟ್ಟು ಉಲ್ಬಣಿಸಿದ್ದು, ಸಾವಿರಾರು ಜನರು ವಿಶ್ವಸಂಸ್ಥೆಯ ಗೋದಾಮುಗಳಿಂದ ಸರಕುಗಳನ್ನು ಲೂಟಿ ಮಾಡಿದ್ದಾರೆ.

ಯುದ್ಧ ಮೂರನೇ ವಾರಕ್ಕೆ ಕಾಲಿಡುತ್ತಿರುವಂತೆಯೇ ಹತಾಶರಾಗಿರುವ ಜನರು ಹಿಟ್ಟು ಸೇರಿದಂತೆ ಮೂಲ ಅಗತ್ಯ ವಸ್ತುಗಳನ್ನು ಲೂಟಿ ಮಾಡಿದ್ದಾರೆ ಎಂದು ವಿಶ್ವಸಂಸ್ಥೆ ತಿಳಿಸಿದೆ. ಗೋದಾಮುಗಳ ಲೂಟಿ ಚಿಂತೆಯ ಸಂಕೇತವಾಗಿದೆ. ನಾಗರಿಕ ವ್ಯವಸ್ಥೆ ಕುಸಿಯಲು ಆರಂಭವಾಗಿದೆ. ಜನರು ಬೆದರಿದ್ದಾರೆ ಹಾಗೂ ಹತಾಶರಾಗಿದ್ದಾರೆ ಎಂದು ವಿಶ್ವಸಂಸ್ಥೆಯ ಪ್ಯಾಲೆಸ್ತೇನ್ ನೆರವು ವಿಭಾಗ ತಿಳಿಸಿದೆ.

ಹಮಾಸ್ ಉಗ್ರರು ಇಸ್ರೇಲ್ ಮೇಲೆ ಭೀಕರ ದಾಳಿ ನಡೆಸಿದ್ದರು. ಇದಕ್ಕೆ ಪ್ರತಿಯಾಗಿ ಗಾಜಾದಲ್ಲಿ ಇಸ್ರೇಲ್ ಸೈನ್ಯ ಕಾರ್ಯಾಚರಣೆ ನಡೆಸುತ್ತಿದೆ. ವೈಮಾನಿಕ **(2ನೇ ಪುಟಕ್ಕೆ)**

# ಬಾಂಗ್ಲಾದಲ್ಲಿ ಉಲ್ಬಣಿಸಿದ ಸಂಘರ್ಷ, ಮೂವರ ಸಾವು

ಢಾಕಾ, ಅ. 29 – ಬಾಂಗ್ಲಾದೇಶದಲ್ಲಿ ಆಡಳಿತಾರೂಢ ಅವಾಮಿ ಲೀಗ್ ಹಾಗೂ ಪ್ರತಿಪಕ್ಷವಾದ ಬಿ.ಎನ್.ಪಿ. ಬೆಂಬಲಿಗರ ನಡುವೆ ನಡೆದ ಸಂಘರ್ಷದಲ್ಲಿ ಮೂವರು ಸಾವನ್ನಪ್ಪಿದ್ದಾರೆ. ಜನವರಿಯಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದೆ ಎನ್ನಲಾಗುತ್ತಿದ್ದು, ಇದು ರಾಜಕೀಯ ಸಂಘರ್ಷ ತೀವ್ರವಾಗಲು ಕಾರಣವಾಗಿದೆ.

ಮಾಜಿ ಪ್ರಧಾನ ಮಂತ್ರಿ ಖಲೀದಾ ಜಿಯಾ ಅವರ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿ.ಎನ್.ಪಿ.) ರಾಷ್ಟ್ರವ್ಯಾಪಿ ಬಂದ್‌ಗೆ ಕರೆ ನೀಡಿತ್ತು. ಪೊಲೀಸರು ಬಲವಂತವಾಗಿ ಪಕ್ಷದ ಸಮಾವೇಶ ತಡೆದಿದ್ದಾರೆ ಎಂದು ಬಿ.ಎನ್.ಪಿ. ಆರೋಪಿಸಿತ್ತು.

ಬಂದ್ ವೇಳೆ ನಡೆದ ಸಂಘರ್ಷದಲ್ಲಿ ಬಿ.ಎನ್.ಪಿ.ಯ ಓರ್ವ ಕಾರ್ಯಕರ್ತ ಬಸ್ ಒಂದಕ್ಕೆ ಬೆಂಕಿ ಹಚ್ಚಿದ್ದ. ಅಲ್ಲಿಂದ ತಪ್ಪಿಸಿಕೊಂಡು ಹೋಗುವ ಪ್ರಯತ್ನದಲ್ಲಿದ್ದಾಗ ನಿರ್ಮಾಣ ಹಂತದಲ್ಲಿದ್ದ ಕಟ್ಟಡದ ಮೇಲಿಂದ ಬಿದ್ದು ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಆದರೆ, ಕಾರ್ಯಕರ್ತ ಸಮಾವೇಶದಿಂದ ವಾಪಸ್ ಬರುವಾಗ ಅವಾಮಿ ಲೀಗ್‌ನ ಕಾರ್ಯಕರ್ತರು ಎಳೆದೊಯ್ದು ಹತ್ಯೆ ಮಾಡಿದ್ದಾರೆ ಎಂದು ಬಿ.ಎನ್.ಪಿ. ಆರೋಪಿಸಿದೆ.

ಇನ್ನೋರ್ವ ಕಾರ್ಯಕರ್ತ ಲಲ್ಮೊನಿಹಾರ್ತ್ ಜಿಲ್ಲೆಯಲ್ಲಿ ಪ್ರತಿಭಟನೆಯ ವೇಳೆ ನಡೆದ ಸಂಘರ್ಷದಲ್ಲಿ ಸಾವನ್ನಪ್ಪಿದ್ದಾನೆ **(2ನೇ ಪುಟಕ್ಕೆ)**

# ವಿದ್ಯುತ್ ಉತ್ಪಾದನೆ ಮೇಲೆ ತೆರಿಗೆ ಬೇಡ : ಕೇಂದ್ರ

ನವದೆಹಲಿ, ಅ. 29 – ವಿದ್ಯುತ್ ಉತ್ಪಾದನೆಯ ಮೇಲೆ ಯಾವುದೇ ತೆರಿಗೆ ಇಲ್ಲವೇ ಸುಂಕ ವಿಧಿಸದಂತೆ ರಾಜ್ಯಗಳಿಗೆ ಕೇಂದ್ರ ಸರ್ಕಾರ ತಿಳಿಸಿದೆ. ಕೇಂದ್ರ ವಿದ್ಯುತ್ ಸಚಿವಾಲಯ ಅಕ್ಟೋಬರ್ 25ರಂದು ಸುತ್ತೋಲೆಯೊಂದನ್ನು ಹೊರಡಿಸಿದ್ದು, ಕಲ್ಲಿದ್ದಲು, ಜಲ ವಿದ್ಯುತ್, ಪವನ ಹಾಗೂ ಸೌರ ಶಕ್ತಿ ಸೇರಿದಂತೆ ಯಾವುದೇ ಮೂಲದಿಂದ ವಿದ್ಯುತ್ ಉತ್ಪಾದಿಸಿದರೂ ತೆರಿಗೆ ವಿಧಿಸಬಾರದು ಎಂದು ತಿಳಿಸಿದೆ. ಕೆಲ ರಾಜ್ಯಗಳು ಅಭಿವೃದ್ಧಿ ಶುಲ್ಕ, ನಿಧಿ ಇತ್ಯಾದಿಗಳ ಹೆಸರಿನಲ್ಲಿ ಕೆಲ ಮೂಲಗಳಿಂದ ಉತ್ಪಾದಿಸುವ ವಿದ್ಯುತ್ ಮೇಲೆ ತೆರಿಗೆ ಹೇರುತ್ತಿವೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಸುತ್ತೋಲೆ ಕಳಿಸಿದೆ.

# ನಿಷ್ಠಾವಂತರಿಗೆ ಟಿಕೆಟ್ ನೀಡಲು ಬಿಜೆಪಿಯ ಸಮಾನ ಮನಸ್ಕರ ಸಭೆ ಆಗ್ರಹ

ದಾವಣಗೆರೆ, ಅ.29- ಬರಲಿರುವ ಲೋಕಸಭೆ ಚುನಾವಣೆಯಲ್ಲಿ ದಾವಣಗೆರೆ ಕ್ಷೇತ್ರಕ್ಕೆ ಪಕ್ಷದ ಮೂಲ ಮತ್ತು ಪಕ್ಷ ನಿಷ್ಠೆ ಹೊಂದಿರುವ ಕಾರ್ಯಕರ್ತರಿಗೆ ಟಿಕೆಟ್ ನೀಡಬೇಕು ಎಂದು ಬಿಜೆಪಿಯ ಹಿರಿಯ ಮತ್ತು ಕಿರಿಯ ಸಮಾನ ಮನಸ್ಕರ ಸಭೆಯಲ್ಲಿ ಪಕ್ಷದ ವರಿಷ್ಠರನ್ನು ಆಗ್ರಹ ಪಡಿಸಲಾಯಿತು.

ನಗರದ ಪಿ.ಬಿ. ರಸ್ತೆಯ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ ನಡೆದ ಈ ಸಭೆಯಲ್ಲಿ, ಪಕ್ಷದ ಟಿಕೆಟ್ ಅನ್ನು ಯಾರಿಗೇ ಕೊಟ್ಟರೂ ಅವರ ಗೆಲುವಿಗೆ ಶ್ರಮಿಸುತ್ತೇವೆ. ಆದರೆ, ಟಿಕೆಟ್ ಪಡೆದಿರುವ ವ್ಯಕ್ತಿ ಮೂಲ ಬಿಜೆಪಿ ಮತ್ತು ನಿಷ್ಠಾವಂತ ಕಾರ್ಯಕರ್ತರಾಗಿರಬೇಕು ಎಂಬ ಧ್ಯೇಯ ವಾಕ್ಯ ಈ ಸಭೆಯದ್ದಾಗಿದೆ ಎಂದು ಕಾರ್ಯಕರ್ತರು ಹೇಳಿದರು.

ಸಭೆಯಲ್ಲಿ ಮಾತನಾಡಿದ ಬಿಜೆಪಿ ಹಿರಿಯ ಮುಖಂಡರುಗಳಾದ ಹೆಚ್.ಎಸ್. ಲಿಂಗರಾಜು, ಕೃಷ್ಣಮೂರ್ತಿ ಪವಾರ್



ಸೇರಿದಂತೆ ಹಲವರು, ಪಕ್ಷದ ಟಿಕೆಟ್ ಪಡೆದು ಗೆದ್ದವರು, ಪಕ್ಷಕ್ಕಾಗಿ ತ್ಯಾಗ ಮಾಡಿದವರು ಮತ್ತು ದುಡಿದವರನ್ನು ಮೂಲೆ ಗುಂಪಾಗಿ ಮಾಡಿದ್ದಾರೆ ಎಂದು ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರ ವಿರುದ್ಧ ಪರೋಕ್ಷವಾಗಿ ಕಿಡಿಕಾರಿದ್ದಾರೆ.

ಬಿಜೆಪಿಯನ್ನು ಅಧಿಕಾರಕ್ಕೆ ತರುವಲ್ಲಿ ಸುಮಾರು ವರ್ಷಗಳಿಂದ ನಿಷ್ಠಾವಂತ ಕಾರ್ಯಕರ್ತರಾಗಿ ದುಡಿದಿದ್ದಲ್ಲದೇ, ಜೈಲಿಗೂ ಹೋಗಿ ಬಂದಿದ್ದಾರೆ. ಇಂತಹವರನ್ನು ಬದಿಗೊತ್ತಿ ನಿನ್ನೆ - ಮೊನ್ನೆ ಬಂದವರಿಗೆ ಮತ್ತು ಪಕ್ಷದ ತತ್ವ - ಸಿದ್ಧಾಂತ ಗೊತ್ತಿಲ್ಲದವರಿಗೆ ಮಣೆ ಹಾಕಲಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಮತ್ತು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಇಬ್ಬರೂ ಪಕ್ಷಕ್ಕೆ ಹಾನಿಯನ್ನುಂಟು ಮಾಡುವಂತಹ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಇವರ ವೈಯಕ್ತಿಕ ಹೇಳಿಕೆಗಳೇ ಪಕ್ಷಕ್ಕೆ ಕೆಟ್ಟ ಹೆಸರು ಬರುವಂತಾಗುತ್ತಿವೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.


ವ್ಯಕ್ತಿ ನಿಷ್ಠೆಗಿಂತ ಪಕ್ಷ ನಿಷ್ಠೆ ಮುಖ್ಯ. ಈ ನಿಟ್ಟಿನಲ್ಲಿ ಸಾಮಾನ್ಯ ಕಾರ್ಯಕರ್ತರನ್ನು ಕಡೆಗಣಿಸಿದ ಪರಿಣಾಮ, ಈಚೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ಪಕ್ಷ ಸೋಲು ಕಾಣಬೇಕಾಯಿತು. ಇದೇ ಪರಿಸ್ಥಿತಿ ಮುಂದುವರೆದಲ್ಲಿ ಲೋಕಸಭಾ ಚುನಾವಣೆಯಲ್ಲೂ ಸೋಲು ಮರುಕಳಿಸುವುದು ಕಟ್ಟಿಟ್ಟ ಬುತ್ತಿ ಎಂದು ಅವರು ಪಕ್ಷದ ವರಿಷ್ಠರನ್ನು ಎಚ್ಚರಿಸಿದರು.

ಪಕ್ಷ ಮತ್ತು ದೇಶವನ್ನು ಮುನ್ನಡೆಸುವಲ್ಲಿ ನರೇಂದ್ರ ಮೋದಿಯವರ ಶ್ರಮ ಅಪಾರ. ಅವರು ಮತ್ತೆ ಪ್ರಧಾನ ಮಂತ್ರಿಯಾಗಬೇಕು. ಈ ದಿಸೆಯಲ್ಲಿ ಮತ್ತೊಮ್ಮೆ ಬಿಜೆಪಿ, ಮಗದೊಮ್ಮೆ ನಮೋ ಪ್ರಧಾನಿಯಾಗಲು ಕಂಕಣಬದ್ಧರಾಗಿ ದುಡಿಯುತ್ತೇವೆ ಎಂದು ಅವರು ಪಣ ತೊಟ್ಟರು.

ಕೆ.ಎನ್. ಓಂಕಾರಪ್ಪ, ಪಿ.ಎಸ್. ಜಯಣ್ಣ, ಶ್ರೀಮತಿ ಸರೋಜ ದೀಕ್ಷಿತ್, ಆರ್. ಪ್ರತಾಪ್, ಗೋಪಾಲರಾವ್ ಸಾವಂತ್, ಗುಬ್ಬಿ ಬಸವರಾಜ್, ಮಟ್ಟಿಕಲ್ ಪ್ರದೀಪ್, ಬಾಳೆಕಾಯಿ ಉಮಾಪತಿ, ವಕೀಲ ರಾಘವೇಂದ್ರ, ನಿಂಗರಾಜ್ ಹಾವನೂರು, ಚಂದ್ರಪ್ಪ ಹಾಲೇಕಲ್ಲು, ಮೂರ್ತಿ, ಸಂತೋಷ್, ರಾಮಚಂದ್ರ, ಹನುಮಂತಪ್ಪ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.


|| ಶ್ರೀ ಲಕ್ಷ್ಮಿರಂಗನಾಥ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ಜನನ : 03.04.1939, ನಿಧನ : 22.10.2023

ದಾವಣಗೆರೆ ಎಂ.ಸಿ.ಸಿ. ಬಿ ಬ್ಲಾಕ್, 11ನೇ ಮೇನ್, 3ನೇ ಕ್ರಾಸ್ ವಾಸಿ
**ಶ್ರೀಮತಿ ತಿಪ್ಪಮ್ಮ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 22.10.2023ನೇ ಭಾನುವಾರ, ಬೆಳಿಗ್ಗೆ 6.00 ಕ್ಕೆ ನನ್ನ ಪೂಜ್ಯ ಪತಿಯವರಾದ
**ಶ್ರೀ ಹಿಮಂತರಾಜ ಹೆಚ್.**
ನಿವೃತ್ತ ಗುಮಾಸ್ತರು, ಸಬ್‌ರಿಜಿಸ್ಟ್ರಾರ್ ಆಫೀಸ್, ದಾವಣಗೆರೆ
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 30.10.2023ನೇ ಸೋಮವಾರ ಬೆಳಿಗ್ಗೆ 10.00 ಗಂಟೆಗೆ ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ :
**ಶ್ರೀಮತಿ ತಿಪ್ಪಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಬಂಧು ಮಿತ್ರರು.**
ಮೊ : 81238 95187, 80504 03353

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

# ಪಂಚಮಸಾಲಿಗಳು ಹೃದಯ ವೈಶಾಲ್ಯತೆಯ ಸ್ವಾಭಿಮಾನಿಗಳು

## ನ್ಯಾಮತಿಯಲ್ಲಿನ ಪಂಚಮಸಾಲಿ ಸಮಾಜದ ಕಾರ್ಯಕ್ರಮದಲ್ಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಬಣ್ಣನೆ



ನ್ಯಾಮತಿ, ಅ.29- ಮಣ್ಣನ್ನೇ ಹಾಸಿ, ಹೊದ್ದು ಕೃಷಿಯಲ್ಲಿ ತೊಡಗಿರುವ ಪಂಚಮಸಾಲಿಗಳು ಹೊಲ, ಕಣಗಳಲ್ಲಿ ಒಕ್ಕಲು ಮಾಡಿ ರಾಶಿ ಹಾಕಿದಾಗ ಎಲ್ಲಾ ಶ್ರಮಿಕ ವರ್ಗದವರನ್ನು ಕರೆದು ಅವರಿಗೆ ಪಾಲು ನೀಡಿ, ಉಳಿದ ದವಸ-ಧಾನ್ಯ ಮನೆಗೆ ಕೊಂಡ್ರೊಯ್ಯುವ ಹೃದಯ ವೈಶಾಲ್ಯ ಮತ್ತು ಸ್ವಾಭಿಮಾನಿಗಳಾಗಿದ್ದಾರೆ ಎಂದು ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಶ್ರೀ ವಚನಾನಂದ ಸ್ವಾಮೀಜಿ ಹೇಳಿದರು.

ನ್ಯಾಮತಿ ಪಟ್ಟಣದ ಶ್ರೀ ಮಹಾಂತೇಶ್ವರ ವೀರಶೈವ ಕಲ್ಯಾಣ ಮಂದಿರದಲ್ಲಿ ಭಾನುವಾರ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜ ನ್ಯಾಮತಿ ತಾಲ್ಲೂಕು ಘಟಕದಿಂದ ಆಯೋಜಿಸ ಲಾಗಿದ್ದ ವೀರ ರಾಣಿ ಕಿತ್ತೂರು ಚೆನ್ನಮ್ಮ 199 ನೇ ವಿಜಯೋತ್ಸವ, ಪ್ರತಿಭಾ ಪುರಸ್ಕಾರ ಕಾರ್ಯ ಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ನಮ್ಮ ಸಮುದಾಯದಲ್ಲಿ ಶೇ.10ರಷ್ಟು ಜನರಿಗೆ ಮನೆ, ಶೇ.15ರಷ್ಟು ಮಂದಿಗೆ ಭೂಮಿ ಇಲ್ಲ. ಆರ್ಥಿಕ, ರಾಜಕೀಯ, ಶೈಕ್ಷಣಿಕವಾಗಿ ಹಿಂದುಳಿದಿರುವ ಸಮಾಜಕ್ಕೆ 2ಎ ಮೀಸಲಾತಿಯನ್ನು ಕಾನೂನಾತ್ಮಕ ತೊಡಕುಗಳು ಇಲ್ಲದಂತೆ ಸರಿಯಾದ ರೀತಿಯಲ್ಲಿ ಈ ಕೆಲಸ ಆಗಬೇಕಿದೆ. ಯಾರಾದರೂ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದರೂ ಮೀಸಲಾತಿ ನಿರ್ಧಾರ ಊರ್ಜಿತವಾಗುವಂತಿರಬೇಕು. ಹೀಗಾಗಿ, ವಿಳಂಬವಾದರೂ ಪರವಾಗಿಲ್ಲ. ಸಮರ್ಪಕ ರೀತಿಯಲ್ಲಿ ಮೀಸಲಾತಿ ದೊರೆಯಬೇಕು ಎಂದು ಹೇಳಿದರು.

2ಎ ಮೀಸಲಾತಿ ಕುರಿತು ನಮ್ಮ ಸಮಾಜವು 1994ರ ಪೂರ್ವದಿಂದಲೂ ಹೋರಾಟ ನಡೆಸುತ್ತಾ ಬಂದಿದೆ. ನೂರಕ್ಕೆ - ನೂರರಷ್ಟು 2ಎ ಮೀಸಲಾತಿ ದೊರೆಯುತ್ತದೆ ಎಂಬ ವಿಶ್ವಾಸ ನಮಗಿದೆ. ನಮ್ಮದು ಸಂವಿಧಾನಾತ್ಮಕ ಹೋರಾಟ ಆಗಿರುತ್ತದೆ. ಕಾನೂನಾತ್ಮಕ ಹೋರಾಟದಲ್ಲಿ ಬಹಳ ಗಟ್ಟಿಯಾಗಿದೇವೆ. ನಮ್ಮ ಸಮುದಾಯಕ್ಕೆ ಮೀಸಲಾತಿ ಸಿಗಬೇಕು ಎನ್ನುವ ವಿಚಾರದಲ್ಲಿ ಗಟ್ಟಿಯಾಗಿ ನಿಂತಿದ್ದೇವೆ. ಈಗಾಗಲೇ ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಕೆಲ ಜಾತಿಗಳಿಗೆ ಮೀಸಲಾತಿ ಘೋಷಿಸಲಾಗಿದೆ. ಆದರೆ ಅಲ್ಲಿನ ಜನರು ನ್ಯಾಯಾಲಯದ ಮೊರೆ ಹೋದ ಹಿನ್ನೆಲೆಯಲ್ಲಿ ಮರಾಠಿಗರಿಗೆ ಸರ್ಕಾರ ಘೋಷಣೆ ಮಾಡಿದ ಮೀಸಲಾತಿ ನಿಂತು ಹೋಗಿದೆ. ಅದೇ ರೀತಿ ಪಂಚಮಸಾಲಿ ಸಮುದಾಯದ ಪರಿಸ್ಥಿತಿ ಆಗಬಾರದು. ಹಾಗಾಗಿ ಸಮಾಜ ಸಂಘಟನೆಯೊಂದಿಗೆ ಬಲಿಷ್ಠವಾಗಬೇಕಾಗಿದೆ ಎಂದು ಹೇಳಿದರು.

ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಆಡಳಿತಾಧಿಕಾರಿ ಡಾ.ಎಚ್.ಪಿ. ರಾಜ್‌ಕುಮಾರ ಮಾತನಾಡಿ, ಶ್ರೀ ಪೀಠದಲ್ಲಿ ಈಗಾಗಲೇ 48 ಬಡ ವಿದ್ಯಾರ್ಥಿಗಳಿಗೆ ಆಶ್ರಯ ನೀಡಲಾಗಿದೆ. ಭಕ್ತ ಕೋಟಿ ಸಂಚಯನ ನಿಧಿಯನ್ನು ಸ್ಥಾಪನೆ ಮಾಡಲಾಗಿದ್ದು, ಪ್ರತಿಯೊಬ್ಬ ಬಂಧುಗಳು 555 ರೂ. ನೀಡಿ ಸಮಾಜದ ಸದಸ್ಯತ್ವ ಪಡೆಯುವುದು. ಅಲ್ಲದೇ ಲಕ್ಷ ಲಕ್ಷ ರೂ. ನೀಡುವ ಭಕ್ತರು ಇದ್ದಾರೆ. ಆದರೆ, ಸಮಾಜದ ಕಟ್ಟಕಡೆಯ ವ್ಯಕ್ತಿಯು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ 2500 ರೂ. 1 ಲಕ್ಷ ಸಮಾಜದ ಬಂಧುಗಳು ದೇಣಿಗೆ ನೀಡುವುದರಿಂದ ಸುಮಾರು 25 ಕೋಟಿ ಸಂಗ್ರಹವಾಗುತ್ತದೆ. ಇದರಿಂದ ಉನ್ನತ ಮಟ್ಟದ ಬೆಳವಣಿಗೆ ಸಹಕಾರಿಯಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಚನ್ನಗಿರಿಯ ಡಿವೈಎಸ್‌ಪಿ ಪ್ರಶಾಂತ್ ಮುನ್ನೋಳಿ, ತಹಶೀಲ್ದಾರ್ ಎಚ್.ಪಿ. ಗೋವಿಂದಪ್ಪ, ರಾಜ್ಯ ಸಂಘಟನಾ ಕಾರ್ಯದರ್ಶಿ ಸಿದ್ದೇಶ್ ಬೇಗೂರು, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಸುಷ್ಮಾ ಪಾಟೀಲ್, ದಾವಣಗೆರೆಯ ಸಹಾಯಕ ಪ್ರಾಧ್ಯಾಪಕರಾದ ಪಿ.ಚೈತ್ರ, ಹಲಗೇರಿ ವೀರೇಶ್, ಒಡೆಯರ ಹತ್ತೂರು ಹಾಲೇಶ್, ಚೈತ್ರ ತಿಪ್ಪೇಸ್ವಾಮಿ ಸೇರಿದಂತೆ ಇತರರು ಮಾತನಾಡಿದರು.

ವೇದಿಕೆಯಲ್ಲಿ ಸಮಾಜ ಹಿರಿಯ ಮುಖಂಡರಾದ ಎನ್.ಡಿ.ಪಂಚಾಕ್ಷರಪ್ಪ, ಎನ್.ಜೆ.ವಾಗೀಶ್ ನುಚ್ಚಿನ್, ಪಟ್ಟಣಶೆಟ್ಟಿ ಪರಮಶ್ವರಪ್ಪ, ಶಿವಲಿಂಗಪ್ಪ ಬೆಳಗುತ್ತಿ, ಬಿ.ಗುರುಶಾಂತಪ್ಪ, ಪಟ್ಟಣಶೆಟ್ಟಿ ವೀರಣ್ಣ, ಡಾ. ಅಭಿಷೇಕ್ ನುಚ್ಚಿನ್, ಉತ್ತಂಗಿ ಕೊಟ್ರೇಶ್, ಎಚ್. ಬಿ.ಚಂದ್ರಪ್ಪ ಸೇರಿದಂತೆ ಹಲವಾರು ಗಣ್ಯರು ಇದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜ ನ್ಯಾಮತಿ ತಾಲ್ಲೂಕು ಘಟಕದ ಅಧ್ಯಕ್ಷ ಪೂಜಾರ್ ಚಂದ್ರಶೇಖರ್ ವಹಿಸಿದ್ದರು.

# ಸರ್ಕಾರ ದಿವಾಳಿಯಾಗಿದೆ



ಮಾಜಿ ಸಚಿವ ಬಿ.ಸಿ.ಪಾಟೀಲ

ರಾಣೇಬೆನ್ನೂರು, ಅ.29- ಬಿಜೆಪಿ ಸರ್ಕಾರ ರಚನೆಯಾಗಿ 5 ತಿಂಗಳಲ್ಲಿ ರಾಜ್ಯಾದ್ಯಂತ ಸಾವಿರಾರು ಕೋಟಿಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿತ್ತು. ಆದರೆ ಸಿದ್ದರಾಮಯ್ಯ ಸರ್ಕಾರ ರಚನೆಯಾಗಿ 7 ತಿಂಗಳುಗಳಾದರೂ ಒಂದೇ ಒಂದು ಅಭಿವೃದ್ಧಿ ಕಾಮಗಾರಿ ಮಾಡಲು ಮುಂದಾಗಿಲ್ಲ ಎಂದು ಮಾಜಿ ಸಚಿವ ಬಿ.ಸಿ.ಪಾಟೀಲ ಹೇಳಿದರು.ಅವರು ರಾಣೇಬೆನ್ನೂರು ಪ್ರವಾಸಿ ಮಂದಿರದಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದರು.

ರಾಜ್ಯದ ರೈತರಿಗೆ ಕೊಡಬೇಕಾಗಿರುವ ಹಣ ಕೊಟ್ಟಿಲ್ಲ. ಸರ್ಕಾರಕ್ಕೆ ರೈತರ ಸಂಕಷ್ಟಕ್ಕೆ ಸ್ಪಂದಿಸುವ ಮನಸ್ಸೇ ಇಲ್ಲ. ಸರ್ಕಾರದ ದಿವಾಳಿತನ ಮುಚ್ಚಿಕೊಳ್ಳಲು ಬಿಜೆಪಿ ಮುಖಂಡರು ಸರ್ಕಾರ ಬೀಳಿಸುವ ಪ್ರಯತ್ನ, ಹುಲಿ ಉಗುರು ಪ್ರಕರಣ ಮುಂತಾದ ಸುಳ್ಳುಗಳನ್ನು ಹರಿಬಿಟ್ಟು ಜನರ ಮನಸ್ಸು ಬೇರೆಡೆ ಸೆಳೆಯುವ ಪ್ರಯತ್ನವನ್ನು ಕಾಂಗ್ರೆಸ್ ಮಾಡುತ್ತಿದೆ ಎಂದು ಅವರು ಹೇಳಿದರು.

ಬರಲಿರುವ ಲೋಕಸಭೆ ಚುನಾವಣೆಗೆ ನಾನು ಆಕಾಂಕ್ಷಿಯಾಗಿದ್ದು, ನನಗೆ ಬಿಜೆಪಿ ಟಿಕೆಟ್ ನೀಡಿದರೆ ನಿಲ್ಲುತ್ತೇನೆ. ನನಗೆ ನೀಡದಿದ್ದರೆ, ಕ್ಷೇತ್ರದ ವ್ಯಾಪ್ತಿಯಲ್ಲಿ ಪಕ್ಷದ ನಿಷ್ಠಾವಂತ ಕಾರ್ಯಕರ್ತರು, ಆಕಾಂಕ್ಷಿಗಳು ಬಹಳಷ್ಟು ಜನರಿದ್ದಾರೆ ಕಾರಣ ಕ್ಷೇತ್ರದ ವ್ಯಾಪ್ತಿಯ ಗದಗ, ಹಾವೇರಿ ಜಿಲ್ಲೆಯ ಯಾರಿಗಾದರೂ ಟಿಕೆಟ್ ಕೊಡುವಂತೆ ಬಿಜೆಪಿ ಹೈಕಮಾಂಡ್‌ಗೆ ಮನವಿ ಮಾಡಿದ್ದೇನೆ ಎಂದು, ಹಾವೇರಿ ಲೋಕಸಭೆಗೆ ಕೆ.ಎಸ್. ಈಶ್ವರಪ್ಪ ಮಗ ಕಾಂತೇಶ ಆಕಾಂಕ್ಷಿಯಾಗಿದ್ದಾರೆ ಎನ್ನುವ ಪ್ರಶ್ನೆಗೆ ಬಿ.ಸಿ. ಪಾಟೀಲ್ ಈ ರೀತಿ ಪ್ರತಿಕ್ರಿಯಿಸಿದರು.

**ರಾಣೇಬೆನ್ನೂರಿಗೆ ದರ್ಶನ್ :** ದಿನಾಂಕ 1ರಂದು ಸಂಜೆ 6 ಗಂಟೆಗೆ ನಗರಸಭೆ ಕ್ರೀಡಾಂಗಣದಲ್ಲಿ ನಡೆಯುವ 'ಗರಡಿ' ಚಿತ್ರದ ಟ್ರೈಲರ್ ಬಿಡುಗಡೆಗೆ ಚಿತ್ರನಟ ದರ್ಶನ್ ಹಾಗೂ ಇನ್ನಿತರ ನಟರು ಆಗಮಿಸುವರು. ನಂತರ ಅವರಿಂದ ಮನರಂಜನೆ ಕಾರ್ಯಕ್ರಮ ನಡೆಯಲಿದೆ ಎಂದು ಚಿತ್ರ ನಟರೂ ಆಗಿರುವ ಮಾಜಿ ಮಂತ್ರಿ ಬಿ.ಸಿ.ಪಾಟೀಲ್ ಹೇಳಿದರು.

# ಮಲೇಬೆನ್ನೂರಿನಲ್ಲಿ ಸಂಭ್ರಮದ ದೊಡ್ಡ ಎಡೆ ಜಾತ್ರೆ, ಸಾಮೂಹಿಕ ವಿವಾಹ



ಮಲೇಬೆನ್ನೂರು, ಅ. 29 - ಪಟ್ಟಣದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ವಿಜಯದಶಮಿ ಹಾಗೂ ಮರಿ ಬನ್ನಿ ಅಂಗವಾಗಿ ದೊಡ್ಡ ಎಡೆ ಜಾತ್ರೆ ಭಾನುವಾರ ಸಂಭ್ರಮದಿಂದ ಜರುಗಿತು.

ದೇವಸ್ಥಾನದಲ್ಲಿ ಬೆಳಿಗ್ಗೆ ಜವಳ, ಬಾಯಿ ಬೀಗ, ಹರಕೆ ಸಲ್ಲಿಸುವ ಕಾರ್ಯಕ್ರಮಗಳು ನಡೆದವು. ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ ನೂತನ ವಧು-ವರರಿಗೆ ರಟ್ಟಿಹಳ್ಳಿ ಕಬ್ಬಿಣ ಕಂಥಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಮತ್ತು ಮಠದ ರೇವಣಸಿದ್ದಯ್ಯನವರು ಆಶೀರ್ವದಿಸಿದರು.

ನಂತರ ಪೂಜಾರಪ್ಪರಿಂದ ದೊಡ್ಡ ಎಡೆ ಪೂಜೆ ಶ್ರದ್ಧಾ ಭಕ್ತಿಯಿಂದ ನೆರವೇರಿತು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ, ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ, ಹರಿಹರ ತಾ. ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್‌ಅಲಿ, ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಕುಂಬಳೂರು ವಿರೂಪಾಕ್ಷಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ತಾ.ಪಂ. ಮಾಜಿ ಅಧ್ಯಕ್ಷ ಐರಣಿ ಅಣ್ಣಪ್ಪ, ದೇವಸ್ಥಾನ ಸಮಿತಿ ಅಧ್ಯಕ್ಷ ಪೂಜಾರ ನಾಗಪ್ಪ, ಗೌರವಾಧ್ಯಕ್ಷ ಪೂಜಾರ್ ರೇವಣಪ್ಪ, ಕಾರ್ಯದರ್ಶಿ ಕೆ.ಪಿ.ಗಂಗಾಧರ್, ತಾ. ಕುರುಬ ಸಮಾಜದ ಅಧ್ಯಕ್ಷ ಪೂಜಾರ್ ಹಾಲೇಶಪ್ಪ, ಬೀರಲಿಂಗೇಶ್ವರ ವಿದ್ಯಾಸಂಸ್ಥೆ ಅಧ್ಯಕ್ಷ ಪೂಜಾರ್ ಬಸಪ್ಪ, ಪಿ.ಬಿ. ಬೀರಪ್ಪ, ಜನತಾಬಜಾರ್ ನಿರ್ದೇಶಕ ಪಿ.ಹೆಚ್. ಶಿವಕುಮಾರ್, ಪುರಸಭೆ ಸದಸ್ಯರಾದ ಶ್ರೀಮತಿ ವಿಜಯಲಕ್ಷ್ಮಿ ಗಂಗಾಧರ್ ಪುರಸಭೆ ಸದಸ್ಯರಾದ ಶ್ರೀಮತಿ ವಿಜಯಲಕ್ಷ್ಮಿ ಗಂಗಾಧರ್, ಶ್ರೀಮತಿ ಸುಧಾ ಪಿ.ಆರ್. ರಾಜು, ಬಿ.ಮಂಜುನಾಥ್, ಶ್ರೀಮತಿ ಅಕ್ಕಮ್ಮ ಬಿ.ಸುರೇಶ್, ಭೋವಿ ಶಿವು, ಭೋವಿ ಕುಮಾರ್ ಎಳೆಹೊಳೆ ಕುಮಾರ್, ಡಿ.ಕೆ. ಸಿದ್ದನಗೌಡ ಪೂಜಾರ್, ಮಲ್ಲಿಕಾರ್ಜುನ್, ಪಿ.ಆರ್. ಕುಮಾರ್ ಹೆಚ್.ಡಿ. ಬೀರಪ್ಪ, ಎ.ಕೆ. ಲೋಕೇಶ್, ಎ.ಕೆ. ನಾಗರಾಜ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಮುಸ್ಲಿಂ ಸಮಾಜದ ಚುನಾವಣೆಯಲ್ಲಿ ಅತಂತ್ರ ಫಲಿತಾಂಶ



ಹರಿಹರ

ಹರಿಹರ, ಅ.29- ನಗರದ ಮುಸ್ಲಿಂ ಸಮಾಜದ ಪ್ರತಿಷ್ಠಿತ ಅಂಜುಮನ್-ಎ-ಇಸ್ಲಾಂ ಸಂಸ್ಥೆಯ ಆಡಳಿತ ಮಂಡಳಿಯ 21 ಸ್ಥಾನಗಳಿಗೆ ಶನಿವಾರ ಚುನಾವಣೆ ನಡೆದಿದ್ದು ಯಾವುದೇ ಗುಂಪಿಗೆ ಬಹುಮತ ಲಭಿಸದೇ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ.

**ಆಯ್ಕೆಯಾದವರು ಹಾಗೂ ಅವರು ಪಡೆದ ಮತಗಳ ವಿವರ:** ಜಾವೀದ್ ಆರ್.ಸಿ. (1505), ಸೈಯದ್ ಏಜಾಜ್ (1461), ಫಯಾಜ್ ಅಹ್ಮದ್ (ಅರಿಹಂತ್) (1279), ಫಖ್ರುಲ್ಲಾ ಖಾನ್ ಎಚ್. (ಎಚ್‌ಜಿಕೆ) (1114), ಸೈಯದ್ ಅಶ್ಫಾಖ್ (1085), ನಾಸಿರ್ ಸಾಬ್ (ಪೈಲ್ವಾನ್) (1072), ಮೊಹ್ಮದ್ ಸಿಬ್ಗತ್‌ಉಲ್ಲಾ ಬಿ. (1038), ಸೈಯದ್ ಸನಾಉಲ್ಲಾ ಎಂ.ಆರ್. (1021), ಮುಜಮ್ಮಿಲ್ ಎಂ.ಆರ್. (ಬಿಲ್ಲು) (986). ರೋಷನ್‌ಜಮೀರ್‌ಟಿ.(ತಹಶೀಲ್ದಾರ್) (981), ನೂರ್ ಉಲ್ಲಾ ಎಚ್. (963), ಸೈಯದ್ ರಹಮಾನ್ (ಕೇಟ್ಲಿ) (942), ಸೈಯದ್ ಬಶೀರ್ ಬಿ. (ದೋಸ್ತಾನಾ) (929), ಸಾದಿಖ್ ಉಲ್ಲಾ ಎಸ್.ಎಂ. (923), ಮೊಹ್ಮದ್ ಅಲಿ ಯೆನೆಪೋಯ (900), ಅಫ್ರೋಜ್ ಖಾನ್ (ಯೂತ್) (893), ಹಾಜಿ ಅಲಿ ಖಾನ್ (888), ಫಾರೂಖ್ ಎಂ. (ಎಂಎಂಬಿ) (878), ಸೈಯದ್ ಆಸೀಫ್ ಅಹ್ಮದ್ (ಜುನೈದಿ) (804), ಸರ್ಫರಾಜ್ ಅಹ್ಮದ್ ಕೆ. (ಶಾಲು ಹಾಶ್ಮಿ) (801), ಗೌಸ್ ಪೀರ್ (799).

ಈ ಬಾರಿಯ ಚುನಾವಣೆಯಲ್ಲಿ ಬಿಸ್ಮಿಲ್ಲಾ, ಮದೀನಾ ಮತ್ತು ಇತ್ತೆಹಾದುಲ್ ಮುಸ್ಲಿಮೀನ್ ಎಂಬ ಗುಂಪುಗಳ ಮೂಲಕ ಹಾಗೂ ಹಲವರು ಸ್ವತಂತ್ರರಾಗಿಯೂ ಚುನಾವಣೆ ಕಣಕ್ಕೆ ಇಳಿದಿದ್ದರು. ಬಿಸ್ಮಿಲ್ಲಾ ಗುಂಪಿನ 9 ಸದಸ್ಯರು ಆಯ್ಕೆಯಾಗಿದ್ದರೂ ಅಧಿಕಾರದ ಗದ್ದುಗೆ ಹಿಡಿಯಲು ಸಾಧ್ಯವಾಗಿಲ್ಲ. ಉಳಿದಂತೆ ಮದೀನಾ ಮತ್ತು ಇತ್ತೆಹಾದುಲ್ ಮುಸ್ಲಿಮೀನ್ ಗುಂಪಿನಿಂದ ತಲಾ 6 ಜನರು ಆಯ್ಕೆಯಾಗಿದ್ದಾರೆ. ಎರಡೂ ಗುಂಪಿನವರು ಒಪ್ಪಂದ ಮಾಡಿಕೊಂಡು ಆಡಳಿತ ನಡೆಸುವ ಅನಿವಾರ್ಯತೆ ಎದುರಾಗಿದೆ.

21 ಸ್ಥಾನಗಳಿಗೆ 89 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಜಿಲ್ಲಾ ವಕ್ಫ್ ಅಧಿಕಾರಿ ಸೈಯದ್ ಮೌಅಜಮ್ ಪಾಷಾ ಚುನಾವಣಾಧಿಕಾರಿಯಾಗಿದ್ದರು.

# ತೀವ್ರ ಕೊರೊನಾ ಎದುರಿಸಿದವರಿಗೆ ಶ್ರಮ ಬೇಡ



ಭಾವನಗರ, ಅ. 29 – ತೀವ್ರ ಕೊರೊನಾ ಸೋಂಕು ಎದುರಿಸಿದ್ದವರು ಒಂದೆರಡು ವರ್ಷ ಕಠಿಣ ಪರಿಶ್ರಮದಲ್ಲಿ ತೊಡಗಬಾರದು ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಹೇಳಿದ್ದಾರೆ.

ಗುಜರಾತ್‌ನಲ್ಲಿ ಗಾರ್ಬಾ ನೃತ್ಯದ ವೇಳೆ ಹಲವರು ಹೃದಯಾಘಾತದಿಂದ ಸಾವನ್ನಪ್ಪಿದ್ದರು. ಈ ಬಗ್ಗೆ ರಾಜ್ಯದ ಆರೋಗ್ಯ ಸಚಿವ ಋಶಿಕೇಶ್ ಪಟೇಲ್ ಅವರು ಆರೋಗ್ಯ ಪರಿಣಿತರ ಸಭೆಯನ್ನೂ ನಡೆಸಿದ್ದರು.

ಈ ನಡುವೆ ಹೇಳಿಕೆ ನೀಡಿರುವ ಕೇಂದ್ರ ಸಚಿವ ಮಾಂಡವೀಯ, ಐ.ಸಿ.ಎಂ.ಆರ್. ತೀವ್ರ ಕೊರೊನಾಗೆ ಸಿಲುಕಿದವರ ಅಧ್ಯಯನ ನಡೆಸಿದೆ.

ತೀವ್ರ ಸೋಂಕಿಗೆ ಸಿಲುಕಿದವರು ಅತಿ ಪರಿಶ್ರಮ ಪಡಬಾರದು ಎಂದು ಈ ಅಧ್ಯಯನ ತಿಳಿಸಿದೆ. ಅತಿ ಪರಿಶ್ರಮ, ಓಟ ಹಾಗೂ ಕಠಿಣ ಕಸರತ್ತುಗಳಿಂದ ಒಂದೆರಡು ವರ್ಷಗಳ ಕಾಲವಾದರೂ ದೂರ ಇರಬೇಕು ಎಂದು ಹೇಳಿದ್ದಾರೆ.

# ಮಹಾಕಾವ್ಯಗಳನ್ನು ಬರೆದವರೇ ಋಷಿ-ಮುನಿಗಳು

(1ನೇ ಪುಟದಿಂದ) ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಪ್ರತ್ಯೇಕ ಪರಿಶಿಷ್ಟ ಪಂಗಡದ ಸಚಿವಾಲಯ ರಚನೆ ಮಾಡುವುದಾಗಿ ಘೋಷಣೆ ಮಾಡಿರುವ ರಾಜ್ಯ ಸರ್ಕಾರಕ್ಕೆ ಸಮಸ್ತ ನಾಯಕ ಸಮಾಜದ ಪರ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಸಮಾಜದ ಮುಖಂಡರೂ, ರೈತ ನಾಯಕರಾದ ಹುಚ್ಚವ್ವನಹಳ್ಳಿ ಮಂಜುನಾಥ್ ಮಾತನಾಡಿ, ಪಂಜಾಬ್‌ನಲ್ಲಿ ಜಾರಿಗೊಂಡಿರುವ 'ವಾಲ್ಮೀಕಿ ಪ್ರೊಟೆಕ್ಷನ್ ಆ್ಯಕ್ಟ್' ರಾಜ್ಯದಲ್ಲಿ ಜಾರಿಗೆ ತರುವಂತೆ ಕಳೆದ ವರ್ಷವೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ ಇದೂವರೆಗೂ ಯಾವುದೇ ಕ್ರಮ ಜರುಗಿಸಿಲ್ಲ. ಶಾಸಕ ಬಸವಂತಪ್ಪ ಅವರು ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡುವಂತೆ ಮನವಿ ಮಾಡಿದರು.

ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ಬೆಳಗಾವಿಯಲ್ಲಿ ನಡೆಯಲಿರುವ 'ವಾಲ್ಮೀಕಿ ಪ್ರೊಟೆಕ್ಷನ್ ಆ್ಯಕ್ಟ್' ಬಗ್ಗೆ ಧ್ವನಿ ಎತ್ತುವುದಾಗಿ ತಿಳಿಸಿದರು.

ವಾಲ್ಮೀಕಿ ಸಮಾಜ ಸಹೋದರ ಸಮಾಜವಾಗಿದ್ದು, ಸಮಾಜ ನನ್ನನ್ನು ಯಾವತ್ತು ಬೆಂಬಲಿಸುತ್ತಾ ಬಂದಿದೆ ಎಂದು ಹೇಳಿದರು.

ಸಮಾಜದ ಮುಖಂಡ ಹೊದಿಗೆರೆ ರಮೇಶ್ ಅವರು, ಚನ್ನಗಿರಿಯಲ್ಲಿ ವಾಲ್ಮೀಕಿ ಮೂರ್ತಿ ತೆರವು ವಿಚಾರದ ಬಗ್ಗೆ ಪ್ರಸ್ತಾಪಿಸಿ, ಈ ವಿಚಾರ ಸ್ಥಳೀಯ ಪುರಸಭೆಯಲ್ಲಿ ಒಪ್ಪಿಗೆ ಪಡೆದು, ಜಿಲ್ಲಾಧಿಕಾರಿಗಳ ಕಚೇರಿಗೆ ಬಂದಿದೆ. 30 ದಿನಗಳ ನೋಟೀಸ್ ಅವಧಿಯಲ್ಲಿದ್ದು, ಈ ಕಾರ್ಯ ಆಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಚನ್ನಗಿರಿಯಲ್ಲಿ ವಾಲ್ಮೀಕಿ ಮೂರ್ತಿ ಪ್ರತಿಷ್ಠಾಪನೆ ಆಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಾಲ್ಮೀಕಿ ಸಮಾಜದ ಮುಖಂಡರಾದ ಎಸ್.ಎಂ.ಪಿ. ತಿಪ್ಪೇಸ್ವಾಮಿ, ಹೂವಿನಮಡು ನಾಗರಾಜ್, ಇಟಗಿ ಹನುಮಂತ, ಗುಮ್ಮನೂರು ಬಸವರಾಜ್, ಎಲೋದಹಳ್ಳಿ ರವಿ, ಆಲೂರು ಪರಶುರಾಮ್, ಕರಿಯಪ್ಪ ನಾಯಕ, ಮಹಾನಗರ ಪಾಲಿಕೆ ಸದಸ್ಯ ಪಾಮೇನಹಳ್ಳಿ ನಾಗರಾಜ್, ಗಣೇಶ್ ಹುಲ್ಮನಿ ಮತ್ತಿತರರಿದ್ದರು.

'ಸರಿಗಮಪ' ಗಾಯನ ಸ್ಪರ್ಧೆಯಲ್ಲಿ ಫೈನಲ್ ತಲುಪಿದ್ದ ಶ್ವೇತಾ ಅವರನ್ನು ಸನ್ಮಾನಿಸಲಾಯಿತು.

# ಮಾನವ ಬಿಕ್ಕಟ್ಟು, ವಿಶ್ವಸಂಸ್ಥೆಯ ಗೋದಾಮುಗಳ ಲೂಟಿ

(1ನೇ ಪುಟದಿಂದ) ದಾಳಿಯ ನಂತರ, ನೆಲದ ಮೂಲಕ ದಾಳಿ ನಡೆಸಲಾಗುತ್ತಿದೆ. ಕಳೆದ 24 ಗಂಟೆಗಳಲ್ಲಿ 450 ಉಗ್ರವಾದಿ ನೆಲೆಗಳನ್ನು ಧ್ವಂಸಗೊಳಿಸಲಾಗಿದೆ ಎಂದು ಇಸ್ರೇಲ್ ಸೈನ್ಯ ತಿಳಿಸಿದೆ.

ಇದರಲ್ಲಿ ಹಮಾಸ್ ನಿಯಂತ್ರಣ ಕೇಂದ್ರ, ವೀಕ್ಷಣ ಠಾಣೆಗಳು ಹಾಗೂ ಟ್ಯಾಂಕ್ ವಿರೋಧಿ ಕ್ಷಿಪಣಿ ತಾಣಗಳೂ ಸೇರಿವೆ. ಗಾಜಾದಲ್ಲಿ ನೆಲದ ಮೂಲಕ ಇನ್ನಷ್ಟು ಪಡೆಗಳನ್ನು ಕಳಿಸುವುದಾಗಿ ತಿಳಿಸಲಾಗಿದೆ.

# ಗರ್ಭಪಾತದ ಹಕ್ಕು ನೀಡಲು ಕ್ರಮ

(1ನೇ ಪುಟದಿಂದ) ತೀರ್ಪನ್ನು ಬದಲಿಸುವ ಮೂಲಕ ಆ ದೇಶದಲ್ಲಿ ಗರ್ಭಪಾತದ ಹಕ್ಕನ್ನು ವಾಪಸ್ ಪಡೆದಿತ್ತು. ಈ ಹಿನ್ನೆಲೆಯಲ್ಲಿ ಫ್ರಾನ್ಸ್‌ನಲ್ಲಿ ಗರ್ಭಪಾತದ ಬೇಷರತ್ ಹಕ್ಕಿನ ಬೇಡಿಕೆ ಕೇಳಿ ಬರುತ್ತಿದೆ. ಸಂವಿಧಾನವನ್ನು ಬದಲಿಸುವ ಮೂಲಕ ಮಹಿಳೆಯರಿಗೆ ಗರ್ಭ ಪಾತದ ಹಕ್ಕನ್ನು ನೀಡಲಾಗುವುದು. ಇದನ್ನು ಯಾರಿಂದಲೂ ತಡೆಯ ಲಾಗದು ಹಾಗೂ ವಾಪಸ್ ಪಡೆಯಲಾಗದು ಎಂದು ಮೆಕ್ರಾನ್ ಕಳೆದ ಮಾರ್ಚ್ ತಿಂಗಳಲ್ಲಿ ಹೇಳಿದ್ದರು.

ಸಂವಿಧಾನಕ್ಕೆ ತಿದ್ದುಪಡಿ ತರುವುದು ಕಠಿಣ ಪ್ರಕ್ರಿಯೆಯಾಗಿದೆ. ಆದರೆ, ಈ ಬಗ್ಗೆ ಜನಾದೇಶಕ್ಕೆ ಮುಂದಾಗದೇ ತಿದ್ದುಪಡಿ ತರಲು ಕ್ರಮ ತೆದುಕೊಳ್ಳಲಾಗುತ್ತಿದೆ. ಶಾಸನಸಭೆಯ ವಿಶೇಷ ಅಧಿವೇಶನದ ಮೂಲಕ ಈ ಹಕ್ಕು ನೀಡಲು ಮೆಕ್ರಾನ್ ಬಯಸಿದ್ದಾರೆ. ಈ ಕುರಿತ ಮಸೂದೆಗೆ ಸರ್ವಸಮ್ಮತಿ ಪಡೆಯಲು ಹಲವಾರು ತಿಂಗಳುಗಳಿಂದ ಪ್ರಯತ್ನ ನಡೆದಿದೆ.

# ಮಾಜಿ ಸಿಎಂ ಬೊಮ್ಮಾಯಿ ಅವರ ಆರೋಗ್ಯ ವಿಚಾರಿಸಿದ ಕಾಗಿನೆಲೆ ಶ್ರೀಗಳು



ಮಲೇಬೆನ್ನೂರು, ಅ.29- ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗಿ ವಿಶ್ರಾಂತಿ ಪಡೆಯುತ್ತಿರುವ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಶನಿವಾರ ಬೆಂಗಳೂರಿನಲ್ಲಿ ಭೇಟಿ ಮಾಡಿ, ಆರೋಗ್ಯ ವಿಚಾರಿಸಿ, ಬೇಗ ಗುಣಮುಖರಾಗುವಂತೆ ಆಶೀರ್ವದಿಸಿದರು.

# ಬಾಂಗ್ಲಾ : ಉಲ್ಬಣಿಸಿದ ಸಂಘರ್ಷ, ಮೂವರ ಸಾವು

(1ನೇ ಪುಟದಿಂದ) ಎಂದು ಪೊಲೀಸರು ತಿಳಿಸಿದ್ದಾರೆ.

ಢಾಕಾ ಹೊರ ವಲಯದ ಡೆಮ್ರಾ ಎಂಬಲ್ಲಿ ಕಿಡಿಗೇಡಿಗಳು ಬಸ್ ಒಂದಕ್ಕೆ ಬೆಂಕಿ ಹಚ್ಚಿದಾಗ ಚಾಲಕನ ಸಹಾಯಕ ಸಾವನ್ನಪ್ಪಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ಶನಿವಾರ ಢಾಕಾದಲ್ಲಿ ಪೊಲೀಸರು ಹಾಗೂ ಪ್ರತಿಪಕ್ಷದ ಕಾರ್ಯಕರ್ತರ ನಡುವೆ ಸಂಘರ್ಷ ನಡೆಯುವಾಗ ಗಾಯಗೊಂಡಿದ್ದ ಹಿರಿಯ ಪತ್ರಕರ್ತ ರಫೀಕ್ ಭುಯಾನ್ ಅವರು ಗಾಯಗಳಿಂದಾಗಿ ಭಾನುವಾರ ಸಾವನ್ನಪ್ಪಿದ್ದಾರೆ.

ರಾಜಧಾನಿ ಸೇರಿದಂತೆ ದೇಶದ ಹಲವೆಡೆ ಹಲವಾರು ಸಾರಿಗೆ ಬಸ್‌ಗಳಿಗೆ ಬೆಂಕಿ ಹಚ್ಚಲಾಗಿದೆ ಹಾಗೂ ಹಾನಿಗೊಳಿಸಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಶನಿವಾರ ನಡೆದ ಸಂಘರ್ಷದಲ್ಲಿ ಇಬ್ಬರು ಸಾವನ್ನಪ್ಪಿದ್ದರು ಹಾಗೂ 200ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು. ರಾಜರ್ಬಾಗ್ ಸೆಂಟ್ರಲ್ ಪೊಲೀಸ್ ಆಸ್ಪತ್ರೆಯ ಎದುರು ಹಲವಾರು ವಾಹನಗಳಿಗೆ ಬೆಂಕಿ ಹಚ್ಚಲಾಗಿತ್ತು.

ಇದಕ್ಕೂ ಮುಂಚೆ ಪೊಲೀಸರು ಬಿ.ಎನ್.ಪಿ. ಪ್ರಧಾನ ಕಾರ್ಯದರ್ಶಿ ಮಿರ್ಜಾ ಫಕ್ರುಲ್ ಇಸ್ಲಾಂ ಆಲಂಗೀರ್ ಅವರನ್ನು ಅವರ ನಿವಾಸದಿಂದ ಬಂಧಿಸಿದ್ದರು.

ಪ್ರಧಾನ ಮಂತ್ರಿ ಶೇಖ್ ಹಸೀನಾ ರಾಜೀನಾಮೆ ನೀಡುವ ಮೂಲಕ ನಿಷ್ಪಕ್ಷಪಾತ ಚುನಾವಣೆಗೆ ದಾರಿ ಮಾಡಿಕೊಡಬೇಕು. ಚುನಾವಣೆಗೆ ಮುಂಚೆ ಹಂಗಾಮಿ ಸರ್ಕಾರ ರಚಿಸಬೇಕು ಎಂದು ಪ್ರತಿಪಕ್ಷವಾದ ಬಿ.ಎನ್.ಪಿ. ಒತ್ತಾಯಿಸಿದೆ.

ಬಿ.ಎನ್.ಪಿ ಹಾಗೂ ಅದರ ಮಿತ್ರ ಪಕ್ಷವಾದ ಜಮಾತ್ ಎ ಇಸ್ಲಾಮಿ ಸಂಘಟನೆಗೆ ಸೇರಿದ 900ಕ್ಕೂ ಹೆಚ್ಚು ಜನರನ್ನು ಕಳೆದ 24 ಗಂಟೆಗಳಲ್ಲಿ ಬಂಧಿಸಲಾಗಿದೆ ಎಂದು ಪ್ರಥಮ್ ಅಲೊ ಪತ್ರಿಕೆ ವರದಿ ಮಾಡಿದೆ.

# ಕೇರಳದ ಕ್ರಿಶ್ಚಿಯನ್ ಕೇಂದ್ರದಲ್ಲಿ ಸರಣಿ ಸ್ಫೋಟ : ಸಾವು

(1ನೇ ಪುಟದಿಂದ) ಈ ಸಂಘಟನೆಯು ದೇಶದ್ರೋಹ ಸ್ವರೂಪದ್ದಾಗಿದೆ. ಸಂಘಟನೆಯ ಸಿದ್ಧಾಂತ ದೇಶಕ್ಕೆ ಅಪಾಯಕಾರಿ ಎಂದು ಮಾರ್ಟಿನ್ ಆರೋಪಿಸಿದ್ದ. ಸಂಘಟನೆ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಬೆಳಿಗ್ಗೆ 9.40ರ ಸಮಯದಲ್ಲಿ ಜಮ್ರಾ ಇಂಟರ್‌ನ್ಯಾಷನಲ್ ಕನ್ವೆನ್ಷನ್ ಸೆಂಟರ್‌ನಲ್ಲಿ ಮೂರು ಸ್ಫೋಟ ನಡೆಸಲಾಗಿತ್ತು. ಇದಕ್ಕಾಗಿ ಸುಧಾರಿತ ಸ್ಫೋಟಕಗಳನ್ನು ಬಳಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಫೋಟದ ಹಿನ್ನೆಲೆಯಲ್ಲಿ ದೇಶಾದ್ಯಂತ ಕಟ್ಟೆಚ್ಚರ ವಹಿಸಲಾಗಿದೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಸರ್ವಪಕ್ಷಗಳ ಸಭೆ ಕರೆದಿದ್ದಾರೆ. ಜೆಹೊವಾಸ್ ವಿಟ್ನೆಸಸ್ ಸಂಘಟನೆಯು ಅಮೆರಿಕದಲ್ಲಿ 19ನೇ ಶತಮಾನದಲ್ಲಿ ಆರಂಭವಾಗಿತ್ತು. ಈ ಸಂಘಟನೆಯು ಇಂಟರ್‌ನ್ಯಾಷನಲ್ ಬೈಬಲ್ ಸ್ಟೂಡೆಂಟ್ಸ್ ಅಸೋಸಿಯೇಷನ್‌ನ ಮೂಲದಿಂದ ಜನ್ಮ ತಳೆದಿತ್ತು.

ಈ ಸಂಘಟನೆ ಕೆಲ ಕಠಿಣ ಸಾಮಾಜಿಕ ನಿಯಮಗಳನ್ನು ಹೊಂದಿದೆ. ಸಂಘಟನೆ ಹಲವು ಗುಂಪುಗಳಾಗಿ ಚೆದುರಿದೆ. ಯಾವುದೇ ಕೇಂದ್ರ ನಾಯಕತ್ವ ಹೊಂದಿಲ್ಲ.

# ಭರಂಪುರ ಯುವಕ ಸಂಘದ ಹರಿಹರ ಕಾ ರಾಜಾ ವಿಸರ್ಜನೆ



ಹರಿಹರ, ಅ, 29 - ನಗರದ ಹೊಸ ಭರಂಪುರ ಬಡಾವಣೆ ಗ್ರಾಮದೇವತೆ ಭರಂಪುರ ಯುವಕ ಸಂಘದ ವತಿಯಿಂದ ಪ್ರತಿಷ್ಠಾಪಿಸಿದ್ದ ಹರಿಹರ ಕಾ ರಾಜಾ ಗಣೇಶ ಮೂರ್ತಿಯನ್ನು ಸಡಗರ - ಸಂಭ್ರಮದಿಂದ ವಿಸರ್ಜನೆ ಮಾಡಲಾಯಿತು.

ನಗರದ ಗ್ರಾಮದೇವತೆ ದೇವಸ್ಥಾನದ ಆವರಣದಿಂದ ಆರಂಭಗೊಂಡ ಗಣಪತಿ ವಿಸರ್ಜನೆ ಮೆರವಣಿಗೆಯು ರಾಜ ಬೀದಿಗಳಲ್ಲಿ ಸಂಚರಿಸಿ ತುಂಗಭದ್ರಾ ನದಿಯಲ್ಲಿ ವಿಸರ್ಜನೆ ಮಾಡಲಾಯಿತು. ಉಡುಪಿ ಹುಲಿ ವೇಷ, ಡ್ರಮ್ ಸೆಟ್, ನಂದಿಕೋಲು, ಸಮಾಳ, ಡಿಜೆ ಸೌಂಡ್ ಸಿಸ್ಟಮ್ ಸೇರಿದಂತೆ ವಿವಿಧ ಕಲಾ ಮೇಳಗಳು ಮೆರವಣಿಗೆಗೆ ಮೆರಗು ನೀಡಿದವು. ಪಿಎಸ್‌ಐ ಚಿದಾನಂದ ಪೊಲೀಸ್ ಸಿಬ್ಬಂದಿಗಳಾದ ಸತೀಶ್, ಮಂಜುನಾಥ್ ಬನ್ನಿಕೋಡು, ರವಿನಾಯ್ಕ್, ಇತರರು ಮುಂಜಾಗ್ರತಾ ಕ್ರಮ ಕೈಗೊಂಡಿದ್ದರು.

ಈ ಸಂದರ್ಭದಲ್ಲಿ ಭರಂಪುರ ಯುವಕ ಸಂಘದ ಅಧ್ಯಕ್ಷ ಸುರೇಶ್ ಚಂದಪೂರ್, ನಗರಸಭೆ ಸದಸ್ಯ ಕೆ.ಜಿ. ಸಿದ್ದೇಶ್, ಗ್ರಾಮದೇವತೆ ದೇವಸ್ಥಾನ ಸಮಿತಿಯ ಅಧ್ಯಕ್ಷ ಪೂಜಾರ್ ಈರಣ್ಣ, ಕಾರ್ಯದರ್ಶಿ ಕೆ.ಬಿ. ರಾಜಶೇಖರ, ಉಪಾಧ್ಯಕ್ಷ ಬೆಣ್ಣೆ ರೇವಣಸಿದ್ದಪ್ಪ, ಸಹ ಕಾರ್ಯದರ್ಶಿ ಗುತ್ಯಪ್ಪ ನಿರ್ದೇಶಕ ಎಂ.ಚಿದಾನಂದ ಕಂಚಿಕೇರಿ, ಪರಮೇಶ್ವರಪ್ಪ ನಿಲಗುಂದ, ಹಣಿಗಿ ಸುರೇಶ್ ಮಜ್ಜಿಗೆ ಚಂದ್ರಪ್ಪ ಸೇರಿದಂತೆ ಇತರರು ಹಾಜರಿದ್ದರು.

# ಗೂಗಲ್ ಡಿಜಿಟಲ್ ಗೋಡೆ ಒಡೆಯಲು ಸಾಧ್ಯವೇ?

(1ನೇ ಪುಟದಿಂದ) ಒಂದು ರೀತಿ ಜನರ ಮೇಲೆ ಮೋಡಿ ಮಾಡಿದೆ. ಗೂಗಲ್ ಸರ್ಚ್ ಜನರ ನಿತ್ಯ ಅಭ್ಯಾಸದ ಭಾಗದಂತಾಗಿದೆ ಎಂದಿದ್ದಾರೆ.

ಜನರಿಗೆ ಕೇವಲ ಬೇರೆ ಆಯ್ಕೆ ನೀಡುವುದಷ್ಟೇ ಅಲ್ಲದೇ, ಜನರು ಇಂಟರ್‌ನೆಟ್ ಸರ್ಚ್ ಮಾಡುವ ಪದ್ಧತಿ ಬದಲಾಗದೇ ಗೂಗಲ್ ಪ್ರಾಬಲ್ಯ ಬದಲಾಗದು ಎಂದೂ ನಡೆಲ್ಲಾ ಹೇಳಿದ್ದರು.

ಸರ್ಚ್‌ಗೆ ಸಂಬಂಧಿಸಿದಂತೆ ಕಂಪನಿಗಳ ನಡುವಿನ ಒಪ್ಪಂದ ಪದ್ಧತಿಯನ್ನೇ ನಿಷೇಧಿಸಬೇಕು. ಈಗಿರುವ ಪದ್ಧತಿಯಲ್ಲಿ ದೊಡ್ಡ ಕಂಪನಿಗಳೇ ಇಂಟರ್‌ನೆಟ್ ಸರ್ಚ್ ನಿಯಂತ್ರಿಸುತ್ತಿವೆ ಎಂದು ಮಿಚಿಗನ್ ವಿಶ್ವವಿದ್ಯಾಲಯದ ಉಪನ್ಯಾಸಕ ಫ್ಲೋರಿಯನ್ ಶಾಬ್ ಅಭಿಪ್ರಾಯಪಟ್ಟಿದ್ದಾರೆ.

ಇಂಟರ್‌ನೆಟ್ ಸರ್ಚ್ ಅಷ್ಟೇ ಅಲ್ಲದೇ, ಮೊಬೈಲ್ ಹಾಗೂ ಕಂಪ್ಯೂಟರ್‌ಗಳಲ್ಲಿ ಡಿಫಾಲ್ಟ್ ಆಗಿ ಬರುವ ವ್ಯವಸ್ಥೆಗಳು ಸ್ಪರ್ಧಾ ವಿರೋಧಿ ಹಾಗೂ ಕಾನೂನು ಬಾಹಿರ ಎಂದು ಮೆಹ್ತ ತೀರ್ಪು ನೀಡಿದರೆ ಅದು ವ್ಯಾಪಕ ಪರಿಣಾಮಕ್ಕೆ ಕಾರಣವಾಗಲಿದೆ ಎಂಬ ಅಭಿಪ್ರಾಯ ಕೇಳಿ ಬರುತ್ತಿದೆ.

ತಟಸ್ಥ ಆಯ್ಕೆಗೆ ಅವಕಾಶ ಇರಬೇಕು ಎಂಬ ತೀರ್ಪು ಬಂದಲ್ಲಿ ಆಂಡ್ರಾಯ್ಡ್ ಫೋನ್‌ಗಳಲ್ಲಿ ಗೂಗಲ್ ಮೇಲೆ ಪರಿಣಾಮವಾಗಲಿದೆ. ಇದು ಆಪಲ್ ಹಾಗೂ ಐಫೋನ್‌ಗಳ ಮೇಲೂ ಪರಿಣಾಮ ಬೀರಲಿದೆ ಎಂದು ಶಾಬ್ ತಿಳಿಸಿದ್ದಾರೆ.

## ಸರ್ಚ್‌ನಲ್ಲಿ ಗೂಗಲ್ ಪಾಲು ಶೇ.90

ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಇಂಟರ್‌ನೆಟ್ ಸರ್ಚ್‌ನಲ್ಲಿ ಗೂಗಲ್ ಪಾಲು ಶೇ.90ಕ್ಕಿಂತಲೂ ಹೆಚ್ಚಾಗಿದೆ. ದೂರದ ಎರಡನೇ ಸ್ಥಾನದಲ್ಲಿರುವ ಮೈಕ್ರೋಸಾಫ್ಟ್‌ನ ಬಿಂಗ್ ಶೇ.3ರ ಪಾಲು ಪಡೆದಿದೆ. ಹೀಗಾಗಿ ಸರ್ಚ್‌ನಲ್ಲಿ ಗೂಗಲ್ ಬಹುತೇಕ ಏಕಸ್ವಾಮ್ಯ ಹೊಂದಿದೆ ಎನ್ನಬಹುದು.

ಯಾಂಡೆಕ್ಸ್, ಯಾಹೂ, ಬೈಡು, ಡಕ್ ಡಕ್ ಗೋ ಮುಂತಾದ ಸರ್ಚ್ ಕಂಪನಿಗಳ ಪಾಲು ಶೇ.1ರ ಆಸುಪಾಸಿನಲ್ಲಿದೆ.

ಗೂಗಲ್‌ಗೆ ಈಗಿನ ಪೀಳಿಗೆ ಅತಿ ಹೆಚ್ಚಾಗಿ ಹೊಂದಿಕೊಂಡಿದೆ. ಯುರೋಪ್ ನಿಯಮಗಳ ಪ್ರಕಾರ, ಸ್ಮಾರ್ಟ್‌ಫೋನ್ ಹಾಗೂ ವೆಬ್ ಬ್ರೌಸರ್‌ಗಳಲ್ಲಿ ವಿವಿಧ ಸರ್ಚ್‌ಗಳ ಆಯ್ಕೆ ನೀಡಲಾಗುತ್ತಿದೆ. ಆದರೂ ಬಹುತೇಕರು ಗೂಗಲ್‌ಗೇ ಅಂಟಿಕೊಂಡಿದ್ದಾರೆ.

## ಗೂಗಲ್‌ಗಾಗಿ ಆಪಲ್‌ಗೆ 20 ಶತಕೋಟಿ ಡಾಲರ್ ಪಾವತಿ

ಮೊಬೈಲ್ ಹಾಗೂ ಕಂಪ್ಯೂಟರ್ ಸೇರಿದಂತೆ ಹಲವು ಉಪಕರಣಗಳಲ್ಲಿ ಗೂಗಲ್ ಸರ್ಚ್ 'ಅಧಿಕೃತ' ಆಯ್ಕೆಯಾಗಿ ಕಾರ್ಯನಿರ್ವಹಿಸಲು ಸಾಕಷ್ಟು ಹಣ ಪಾವತಿಸಲಾಗುತ್ತಿದೆ. ಆಪಲ್ ಕಂಪನಿ ಒಂದಕ್ಕೇ ಗೂಗಲ್ ಪ್ರತಿ ವರ್ಷ 15ರಿಂದ 20 ಶತಕೋಟಿ ಡಾಲರ್‌ಗಳನ್ನು ಪಾವತಿಸುತ್ತಿದೆ ಎಂದು ಅಮೆರಿಕದ ನ್ಯಾಯ ಇಲಾಖೆ ದಾಖಲಿಸಿದ ಪ್ರಕರಣದಲ್ಲಿ ತಿಳಿಸಲಾಗಿದೆ.

ಆದರೆ, ತನ್ನ ಸರ್ಚ್ ಸೌಲಭ್ಯ ಅತ್ಯುತ್ತಮವಾಗಿರುವ ಕಾರಣ ಹೆಚ್ಚು ಜನ ಬಳಕೆ ಮಾಡುತ್ತಿದ್ದಾರೆ ಎಂದು ಗೂಗಲ್ ವಾದ ಮುಂದಿಡುತ್ತಿದೆ.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# 2023ರಲ್ಲಿ ರಾಹು-ಕೇತು ಗ್ರಹಗಳ ಪರಿವರ್ತನೆ ದ್ವಾದಶರಾಶಿಗಳ ಫಲಾಫಲ



**ದಿನಾಂಕ: 30.10.2023ನೇ ಸೋಮವಾರ ರಾತ್ರಿ 9 ಘಂಟೆ 20 ನಿಮಿಷಕ್ಕೆ ಸಲ್ಲುವ ಮಿಥುನ ಲಗ್ನ, ಕೃತ್ತಿಕಾ ನಕ್ಷತ್ರ, 3ನೇ ಚರಣದಲ್ಲಿ, ವೃಷಭ ರಾಶಿಯಲ್ಲಿ ಚಂದ್ರನ ಸಂಚಾರವಿರುವಾಗ ಇತ್ತ ರಾಹುಗ್ರಹವು ರೇವತೀ ನಕ್ಷತ್ರ 4ನೇ ಪಾದದಲ್ಲಿ ಮೀನ ರಾಶಿಗೆ ಪ್ರವೇಶಿಸಲಿದ್ದು, 2025ನೇ ಮೇ 25ರವರೆಗೆ 569 ದಿನಗಳವರೆಗೆ ಅಂದರೆ ಒಟ್ಟು ಹದಿನೆಂಟು ತಿಂಗಳು, 21 ದಿನಗಳ ಕಾಲ ಇರಲಿದ್ದು, ಇದೇ ದಿನ, ಇದೇ ಸಮಯದಲ್ಲಿ ಕೇತುವು ತುಲಾ ರಾಶಿಯಲ್ಲಿ ಪ್ರವೇಶಿಸಲಿದ್ದು, ಈ ಸಂದರ್ಭದಲ್ಲಿ ದ್ವಾದಶ ರಾಶಿಗಳ ಫಲಾಫಲಗಳ ಸರ್ವೇಸಾಧಾರಣ ವಿವೇಚನೆಯನ್ನು ಇಲ್ಲಿ ಮಾಡಲಾಗಿದೆ.**

**ಜೋತಿಷ್ಯ ಶಾಸ್ತ್ರದಲ್ಲಿ ಅನೇಕ ಶಾಸ್ತ್ರಜ್ಞರು ಗ್ರಹಗಳ ಸಂಚಾರ ಹಾಗೂ ಅವುಗಳ ಫಲಾಫಲವನ್ನು ನಿರ್ಣಯಿಸುವಾಗ ಈ ರಾಹು-ಕೇತುಗಳನ್ನು ಛಾಯಾಗ್ರಹಗಳೆಂದು ಪರಿಗಣಿಸುತ್ತಾರೆ. ಅಂದರೆ ಸೂರ್ಯ ಮತ್ತು ಚಂದ್ರರ ನಡುವೆ ಹಾದು ಹೋಗುವ ವೃತ್ತದ ಅಕ್ಷಪಥಗಳು ಸೇರುವ ಜಾಗವನ್ನೇ ರಾಹು-ಕೇತುಗಳೆನ್ನುತ್ತಾರೆ. ಇತರೆ ಗ್ರಹಗಳು ಕಣ್ಣಿಗೆ ಕಾಣುವಂತೆ ರಾಹು-ಕೇತು ಗ್ರಹಗಳು ಕಾಣದೇ ಇರುವುದರಿಂದ ಇವುಗಳನ್ನು ಛಾಯಾಗ್ರಹಗಳೆನ್ನುತ್ತಾರೆ. ಬೇರೆ ಗ್ರಹಗಳಿಗಿರುವಂತೆ ಪ್ರತ್ಯೇಕ ಸ್ಥಾನಾಧಿಪತ್ಯ ಇಲ್ಲದಿದ್ದರೂ, ಮಿಥುನ ರಾಶಿ ರಾಹುವಿಗೆ ಉಚ್ಚ ಸ್ಥಾನವೆಂದೂ, ಕೇತುವಿಗೆ ಧನುರಾಶಿ ಉಚ್ಚ ಸ್ಥಾನವೆಂದು ಹೇಳಿ ಅದರ ಮೇಲೆ ಜಾತಕಗಳನ್ನು ಪರಿಶೀಲನೆ ಮಾಡುತ್ತಾರೆ. ಇವುಗಳ ಆಧಾರದ ಮೇಲೆ ವಿಮರ್ಶಿಸಲಾಗಿದೆ.**

***- ಜಯತೀರ್ಥಾಚಾರ್ ವಡೇರ್, 94486 66678***




**ಮೇಷ ರಾಶಿ :** ಈ ರಾಶಿಯರಿಗೆ ರಾಹು ಹನ್ನೆರಡನೇ ಮನೆಯಲ್ಲೂ, ಕೇತುವು ಆರನೇ ಸ್ಥಾನದಲ್ಲಿರುವುದರಿಂದ ಹೇರಳ ಧನ ಲಾಭವಾಗಲಿದ್ದು, ಐಷಾರಾಮಿ ಜೀವನ ನಡೆಸುವಂತೆ ಮನಸ್ಸನ್ನು ಪ್ರೇರೇಪಿಸಲಿದೆ. ಸಮಾಜದಲ್ಲಿ ಕೀರ್ತಿ-ಪ್ರತಿಷ್ಠೆ ಹೆಚ್ಚಾಗಲಿದ್ದು, ವ್ಯಾಪಾರ-ವ್ಯವಹಾರಗಳಲ್ಲಿ ನಿರೀಕ್ಷೆಗೂ ಮಿರಿ ಅಭಿವೃದ್ಧಿ ಕಾಣಲಿದೆ. ಇಷ್ಟೆಲ್ಲಾ ಇದ್ದರೂ ಅದೇನು ಹಣದ ಮಹಿಮೆಯೋ ಅಥವಾ ಮಾಯೆಯೋ ಮನಸ್ಸು ದುರ್ವ್ಯಸನಗಳತ್ತ ತಿರುಗಲಿದೆ, ಪರಪುರುಷ/ ಸ್ತ್ರೀಯರಲ್ಲಿ ವಿಶೇಷ ಆಸಕ್ತಿ ಮೂಡಲಿದೆ. ರಾಜಕಾರಣಿಗಳಿಗೆ ಪಕ್ಷದಲ್ಲಿ ಉತ್ತಮ ಸ್ಥಾನ-ಮಾನಗಳು ದೊರೆಯಲಿವೆ. ಯುವಕರು ಪ್ರೀತಿ-ಪ್ರೇಮಗಳ ಪಾಶಗಳಲ್ಲಿ ಅರಿತೋ, ಮರೆತೋ ಬೀಳುವರು. ಹೊಸ ನೌಕರರಿಗೆ ಕೆಲಸ ಮಾಡುವ ಸ್ಥಳದಲ್ಲಿ ಹೆಚ್ಚಿನ ಸಹಕಾರ ಮೇಲಾಧಿಕಾರಿಗಳಿಂದ ಸಿಗಲಿದೆ.



**ವೃಷಭ ರಾಶಿ :** ಈ ರಾಶಿಯವರಿಗೆ ರಾಹು ಹನ್ನೊಂದನೇ ಮನೆಯಲ್ಲೂ , ಕೇತುವು ಪಂಚಮ ಸ್ಥಾನದಲ್ಲಿ ಸಂಚರಿಸುವುದರಿಂದ ಇಡೀ ಒಂದೂವರೆ ವರ್ಷ ಶುಭ ದಿನಗಳನ್ನೇ ಕಾಣುವರು. ವಿದೇಶಕ್ಕೆ ಸಂಬಂಧಪಟ್ಟ ವ್ಯವಹಾರಕ್ಕಿರುವ ತಾಂತ್ರಿಕ ತೊಂದರೆಗಳು ದೂರವಾಗಲಿವೆ. ಹಣಕಾಸಿನ ಸ್ಥಿತಿಗತಿ ಅತ್ಯುತ್ತಮವಾಗಿದ್ದು, ಅದರ ಚಿಂತೆಬೇಡ. ಸ್ವ-ಸಾಮರ್ಥ್ಯದಿಂದಲೇ ಎಲ್ಲವನ್ನೂ ಸಾಧಿಸಬಲ್ಲರು, ಆತ್ಮೀಯರೊಂದಿಗೆ ಮನಸ್ತಾಪ ಉಂಟಾಗದಂತೆ ಎಚ್ಚರವಹಿಸಿ, ಹಳೇ ಸಾಲಗಳನ್ನು ತೀರಿಸಲು ಉತ್ತಮ ಅವಕಾಶ ಒದಗಿಬರಲಿದೆ. ಗರ್ಭಿಣಿ ಸ್ತ್ರೀಯರಿಗೆ ಗರ್ಭಸ್ರಾವವಾಗುವ ಸಂಭವವಿದ್ದು, ತುಸು ಎಚ್ಚರದಿಂದಿರುವುದು ಮೇಲು. ಕೆಲವೊಮ್ಮೆ ಸೋದರರೊಂದಿಗೆ ಹೊಂದಿಕೊಂಡು ಹೋಗುವುದನ್ನು ಕಲಿಯಿರಿ, ದುರಭ್ಯಾಸಗಳಿಗೆ ದಾಸರಾಗದಿರುವುದು ಉತ್ತಮ. ವೈವಾಹಿಕ ಜೀವನದಲ್ಲಿ ಗೊಂದಲ ಮೂಡಲಿದೆ. ಅನಾವಶ್ಯಕ ಖರ್ಚುಗಳಿಗೆ ಕಡಿವಾಣ ಹಾಕಿರಿ, ಈಶ್ವರನ ಆರಾಧನೆಯಿಂದ ಕಷ್ಟಗಳ ಪರಿಹಾರ ಕಾಣುವಿರಿ.




**ಮಿಥುನ ರಾಶಿ :** ಈ ರಾಶಿಯರಿಗೆ ರಾಹು ದಶಮ ಸ್ಥಾನದಲ್ಲೂ, ಕೇತು ಸುಖ ಸ್ಥಾನದಲ್ಲೂ ಇರುವುದರಿಂದ ನೀವು ಮಾಡಲಿರುವ ಎಲ್ಲಾ ಕೆಲಸ, ಕಾರ್ಯಗಳಲ್ಲೂ ರಾಹುವಿನ ಪ್ರಭಾವ ಹೆಚ್ಚಾಗಿದ್ದು, ವಿಪರೀತವಾದ ಚಾಣಾಕ್ಷತನವನ್ನು ಮೈಗೂಡಿಸಿಕೊಳ್ಳುವಿರಿ. ಕೆಲವೊಮ್ಮೆ ಅಡಚಣೆಗಳು ಬಂದರೂ ಅದನ್ನು ಮೀರುವ ಸಾಹಸ ಮಾಡುವಿರಿ. ಗುರಿಯಿಟ್ಟ ಕಾರ್ಯಗಳನ್ನು ಕಡಿಮೆ ಅವಧಿಯಲ್ಲಿ ಮಾಡಿ ಮುಗಿಸಲು ಯತ್ನಿಸುವಿರಿ, ವ್ಯವಹಾರ ನಿಮಿತ್ತ ಕುಟುಂಬದಿಂದ ಕೆಲಕಾಲ ದೂರವಾಸ ಅನಿವಾರ್ಯವಾಗಲಿದೆ. ದೃಷ್ಟಿಗೆ ಸಂಬಂಧಿಸಿದ ಅಥವಾ ಸಂಧಿವಾತ ಬಾಧೆ ಕಾಡಲಿದೆ. ಮಾಡಿದ ಸಾಲವನ್ನು ತೀರಿಸಲು ಹರಸಾಹ ಸಪಡುವಿರಿ. ಮದುವೆ ಮೊದಲಾದ ಮಂಗಳ ಕಾರ್ಯಗಳಲ್ಲಿ ವಿನಾಕಾರಣ ವಿಳಂಬ ಕಂಡು ಬರಲಿದೆ. ದಂಪತಿಗಳಿಗೆ ಸಂತಾನ ಕೆಲಕಾಲ ವಿಳಂಬವಾಗಲಿದೆ. ವೈಯಕ್ತಿಕ ಆರೋಗ್ಯವನ್ನು ಯಾವುದೇ ಕಾರಣಕ್ಕೂ ಅಲಕ್ಷಿಸ ಬೇಡಿ. ದುರ್ಗಾರಾಧನೆಯಿಂದ ಕಷ್ಟಗಳು ಪರಿಹಾರವಾಗಲಿವೆ.



**ಕರ್ಕಾಟಕ ರಾಶಿ :** ಈ ರಾಶಿಯವರಿಗೆ ನವಮ ಸ್ಥಾನದಲ್ಲಿ ರಾಹು, ಹಾಗೂ ತೃತೀಯ ಸ್ಥಾನದಲ್ಲಿ ಕೇತುವಿನ ಸಂಚಾರವಾಗಲಿದ್ದು, ಅದನ್ನು ಹೀಗೆ ಪರಾಮರ್ಶಿಸಬಹುದು. ಸಮಾಜದಲ್ಲಿ ಉನ್ನತ ಮಟ್ಟದ ಸ್ಥಾನ-ಮಾನಗಳು ಸಿಗಲಿದ್ದು, ಅನೇಕ ರೀತಿಯ ವಾಹನಗಳನ್ನು ಕೊಳ್ಳಲು ಹಪಹಪಿಸುವರು, ಆದರೆ ಈ ವಿಚಾರದಲ್ಲಿ ತುಸು ತಾಳ್ಮೆಯಿಂದ ವರ್ತಿಸುವುದು ಮೇಲು, ಹಣಕಾಸಿನ ಹರಿವು ಸಾಕಷ್ಟು ಹೆಚ್ಚುವುದರಿಂದ ಉಳಿತಾಯದ ಬಗ್ಗೆ ಯೋಚಿಸುವುದು ಉತ್ತಮ, ವ್ಯಾಪಾರ-ವಹಿವಾಟುಗಳು ಉನ್ನತ ಮಟ್ಟದಲ್ಲಿ ಬೆಳೆಯಲಿವೆ, ಗುರು-ಹಿರಿಯರಿಗೆ ನಿಮ್ಮ ಮೇಲೆ ವಿಶ್ವಾಸ ಹೆಚ್ಚಲಿದೆ, ಅನಿರೀಕ್ಷಿತವಾಗಿ ನಿಮ್ಮ ನಡವಳಿಯಲ್ಲಿ ಬದಲಾವಣೆ ಕಂಡು ಬರಲಿದೆ. ಮಾಡುವ ಕೆಲಸ, ಕಾರ್ಯಗಳಲ್ಲಿ ಶ್ರದ್ಧೆ ಹಾಗೂ ಆತ್ಮವಿಶ್ವಾಸದಿಂದ ಮುಂದುವರೆಯುವುದು ಮೇಲು. ಆರೋಗ್ಯದ ವಿಚಾರದಲ್ಲಿ ಅಲಕ್ಷೆಬೇಡ.



**ಸಿಂಹ ರಾಶಿ :** ಈ ರಾಶಿಯರಿಗೆ ರಾಹು ಅಷ್ಟಮದಲ್ಲಿದ್ದು, ವ್ಯಯ ಸ್ಥಾನದಲ್ಲಿ ಕೇತು ಸಂಚಾರ ಮಾಡಲಿದ್ದು, ಅದರ ಫಲಾಫಲವನ್ನು ಹೀಗೆ ವಿಮರ್ಶಿಸಬಹುದು. ಗುರುವಿನ ಮನೆಯಲ್ಲಿ ಸಂಚರಿಸುವುದರಿಂದ ಕವಿ, ಲೇಖಕರಿಗೆ ನ್ಯಾಯಾಧೀಶರಿಗೆ ಹಾಗೂ ಧಾರ್ಮಿಕ ವೃತ್ತಿಯಲ್ಲಿರುವವರಿಗೆ ಅತ್ಯುತ್ತಮ ದಿನಗಳು. ಅಪರಿಚಿತ ನದಿ ತಟಾಕಗಳಲ್ಲಿ ಜಲ ಗಂಡಾಂತರ ಉಂಟಾಗಬಹುದು. ಆದ್ದರಿಂದ ಈ ವಿಷಯದಲ್ಲಿ ಎಚ್ಚರದಿಂದಿರುವುದು ಮೇಲು, ವಿಷ ಜಂತುಗಳಿಂದ ಭಯ, ಅಪಘಾತ ಭಯ , ಸಂಧಿವಾತ ಸಮಸ್ಯೆ ಅತಿಯಾಗಿ ಕಾಡಲಿದೆ. ಸಣ್ಣ ಹಾಗೂ ಅತೀಸಣ್ಣ ವ್ಯಾಪಾರಿಗಳಿಗೆ ಉತ್ತಮ ದಿನಗಳು. ಕೇತುವಿನ ಪ್ರಭಾವದಿಂದಾಗಿ ದೃಷ್ಟಿದೋಷ ಉಂಟಾಗಲಿದೆ. ಸಿನಿಮಾ ಕಲಾವಿದರಿಗೆ, ವಿತರಕರಿಗೆ, ದೈಹಿಕ ಶ್ರಮಜೀವಿಗಳಿಗೆ ಸಂಪಾದನೆ ಹೆಚ್ಚಲಿದೆ. ಅಪರಿಚಿತರಿಂದ ಮೋಸ ಹೋಗುವಿರಿ, ತುಳಸಿ ಗಿಡಗಳನ್ನು ನೆಟ್ಟು ಪೋಷಿಸಿ.



**ಕನ್ಯಾ ರಾಶಿ :** ಈ ರಾಶಿಯವರಿಗೆ ರಾಹು ಸಪ್ತಮದಲ್ಲೂ ಹಾಗೂ ಜನ್ಮಸ್ಥ ಕೇತು ಇರುವುದರಿಂದ ಈ ರೀತಿಯಾಗಿ ಪರಾಮರ್ಶಿಸಬಹುದು ಇದು ಉತ್ತಮ ಪರಿವರ್ತನೆಯಾಗಿದ್ದು, ವಿವಾಹಾದಿ ಕಾರ್ಯಗಳಿಗಿದ್ದ ಆತಂಕಗಳು ದೂರವಾಗಲಿವೆ. ನೀವು ನಿಮ್ಮ ಎದುರಿನ ವ್ಯಕ್ತಿಯ ಮೇಲೆ ಪ್ರಭಾವನ್ನು ಬೀರಬಲ್ಲಿರಿ. ಆರಂಭದಲ್ಲಿ ಆತಂಕಗಳು ಎದುರಾದರೂ ಸುಖ-ಸೌಖ್ಯ ಉಂಟಾಗಲಿದೆ. ಯಾವುದೇ ಕಾರಣಕ್ಕೂ ಮಾನಸಿಕ ಒತ್ತಡಗಳಿಗೆ ಒಳಗಾಗದಿರುವುದು ಉತ್ತಮ. ಹಣಕಾಸಿನ ವಿಚಾರದಲ್ಲಿ ಎಚ್ಚರ ವಹಿಸದೇ ಹೋದಲ್ಲಿ ಅದು ಬೇರೆಯರ ಪಾಲಾಗಬಹುದು. ಅಮೂಲ್ಯ ವಸ್ತುಗಳನ್ನು ಜೋಪಾನವಾಗಿ ಕಾಪಾಡಿಕೊಳ್ಳಿ, ವಿಚ್ಛೇದಿತರಿಗೆ ಮರು ವಿವಾಹಕ್ಕೆ ಉತ್ತಮ ಸಂಬಂಧಗಳು ಬರಲಿವೆ. ಇರುವ ಜಾಣ್ಮೆಯನ್ನು ಉಪಯೋಗಿಸಿಕೊಳ್ಳುವುದನ್ನು ಕಲಿಯಿರಿ. ಆರೋಗ್ಯವನ್ನು ಅಲಕ್ಷಿಸಬೇಡಿ, ದೃಷ್ಟಿ ಸಂಬಂಧಿ ಸಮಸ್ಯೆಗಳನ್ನು ಅಲಕ್ಷಿಸಬೇಡಿ. ಸಂಬಂಧಿಗಳೊಂದಿಗೆ ಮನಸ್ತಾಪ ಬೇಡ. ಬದುಕಿನಲ್ಲಿ ನಿರ್ಲಕ್ಷೆಬೇಡ.



**ತುಲಾ ರಾಶಿ :** ಈ ರಾಶಿಯರಿಗೆ ರಾಹು ಷಷ್ಠ ಸ್ಥಾನದಲ್ಲೂ ಹಾಗೂ ಕೇತು ಮೋಕ್ಷ ಸ್ಥಾನದಲ್ಲಿರುವುದರಿಂದ ಇದನ್ನು ಹೀಗೆ ವಿಮರ್ಶಿಸಬಹುದು. ಬಹಳಷ್ಟು ಕಾಲದಿಂದ ನಿಮ್ಮನ್ನು ಹೈರಾಣಾಗಿಸಿದ್ದ ಅನಾರೋಗ್ಯ ಸಮಸ್ಯೆಯು ಬೇಗನೇ ಬಗೆಹರಿಯಲಿದೆ. ಉತ್ತಮ ಅರೋಗ್ಯ ಪ್ರಾಪ್ತಿಯಾಗಲಿದೆ. ತಾಯಿ ತವರು ಮನೆಯಿಂದ ನೆರವು ದೊರೆಯಲಿದೆ. ಅನೇಕ ಶುಭ ಫಲಗಳು ದೊರೆಯಲಿವೆ. ವ್ಯಾಪಾರ, ವ್ಯವಹಾರಗಳಲ್ಲಿ ಪಾಲುದಾರರಾಗುವುದರಿಂದ ಧನಲಾಭವಾಗಲಿದೆ. ನಿರೀಕ್ಷೆಗೂ ಮೀರಿದ ಅಭಿವೃದ್ಧಿಯಾಗಲಿದೆ. ವ್ಯಯ ಸ್ಥಾನದಲ್ಲಿರುವ ಕೇತುವಿನಿಂದಾಗಿ ಅನೇಕ ಧಾರ್ಮಿಕ ಕಾರ್ಯಗಳು ನಿಮ್ಮಿಂದ ನಡೆಯಲಿವೆ. ಪದವೀಧರರಿಗೆ ಕೃಷಿ ಕಾರ್ಯಗಳಲ್ಲಿ ವಿಶೇಷ ಆಸಕ್ತಿ ಮೂಡಲಿದೆ. ತೀರ್ಥ ಯಾತ್ರೆ ಮಾಡುವ ಯೋಗ ಬರಲಿದ್ದು, ಅದನ್ನು ವ್ಯರ್ಥ ಮಾಡದೇ ಸದುಪಯೋಗಪಡಿಸಿಕೊಳ್ಳಿ.




**ವೃಶ್ಚಿಕ ರಾಶಿ :** ಈ ರಾಶಿಯವರಿಗೆ ರಾಹು ಐದನೇ ಮನೆಯಲ್ಲೂ, ಕೇತು ಹನ್ನೊಂದನೇ ಮನೆಯಲ್ಲಿ ಸಂಚಾರವಿರುವುದರಿಂದ ವೃಥಾ ಚಿಂತೆ, ಕೆಲಸ ಕಾರ್ಯಗಳಲ್ಲಿ ವಿಳಂಬವಾಗಲಿದೆ. ನೆಗಡಿ, ಹೊಟ್ಟೆಯಲ್ಲಿ ಅಜೀರ್ಣ ಮೊದಲಾದ ಅನಾರೋಗ್ಯ ಸಮಸ್ಯೆ ಕಾಡಲಿವೆ, ಸಂತಾನಾಪೇಕ್ಷಿಗಳಿಗೆ ಸಂತಾನಕ್ಕೆ ಇರುವ ಪ್ರತಿಬಂಧಕಗಳು ದೂರವಾಗಲಿವೆ. ಕೆಟ್ಟವರ ಹಾಗೂ ಒಳ್ಳೆಯವರ ಅರಿವಾಗಲಿದೆ. ಅಡ್ಡ ಮಾರ್ಗದಲ್ಲಿ ಸಂಪಾದನೆಗೆ ಯತ್ನಿಸುವುದರಿಂದ ತೊಂದರೆಗಳು ಹೆಚ್ಚಾಗಲಿವೆ. ಕೇತುವಿನ ಪ್ರಭಾವದಿಂದಾಗಿ ಪದವೀಧರ ನಿರುದ್ಯೋಗಿಗಳಿಗೆ ಉತ್ತಮ ನೌಕರಿ ದೊರೆಯಲಿದೆ. ರಾಜಕಾರಣಿಗಳು ಕೆಳಮಟ್ಟದಲ್ಲಿರುವ ಕಾರ್ಯಕರ್ತರನ್ನು ಮೇಲೆ ತರಲು ಯತ್ನಿಸುವರು, ಸಂದರ್ಭಕ್ಕೆ ತಕ್ಕಂತೆ ನಡೆದುಕೊಳ್ಳುವ ಕಲೆ ಮೈಗೂಡಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಬರಲಿದೆ.



**ಧನು ರಾಶಿ :** ಈ ರಾಶಿಯವರಿಗೆ ರಾಹು ಚತುರ್ಥ ಸ್ಥಾನದಲ್ಲಿದ್ದು, ಉತ್ತಮ ಫಲದೊಂದಿಗೆ, ಅಧಿಕ ವೃದ್ಧಿಯೊಂದಿಗೆ ದುರಾಸೆಯುಂಟಾಗಲಿದೆ. ಆಸ್ತಿ ಖರೀದಿ ವಿಚಾರದಲ್ಲಿ ಭಾರೀ ಮೊತ್ತದ ಮೋಸ ಹೋಗುವ ಸಂಭವವಿದೆ. ನಿಮ್ಮ ಎದುರಾಳಿ ನಿಮಗಿಂತಲೂ ಬುದ್ಧಿವಂತನಾಗಿರುತ್ತಾನೆ ಎಂಬುದರ ಅರಿವಿರಲಿ. ಅನಿರಿಕ್ಷಿತವಾಗಿ ಸಾಲಕ್ಕೆ ಒಳಗಾಗುವ ಪ್ರಸಂಗ ಬರಬಹುದು, ತುಂಬಾ ಆಸೆಯಿಂದ ಕೊಂಡ ವಾಹನವನ್ನು ಮರು ಮಾರಾಟ ಮಾಡಬೇಕಾಗಬಹುದು, ಹತ್ತನೇ ಸ್ಥಾನದಲ್ಲಿರುವ ಕೇತುವು ಅನೇಕ ಕಾಯಿಲೆ-ಕಸಾಲೆಗಳನ್ನುಂಟು ಮಾಡಬಹುದು, ಯಾವುದೇ ವೈದ್ಯಕೀಯ ಉಪಚಾರಕ್ಕೂ ಅದು ಬಗ್ಗದೇ ಹೋಗಬಹುದು, ಖಾಸಗಿ ಕಂಪನಿ ನೌಕರರು ತಮ್ಮ ಪದೋನ್ನತಿಗಾಗಿ ಹೆಚ್ಚಿನ ತಾಳ್ಮೆಯಿಂದ ವರ್ತಿಸುವುದು ಮೇಲು, ಗುರು, ಗಣೇಶನನ್ನು ಆರಾಧಿಸಿ.



**ಮಕರ ರಾಶಿ :** ಈ ರಾಶಿಯವರಿಗೆ ರಾಹು ತೃತೀಯ ಸ್ಥಾನದಲ್ಲಿದ್ದು, ಕೇತುವು ದಶಮ ಸ್ಥಾನದಲ್ಲಿರುವರಿಂದ ಅವರು ಅಂದುಕೊಂಡ ಕೆಲಸವೆಲ್ಲವೂ ತಕ್ಷಣದಲ್ಲೇ ಆಗಲಿದ್ದು, ಎಲ್ಲಾ ರೀತಿಯಿಂದ ಎಲ್ಲರ ನೆರವು ದೊರೆಯಲಿದೆ, ಹಣಕಾಸಿನ ಹರಿವು ನಿರೀಕ್ಷಿತ ಮಟ್ಟಕ್ಕಿಂತ ಉತ್ತಮವಾಗಿದ್ದು, ಅರ್ಧಕ್ಕೆ ನಿಂತಿದ್ದ ವ್ಯಾಪಾರ-ವ್ಯವಹಾರಗಳು ಮತ್ತೆ ಆರಂಭವಾಗಲಿದ್ದು ಹೆಚ್ಚಿನ ಲಾಭ ತರಲಿವೆ, ಬಹುಕಾಲದಿಂದ ಸಂತಾನಾಪೇಕ್ಷಿಗಳಾದವರಿಗೆ ಸಂತಾನಭಾಗ್ಯ ದೊರೆಯಲಿದೆ. ಅಪರಿಚಿತ ಮಹಿಳೆ/ಪುರುಷರೊಂದಿಗೆ ಸಂಬಂಧ ಬೆಳೆಯಲಿದ್ದು, ಚಾರಿತ್ರ್ಯಕ್ಕೆ ಧಕ್ಕೆ ತರಬಹುದು, ದಶಮ ಸ್ಥಾನದಲ್ಲಿರುವ ಕೇತುವು ಬಂಧುಗಳೊಂದಿಗೆ ಇರುವ ವೈಷಮ್ಯವನ್ನು ದೂರ ಮಾಡುವನು, ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಉತ್ತಮ ಫಲಿತಾಂಶ ಬರಲಿದೆ. ಕೆಲಸ, ಕಾರ್ಯಗಳಲ್ಲಿ ಎಚ್ಚರದಿಂದಿರುವುದು ಉತ್ತಮ. ವಿಶೇಷವಾಗಿ ದುರ್ಗೆ ಹಾಗೂ ಗಣಪತಿಯನ್ನು ಆರಾಧಿಸಿ.



**ಕುಂಭ ರಾಶಿ :** ಕೇತುವಿನಿಂದಾಗಿ ಧನ ಸ್ಥಾನದಲ್ಲಿ ಸಂಚಾರ ಮಾಡುವುದರಿಂದ ಹಣಕಾಸಿನ ವಿಚಾರದಲ್ಲಿ ಮಾಡಿದ ಹೂಡಿಕೆ ಮೇಲೆ ಹೆಚ್ಚಿನ ಪ್ರಭಾವ ಬೀರಲಿದ್ದಾನೆ. ಕೆಲವೊಮ್ಮೆ ಇದೇ ವಿಷಯವಾಗಿ ಮಿತ್ರರೊಂದಿಗೆ ಮನಸ್ತಾಪವು ಉಂಟಾಗಬಹುದು. ಅಷ್ಟಮ ಕೇತುವು ಆರೋಗ್ಯದ ಮೇಲೆ ಹೆಚ್ಚಿನ ಪರಿಣಾಮ ಬೀರಬಹುದು. ಹಳೇ ಕಾಯಿಲೆಗಳು ಮತ್ತೆ ಮರುಕಳಿಸಲಿವೆ. ಮದುವೆ ವಿಚಾರದಲ್ಲಿ ಮನಸ್ತಾಪವುಂಟಾಗಲಿದೆ, ಮನೆಯಲ್ಲಿ ಹಿರಿಯರೊಂದಿಗೆ ಹಾಗೂ ಸ್ನೇಹಿತರೊಂದಿಗೆ ಯಾವುದೇ ಕಾರಣಕ್ಕೂ ಮನಸ್ತಾಪ ಮಾಡಿಕೊಳ್ಳಬೇಡಿ, ಮನೆಯಲ್ಲಿ ನಡೆಯಬೇಕಾಗಿರುವ ಮಂಗಳ ಕಾರ್ಯಗಳಿಗೆ ಅನೇಕ ಅಡ್ಡಿ-ಆತಂಕಗಳು ಎದುರಾಗಬಹುದು. ವಿದ್ಯಾರ್ಥಿಗಳಿಗೆ ಭರವಸೆಕೊಟ್ಟವರಿಂದ ನಿರಾಶೆಯುಂಟಾಗಲಿದೆ. ರಹಸ್ಯ ಪ್ರೀತಿ-ಪ್ರೇಮದ ವಿಷಯ ಬಯಲಾಗಿ ಅವಮಾನವಾಗಲಿದೆ. ಈಶ್ವರ, ದುರ್ಗೆ ಹಾಗೂ ವಿಷ್ಣು ಸಹಸ್ರ ನಾಮವನ್ನು ಪಠಿಸುವುದು ಮೇಲು. ಗಣಪತಿಯನ್ನು ಗರಿಕೆಯಿಂದ ವಿಶೇಷವಾಗಿ ಆರಾಧಿಸಿ.



**ಮೀನ ರಾಶಿ:** ಜನ್ಮಸ್ಥ ರಾಹುವು ನಿಮ್ಮ ಕೆಲಸ ಕಾರ್ಯಗಳಲ್ಲಾಗಲೀ, ವ್ಯಕ್ತಿತ್ವದಲ್ಲಾಗಲೀ ಅನಿರೀಕ್ಷಿತ ಬದಲಾವಣೆಯುಂಟಾಗಲಿದೆ. ಹಣ ಸಂಪಾದನೆಗೋಸ್ಕರ ದೂರ ಪ್ರಯಾಣ ಮಾಡಬೇಕಾಗಬಹುದು. ಸಮಾಜದಲ್ಲಿ ನಿಮ್ಮ ಘನತೆ,ಗೌರವ ಹೆಚ್ಚಲಿದೆ. ಮತ್ತೊಬ್ಬರಿಗೆ ಕೊಟ್ಟ ಹಣ ನಿಮ್ಮ ಸಮಯಕ್ಕೆ ಬಾರದೇ ಹೋಗಬಹುದು. ಸಪ್ತಮ ಸ್ಥಾನದಲ್ಲಿರುವ ಕೇತುವಿನಿಂದಾಗಿ ಮದುವೆ ಮೊದಲಾದ ಶುಭ ಕಾರ್ಯಗಳು ವಿನಾಕಾರಣ ಮುಂದೆ ಹೋಗಬಹುದು. ಕೆಲವೊಮ್ಮೆ ಆರೋಗ್ಯದಲ್ಲಿ ಏರುಪೇರಾಗುವ ಸಂಭವವಿದ್ದು, ಸಣ್ಣಪುಟ್ಟ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಗಬಹುದು, ಬಂಧುಗಳ ಬೆಂಬಲ ಸಿಗುವುದು ಅನುಮಾನ, ವ್ಯಾಪಾರ, ವ್ಯವಹಾರಗಳಲ್ಲಿ ಅಡ್ಡಿ-ಆತಂಕಗಳು ಎದುರಾಗಲಿವೆ. ಅದನ್ನು ಜಾಣ್ಮೆಯಿಂದ ನಿಭಾಯಿಸುವುದನ್ನು ಕಲಿಯಿರಿ. ಬೇರೆಯರ ವಿಚಾರದಲ್ಲಿ ಪ್ರವೇಶ ಮಾಡಿದಲ್ಲಿ ತಲೆದಂಡ ತೆರಬೇಕಾದೀತು. ಮತ್ತೊಬ್ಬರಿಂದ ಮಾನಹಾನಿಯಾಗಲಿದೆ. ಚಂಡಿ ಪಾರಾಯಣ ಹಾಗೂ ವಿಷ್ಣು ಸಹಸ್ರನಾಮ ಪಠಿಸಿರಿ ಶುಭವಾಗುತ್ತದೆ.

**ಮೇಲ್ಕಂಡ ಫಲಾಫಲ ವಿಚಾರಗಳು ಸರ್ವೇ ಸಾಮಾನ್ಯವಾಗಿದ್ದು, ಅವರವರ ಜಾತಕ ಹಾಗೂ ದಶಾಭುಕ್ತಿಗೆ ಅನುಗುಣವಾಗಿ ವ್ಯತ್ಯಾಸವಾಗುವ ಸಂಭವವಿದೆ. ಆದ್ದರಿಂದ ಹೆಚ್ಚಿನ ಮಾಹಿತಿಗಾಗಿ ನಿಮ್ಮ ವಿಶ್ವಸ್ಥ ಜೋತಿಷ್ಕರಲ್ಲಿ ವಿಚಾರಿಸಿ ತಿಳಿದುಕೊಳ್ಳಿ.**

# ಶೇ.100 ರಷ್ಟು ಸಾಕ್ಷರತೆ ಸಾಧಿಸುವ ಸಂಕಲ್ಪ



ಹೊನ್ನಾಳಿ, ಅ.29- ಕೇರಳ ಸೇರಿದಂತೆ ಕೆಲ ರಾಜ್ಯಗಳಲ್ಲಿರುವಂತೆ ರಾಜ್ಯದಲ್ಲಿಯೂ ಕೂಡ ಶೇ. 100ರಷ್ಟು ಸಾಕ್ಷರತಾ ಮಟ್ಟವನ್ನು ಸಾಧಿಸುವ ಸಂಕಲ್ಪವಿದ್ದು, ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಕಾರ್ಯಪ್ರವೃತ್ತವಾಗಲಿದ್ದು, ಶಾಲೆ ಬಿಟ್ಟ ಎಲ್ಲಾ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕರೆ ತರುವ ಕಾರ್ಯಕ್ರಮಗಳನ್ನು ಆಂದೋಲನದ ರೀತಿಯಲ್ಲಿ ನಡೆಸಲಾಗುವುದು ಎಂದು ಪ್ರೌಢ ಮತ್ತು ಪ್ರಾಥಮಿಕ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಮಾದನಬಾವಿಯಲ್ಲಿ ನಡೆಯುತ್ತಿರುವ ದಸರಾ ಬನ್ನಿ ಕೃಷಿ ಮೇಳ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿದ್ದ ಅವರು, ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಉಪಾಧ್ಯಕ್ಷ ಹೆಚ್.ಎ.ಉಮಾಪತಿಯವರ ಮನೆಯಲ್ಲಿ ಮಾಜಿ ಮುಖ್ಯಮಂತ್ರಿ ದಿ. ಎಸ್. ಬಂಗಾರಪ್ಪ ಅವರ ಹುಟ್ಟು ಹಬ್ಬವನ್ನು ಆಚರಿಸಿದ ಹಿನ್ನೆಲೆಯಲ್ಲಿ ಅವರ ನಿವಾಸಕ್ಕೆ ಭೇಟಿ ನೀಡಿ ಸುದ್ದಿಗಾರರನ್ನು ಕುರಿತು ಮಾತನಾಡಿದರು.

ಈಗಾಗಲೇ 9 ಸಾವಿರ ಶಿಕ್ಷಕರ ನೇಮಕ ಮಾಡಿಕೊಳ್ಳಲಾಗಿದೆ. ಇನ್ನು ಹೈದರಾಬಾದ್ ಕರ್ನಾಟಕ ಭಾಗದ 4 ಸಾವಿರ ಶಿಕ್ಷಕರ ನೇಮಕಾತಿ ಈಗಾಗಲೇ ನ್ಯಾಯಾಲಯದಲ್ಲಿದ್ದು, ಇತ್ಯರ್ಥವಾದ ಬಳಿಕ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

> **ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆ ತರುವ ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗುವುದು. ಮುಂದಿನ ವರ್ಷ ಬದಲಾವಣೆಗಳನ್ನು ಗಮನಿಸಬಹುದು.**
> **- ಮಧು ಬಂಗಾರಪ್ಪ,** ಶಿಕ್ಷಣ ಸಚಿವರು

ರಾಜ್ಯದಲ್ಲಿ ಸುಮಾರು 76 ಸಾವಿರ ಶಾಲೆಗಳಿವೆ. ತಾವು ಅಧಿಕಾರಕ್ಕೆ ಬಂದು 150 ದಿನಗಳಾಗಿದ್ದು, ಮುಂದಿನ ದಿನಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣದ ವ್ಯವಸ್ಥೆ ಮಾಡಲಾಗುವುದು. ಜೊತೆಗೆ ದೇಶದಲ್ಲಿ ಪ್ರಥಮ ಎನ್ನುವಂತೆ ವರ್ಷದಲ್ಲಿ 3 ಪರೀಕ್ಷೆಗಳನ್ನು ನಡೆಸಲಾಗುವುದು. ಪಠ್ಯ ಪುಸ್ತಕಗಳ ಗಾತ್ರ ಕಡಿಮೆ ಮಾಡುವುದು, ಉತ್ತಮ ಶಾಲಾ ವಾತಾವರಣ ಒದಗಿಸುವುದು ಕೂಡ ಸರ್ಕಾರದ ಉದ್ಧೇಶವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕ ಡಿ.ಜಿ. ಶಾಂತನಗೌಡ, ಮಾಜಿ ಶಾಸಕ ಡಾ.ಡಿ.ಬಿ.ಗಂಗಪ್ಪ, ಕಾಂಗ್ರೆಸ್ ಯುವ ನಾಯಕ ಎಚ್.ಎಸ್.ರಂಜಿತ, ಇನ್‌ಸೈಟ್ ಸಂಸ್ಥೆಯ ಅಧ್ಯಕ್ಷ ವಿನಯ್‌ಕುಮಾರ್ ಹಾಗು ಬಿಇಓ ನಂಜರಾಜ, ಬಿಆರ್‌ಸಿ ತಿಪ್ಪೇಶಪ್ಪ, ಅಕ್ಷರ ದಾಸೋಹ ಅಧಿಕಾರಿ ರುದ್ರಪ್ಪ ಶಿಕ್ಷಣ ಸಚಿವರನ್ನು ಅಭಿನಂದಿಸಿ, ಗೌರವಿಸಿದರು.

# ನಗರದಲ್ಲಿ ಖಾದಿ ಬಟ್ಟೆ ಜಾಗೃತಿ ಜಾಥಾ



ದಾವಣಗೆರೆ, ಅ.29- ಮಹಾತ್ಮ ಗಾಂಧೀಜಿ ಯವರ 154ನೇ ಜಯಂತಿ ಪ್ರಯುಕ್ತ ದೇಶಾದ್ಯಂತ ಅಕ್ಟೋಬರ್ 2 ರಿಂದ 31 ರವರೆಗೆ ಖಾದಿ ಮಹೋತ್ಸವ ಆಚರಿಸಲಾಗುತ್ತಿದೆ. ಈ ಸಂಬಂಧ ಜೈನ್ ಪದವಿ ಮಹಾವಿದ್ಯಾಲಯ ಹಾಗೂ ಜೈನ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಖಾದಿ ಬಟ್ಟೆ ಹಾಗೂ ಖಾದಿ ಉದ್ಯಮದ ಕುರಿತು ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಹರಿಹರ ಚರಕ ಮತ್ತು ಗ್ರಾಮೋದ್ಯೋಗ ಸಹಕಾರ ಸಂಘ, ಚಿತ್ರದುರ್ಗ ಸರ್ವೋದಯ ಖಾದಿ ಗ್ರಾಮೋದ್ಯೋಗ ಸಂಘ, ದಾವಣಗೆರೆ ಚರಕ ಮತ್ತು ಗ್ರಾಮೋದ್ಯೋಗ ಸಹಕಾರಿ ಸಂಘ, ಅಕ್ಕ ನಾಗಮ್ಮ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕಾ ಮಹಿಳಾ ಮಂಡಳಿ, ಶ್ರೀ ಭಾರತಾಂಬೆ ಮಹಿಳಾ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕಾ ಸಂಘ ಮತ್ತು ಶ್ರೀನಿಧಿ ಖಾದಿ ಮತ್ತು ಗುಡಿ ಕೈಗಾರಿಕೆಗಳ ಸಂಘ ಸುರಹೊನ್ನೆ ಇವರ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಟಿಎಂಸಿ ಅಂಡ್ ಟಿಎಂ ಮೆಮೋರಿಯಲ್ ಪಿಯು ಕಾಲೇಜಿನ ವಾಣಿಜ್ಯಶಾಸ್ತ್ರ ಉಪನ್ಯಾಸಕ ಬಿ.ಎಸ್. ಶಿವರಾಜ್ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ವಿದ್ಯಾರ್ಥಿಗಳಿಗೆ ಖಾದಿ ಬಟ್ಟೆಯ ಬಳಕೆ ಜಾಗೃತಿ ಮೂಡಿಸಲು ಜಾಥಾ ನಡೆಸಲಾಯಿತು. ಜೈನ್ ಪಾಲಿಟೆಕ್ನಿಕ್‌ನ ಮುಖ್ಯಸ್ಥ ಚೇತನ್ ಎಸ್.ಜಿ ಹಾಗು ಇತರರು ಉಪಸ್ಥಿತರಿದ್ದರು.

# ರಾಣೇಬೆನ್ನೂರಿನಲ್ಲಿ ಇಂದು ಬಾರಕೋಲು ಚಳವಳಿ

ರಾಣೇಬೆನ್ನೂರು, ಅ.29- ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಹುಟ್ಟಿಕೊಂಡ 'ನವಯುಗ' ಸಂಘಟನೆಯಿಂದ ಸರ್ಕಾರದ ವೈಫಲ್ಯಗಳ ವಿರುದ್ದ ನಾಳೆ ದಿನಾಂಕ 30 ರ ಸೋಮವಾರ ಬಾರಕೋಲ್ ಚಾಟಿ ಕಟಿಯುವುದರೊಂದಿಗೆ ಪ್ರತಿಭಟಿಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸುವುದಾಗಿ ಸಂಘಟನೆ ಸಂಚಾಲಕ ಸಂತೋಷ ಪಾಟೀಲ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರೈತರಿಗೆ ಪ್ರತಿದಿನ 6 ತಾಸು ಕರೆಂಟು ಕೊಡಬೇಕು, ರೈತರ ಸಹಕಾರಿ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ವಸೂಲಿಯನ್ನು ಒಂದು ವರ್ಷಕಾಲ ಮುಂದೂಡಬೇಕು. ಅವರ ಬೆಳೆ ವಿಮಾ ಹಣವನ್ನು ತಕ್ಷಣ ವಿತರಿಸುವ ಕ್ರಮ ಕೈಗೊಳ್ಳಬೇಕು ಎನ್ನುವ ಬೇಡಿಕೆ ನವಯುಗದ್ದಾಗಿದ್ದು, ಕೆಇಬಿ ಗಣೇಶ ದೇವಸ್ಥಾನದಿಂದ ಮೆರವಣಿಗೆಯೊಂದಿಗೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುತ್ತದೆಂದು ಪಾಟೀಲ ವಿವರಿಸಿದರು.

ತನ್ನ ಸರ್ಕಾರದ ಅವಧಿಯಲ್ಲಿ ತಾಲ್ಲೂಕಿನ 10500 ರೈತರ ಬೆಳೆ ವಿಮಾ ಹಣ ಬಾಕಿ ಇಟ್ಟು ಕೊಂಡಿದ್ದ ಬಿಜೆಪಿ, ಈಗ ರೈತರ ಪರ ಹೋರಾಟ ಮಾಡುವ ನೈತಿಕ ಹಕ್ಕು ಕಳೆದು ಕೊಂಡಿದೆ ಎಂದ ಸಂತೋಷ, ನೂತನ ಶಾಸಕ ಪ್ರಕಾಶ ಕೋಳಿವಾಡ ಅವರು, ಸರ್ವ ಪಕ್ಷಗಳ ಮುಖಂಡರು, ರೈತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಜಂಟಿ ಸಭೆ ಕರೆದು ಚರ್ಚಿಸಬೇಕು ಎಂದು ಸಂತೋಷ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

# ನಗರದಲ್ಲಿ ಇಂದಿನಿಂದ ಚಿತ್ರಕಲಾವಿದ ಸೋಮಶೇಖರ ಸಾಲಿ ಚಿತ್ರಕಲಾ ಪ್ರದರ್ಶನ

ದಾವಣಗೆರೆ, ಅ. 29- ವಿಜಯಪುರದ ಸೋಮಶೇಖರ ಸಾಲಿ ಪ್ರತಿಷ್ಠಾನದ ವತಿಯಿಂದ ಹಿರಿಯ ಚಿತ್ರಕಲಾವಿದ ಸೋಮಶೇಖರ ಸಾಲಿ ಅವರ ಜನ್ಮ ಶತಮಾನೋತ್ಸವದ ಪ್ರಯುಕ್ತ ನಾಳೆ ದಿನಾಂಕ 30 ರಿಂದ ನವೆಂಬರ್ 1 ರವರೆಗೆ ನಗರದ ದೃಶ್ಯಕಲಾ ಮಹಾವಿದ್ಯಾಲಯದ ದೃಶ್ಯ ಕಲಾ ಗ್ಯಾಲರಿಯಲ್ಲಿ ಪ್ರತಿ ದಿನ ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ಚಿತ್ರಕಲಾ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಚಿತ್ರಕಲಾವಿದ ದತ್ತಾತ್ರೇಯ ಎನ್. ಭಟ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಡಿನ ಹಿರಿಯ ಚಿತ್ರಕಲಾವಿದ ಸೋಮಶೇಖರ ಸಾಲಿ ಅವರು ಭಾರತೀಯ ಸಾಂಪ್ರದಾಯಿಕ ಶೈಲಿಯ ಚಿತ್ರಕಲಾವಿದರಾಗಿದ್ದು, ಬಹುಮುಖ ಕಲಾವಿದರು. ಇವರ ಜನ್ಮ ಶತಮಾನೋತ್ಸವದ ಅಂಗವಾಗಿ ಮೂರು ದಿನಗಳ ಕಾಲ ಚಿತ್ರಕಲಾ ಪ್ರದರ್ಶನ ಏರ್ಪಾಡಾಗಿದೆ ಎಂದರು.

ದಿನಾಂಕ 30 ರ ಸೋಮವಾರ ಬೆಳಿಗ್ಗೆ 10.30 ಕ್ಕೆ ದೃಶ್ಯ ಕಲಾ ಗ್ಯಾಲರಿಯಲ್ಲಿ ದಾವಣಗೆರೆ ವಿವಿ ಕುಲಪತಿ ಪ್ರೊ.ಬಿ.ಡಿ.ಕುಂಬಾರ ಅವರು ಚಿತ್ರಕಲಾ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕಲಾ ವಿಮರ್ಶನ ಡಾ.ಡಿ.ಎ. ಉಪಾಧ್ಯ, ಉಮಾಪತಿ ಶರ್ಮಾ, ಡಾ. ಜೈರಾಜ್ ಎಂ. ಚಿಕ್ಕಪಾಟೀಲ್ ಭಾಗವಹಿಸಲಿದ್ದು, ಕಲಾವಿದ ಪಿ.ಎಸ್. ಕಡೇಮನಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಂತೋಷ್ ಕುಮಾರ್ ಕುಲಕರ್ಣಿ, ಹರೀಶ್ ಹೆಡ್ಡನವರ್, ಶಿವಶಂಕರ್ ಸುತಾರ್ ಇದ್ದರು.

# ಬೆಂಗಳೂರು ವಿಭಾಗ ಮಟ್ಟದ ಕ್ರಿಕೆಟ್ ದಾವಣಗೆರೆ ತಂಡಕ್ಕೆ ಪ್ರಥಮ ಸ್ಥಾನ



ದಾವಣಗೆರೆ, ಅ. 29- ಶಾಲಾ ಶಿಕ್ಷಣ ಸಮಿತಿ ವತಿಯಿಂದ ನಡೆಸಲಾಗುವ 14 ಮತ್ತು 17 ವರ್ಷ ವಯೋಮಿತಿಯ ಬೆಂಗಳೂರು ವಿಭಾಗ ಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ 14 ವರ್ಷ ವಯೋಮಿತಿ ದಾವಣಗೆರೆ ತಂಡಕ್ಕೆ ಪ್ರಥಮ ಸ್ಥಾನ ಲಭಿಸಿದೆ.

ಅಂತಿಮ ಪಂದ್ಯದಲ್ಲಿ ಬೆಂಗಳೂರು ಉತ್ತರ ತಂಡವು 8 ಓವರ್‌ಗಳಲ್ಲಿ 63 ರನ್ ಗಳಿಸಿದ್ದು, ದಾವಣಗೆರೆ ತಂಡ 1 ವಿಕೆಟ್ ನಷ್ಟಕ್ಕೆ 64 ರನ್ ಗಳಿಸಿ ವಿಜಯಶಾಲಿಯಾಗಿದೆ. ದಾವಣಗೆರೆ ತಂಡದ ಸುಹಾನ 40 ರನ್, ಶಿವರಾಜ್ 15 ರನ್ ಹಾಗೂ ತೇಜಸ್ ನಾಯ್ಕ 7 ರನ್‌ಗಳನ್ನು ಪಡೆದು ಪಂದ್ಯದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಈ ಪಂದ್ಯದಲ್ಲಿ ಸುಹಾಸ್ ಕೊನೆಯ 6 ಎಸೆತಕ್ಕೆ 17 ರನ್ ಗಳಿಸುವುದರೊಂದಿಗೆ ತಂಡಕ್ಕೆ ವಿಜಯ ಮಾಲೆ ತಂದು ಕೊಟ್ಟಿದ್ದಾರೆ. ತರಬೇತುದಾರರಾಗಿ ಟಿ. ತಿಮ್ಮೇಶ್, ತಂಡದ ವ್ಯವಸ್ಥಾಪಕ ಹೆಚ್.ಎಂ. ವಸಂತಕುಮಾರ್, ಕೆ.ಎಸ್.ಜಗದೀಶ್ ಅವರನ್ನು ಡಿಡಿಪಿಐ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ, ಶಾಲಾ ಶಿಕ್ಷಣ ಇಲಾಖೆ ಅಭಿನಂದಿಸಿದ್ದಾರೆ.

# ಭ್ರಷ್ಟಾಚಾರ ನಿಗ್ರಹ ಜಾಗೃತಿ ಅರಿವು ಸಪ್ತಾಹ

ಭ್ರಷ್ಟಾಚಾರದ ವಿರುದ್ಧ ಜಾಗೃತಿ ಅರಿವು ಸಪ್ತಾಹವನ್ನು ಇಂದಿನಿಂದ ನವೆಂಬರ್ 5 ರವರೆಗೆ ನಡೆಸಲಾಗುತ್ತಿದ್ದು, ವಿವಿಧ ಸರ್ಕಾರಿ, ಅರೆ ಸರ್ಕಾರಿ ಹಾಗೂ ವಿವಿಧ ಅನುದಾನಿತ ಸಂಸ್ಥೆಗಳಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಭ್ರಷ್ಟಾಚಾರ ನಿಗ್ರಹದ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸುವ ಮೂಲಕ ಜಾಗೃತಿ ಅರಿವು ಸಪ್ತಾಹವನ್ನು ಆಚರಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ.

# ಹರಿಹರದಲ್ಲಿ ಇಂದು ಬೃಹತ್ ಉದ್ಯೋಗ ಮೇಳ

ದಾವಣಗೆರೆ, ಅ. 29- ಶ್ರೀ ಜಿ. ಮಲ್ಲಿಕಾರ್ಜುನಪ್ಪ ಮತ್ತು ಶ್ರೀಮತಿ ಹಾಲಮ್ಮ ಚಾರಿಟಿ ಫೌಂಡೇಶನ್ ವತಿಯಿಂದ ಹರಿಹರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ನಾಳೆ ದಿನಾಂಕ 30ರ ಸೋಮವಾರ ಬೃಹತ್ ಉದ್ಯೋಗ ಮೇಳ ಹಮ್ಮಿಕೊಂಡಿರುವುದಾಗಿ ಟ್ರಸ್ಟ್‌ನ ಸದಸ್ಯ ಎಂ.ಆರ್. ಪ್ರಭುದೇವ್ ತಿಳಿಸಿದ್ದಾರೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಸಂಸದ ಜಿ.ಎಂ. ಸಿದ್ದೇಶ್ವರ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಬಿ.ಪಿ. ಹರೀಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಹರಿಹರ ನಗರ ತಾಲ್ಲೂಕು ಬಿಜೆಪಿ ಅಧ್ಯಕ್ಷ ಅಜಿತ್ ಸಾವಂತ್, ಗ್ರಾಮಾಂತರ ಮಂಡಲ ಅಧ್ಯಕ್ಷ ಲಿಂಗರಾಜು, ಟ್ರಸ್ಟಿ ಜಿ.ಎಸ್. ಅನಿತ್ ಕುಮಾರ್ ಹಾಗೂ ಇತರರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ತೇಜಸ್ವಿನಿ ಕಟ್ಟಿಮನಿ ಟಿ.ಆರ್. ಮಾತನಾಡಿ, ಉದ್ಯೋಗ ಮೇಳದಲ್ಲಿ 50 ಕ್ಕೂ ಹೆಚ್ಚಿನ ಕಂಪನಿಗಳು ಭಾಗವಹಿಸಲಿದ್ದು, ಆರು ಸಾವಿರಕ್ಕೂ ಅಧಿಕ ಉದ್ಯೋಗಾವಕಾಶಗಳು ಲಭ್ಯವಿವೆ. ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಪದವಿ, ಇಂಜಿನಿಯರಿಂಗ್ (ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕಲ್, ಮೆಕ್ಯಾನಿಕಲ್, ಕೆಮಿಕಲ್), ಎಂಬಿಎ ಮುಗಿಸಿದ ವಿದ್ಯಾರ್ಥಿಗಳು ಈ ಬೃಹತ್ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದಾಗಿದೆ ಎಂದು ಹೇಳಿದರು.

ಮೇಳದಲ್ಲಿ ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ. ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ದಾಖಲೆಗಳು ಮತ್ತು ಸ್ವ ವಿವರದೊಂದಿಗೆ ಕನಿಷ್ಠ ಐದು ಸೆಟ್ ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ತರಬೇಕಿದೆ ಎಂದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ. ವಿರುಪಾಕ್ಷಪ್ಪ ಹೆಚ್ ಮಾತನಾಡಿದರು.

ಉದ್ಯೋಗ ಮೇಳದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು https://forms.gle/BN5KqYfovodCXzAQ8 ಲಿಂಕ್ ಮೂಲಕ ತಮ್ಮ ಸ್ವ ವಿವರವನ್ನು ನೋಂದಾಯಿಸಬಹುದು. ಮಾಹಿತಿಗಾಗಿ ಮೊ. 8296502393, 7892956667ಗೆ ಸಂಪರ್ಕಿಸಬಹುದು. ಪತ್ರಿಕಾಗೋಷ್ಠಿಯಲ್ಲಿ ಮಂಜುನಾಥ್ ಉಪಸ್ಥಿತರಿದ್ದರು.

## ನ.30ರಂದು ವಿವಿಧ ಕಾರ್ಯಕ್ರಮಗಳು

**ಬರುವ ನವೆಂಬರ್ 30ರಂದು ದಿ. ಜಿ ಮಲ್ಲಿಕಾರ್ಜುನಪ್ಪನವರ ಪುಣ್ಯ ಸ್ಮರಣೆಯ ನಿಮಿತ್ತ, ನವೆಂಬರ್ ತಿಂಗಳಿನಲ್ಲಿ ಉದ್ಯೋಗ ಮೇಳ, ಉಚಿತ ವೈದ್ಯಕೀಯ ಶಿಬಿರ, ವಾಕಥಾನ್, ಯುವ ಸಂವಾದ, ಸಕ್ರಿಯ ಮಹಿಳಾ ಸಂಘಗಳಿಗೆ, ಸಣ್ಣ ಕೈಗಾರಿಕೆಗೆ ಬೇಕಾದ ಅಗತ್ಯ ಸಂಪನ್ಮೂಲಗಳ ವಿತರಣೆ ಮುಂತಾದ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಎಂ.ಆರ್. ಪ್ರಭುದೇವ್ ಹೇಳಿದರು.**

# ಸಾಧನೆ ಮಾತನಾಡಬೇಕು, ಮಾತನಾಡುವುದೇ ಸಾಧನೆ ಆಗಬಾರದು



**ಮಹಾಶರಣ ಮಾಗನೂರು ಬಸಪ್ಪನವರ 28ನೇ ಪುಣ್ಯ ಸ್ಮರಣೆ ಕಾರ್ಯಕ್ರಮ ಇಂದು**

ಕಾಲ ಮೇಲೆ ಕೈಯ್ಯನೂರಿ ಕೋಲು ಹಿಡಿಯುವ ಮುನ್ನ ಮುಪ್ಪಿನಿಂದ ಒಪ್ಪ ಅಳಿಯುವ ಮುನ್ನ ಎಂಬ ಜಗಜ್ಯೋತಿ ಬಸವೇಶ್ವರರ ನುಡಿಯಂತೆ ಗುರು ಲಿಂಗ ಜಂಗಮ ಪ್ರೇಮಿಯಾಗಿ ತನು ಮನ ಧನವನ್ನು ಗುರುಲಿಂಗ ಜಂಗಮಕ್ಕೆ ಅರ್ಪಿಸಿ ತಮ್ಮ ಜೀವಿತಾವಧಿಯಲ್ಲಿ ಸಾಧಿಸಿಕೊಂಡ ಮಹಾಶರಣ ಮಾಗನೂರು ಬಸಪ್ಪನವರು ಸರಳರೆಂದು, ಸಜ್ಜನರೆಂದು, ಕಾಯಕ ದಾಸೋಹಿ ಗಳಾಗಿ ಸಾರ್ವಜನಿಕ ಜೀವನವನ್ನು ಹಸನಾಗಿ ಬಾಳಿ ಜೀವಿಸಿ ಹೆಸರಾದವರು.

ಗಾಂಧಿ ತತ್ವದಂತೆ 'ಸರಳ ಜೀವನ, ಉದಾತ್ತ ಚಿಂತನೆ' ಎಂಬ ಮಾತಿನಂತೆ ತಮ್ಮ ಜೀವನದುದ್ದಕ್ಕೂ ಅಳವಡಿಸಿಕೊಂಡು ಬಾಳಿದವರು. ಬಡತನದಲ್ಲಿ ಹುಟ್ಟಿ ಕಷ್ಟ, ಸಮಸ್ಯೆಗಳಲ್ಲಿ ಬೆಳೆದು ಬಾಲ್ಯದಲ್ಲಿಯೇ ತಂದೆ-ತಾಯಿಯವರನ್ನು ಕಳೆದುಕೊಂಡು ಅನಾಥರಾಗಿ ಒಪ್ಪತ್ತಿನ ಕೂಳಿಗೆ ಬರಿಗಾಲು, ಬರಿಗೈಯಲ್ಲಿ ದಾವಣಗೆರೆಗೆ ಬಂದು ಕೆಲವೇ ವರ್ಷಗಳಲ್ಲಿ ಅಂಜದೆ ,ಅಳುಕದೆ ಕಷ್ಟ ನಿಷ್ಠೂರಗಳಿಗೆ ಎದೆಗುಂದದೆ, ಕಾಯಕದಲ್ಲಿಯೇ ಕೈಲಾಸ ಕಂಡ ಈ ಸಂಸ್ಕಾರವಂತರಿಗೆ ಅವರ ಪ್ರಾಮಾಣಿಕತೆ, ನಿಷ್ಠೆ , ಶಿಸ್ತು, ಆತ್ಮವಿಶ್ವಾಸ, ದೇವರಲ್ಲಿ ಅಚಲವಾದ ನಂಬಿಕೆ, ದೃಢ ಸಂಕಲ್ಪ, ದಾನ ಗುಣ ಎಂಬ ಸಪ್ತ ಮೌಲ್ಯಗಳು ಅವರ ಬದುಕಿನ ಸಾಧನೆಯ ಕಾಮನಬಿಲ್ಲುಗಳಾದವು.

ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿ ಪ್ರತಿ ಹಂತದಲ್ಲೂ ತಮ್ಮ ಬುದ್ಧಿಶಕ್ತಿಯನ್ನು ಉಪಯೋಗಿಸಿ ಎಲ್ಲ ವರ್ಗದ ಸಾವಿರಾರು ಬಡ ವಿದ್ಯಾರ್ಥಿಗಳಿಗೆ ದಾರಿದೀಪವಾಗಿ ಸಮಾಜಮುಖಿ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸಮಾಜಕ್ಕೆ ಮಾಗಿದ ಹಣ್ಣಾಗಿ ಸ್ವಾದ ಉಣ ಬಡಿಸಿದ ಶರಣ ಮಾಗನೂರು ಬಸಪ್ಪನವರ ನೆನಪು ಪ್ರಾಥಃಸ್ಮರಣೀಯ ವಾದದ್ದು. ಲಿಂಗ ಪೂಜೆ ಜಂಗಮ ದಾಸೋಹ ಇವೆರಡು ಪರಿಕಲ್ಪನೆಗಳು ವ್ಯಕ್ತಿ ಕಲ್ಯಾಣ ಮತ್ತು ಲೋಕ ಕಲ್ಯಾಣಕ್ಕೆ ಅಗತ್ಯವಾದ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ. ಲಿಂಗ ಪೂಜೆಯಿಂದ ಆತ್ಮೋದ್ಧಾರ ಮಾಡಿಕೊಳ್ಳಬೇಕು.

ಜಂಗಮ ದಾಸೋಹದ ಮೂಲಕ ಆತ್ಮೋದ್ಧಾರದ ಶಕ್ತಿಯನ್ನು ಲೋಕಕಲ್ಯಾಣಕ್ಕೆ ಬಳಸಬೇಕು. ಅದಕ್ಕಾಗಿಯೇ ಬಸವಣ್ಣನವರು ಎನ್ನ ಲಿಂಗವೆಸನಿ ಜಂಗಮ ಪ್ರೇಮಿ ಎಂದೆನಿಸಯ್ಯ ಎಂದು ಪ್ರಾರ್ಥಿಸುತ್ತಾರೆ. ಹೀಗೆ ಲಿಂಗವೇ ಜಂಗಮ ಪ್ರೇಮಿಯಾದ ಶರಣ ಮಾಗನೂರು ಬಸಪ್ಪನವರು ಆರೂಢ ದಾಸೋಹಿ, ಧರ್ಮ ಚಿಂತಾಮಣಿ, ಅನುಪಮ ದಾನಿ ಎಂದೇ ಜನಮಾನಸದಲ್ಲಿ ನೆಲೆ ನಿಂತಿದ್ದಾರೆ. ಬಸವಾದಿ ಶಿವಶರಣರ ತತ್ವಗಳಂತೆ ಬದುಕಿ ತೋರಿಸಿದವರು. ಸಿರಿಗೆರೆ ತರಳುಬಾಳು ಜಗದ್ಗುರು ಬೃಹನ್ಮಠದ ಹಿರಿಯ ಜಗದ್ಗುರುಗಳಾದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ನಡೆದು ಜಾತ್ಯತೀತವಾಗಿ ದಾವಣಗೆರೆಯ ಎಲ್ಲಾ ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ ಅಭ್ಯುದಯಕ್ಕೆ ನೆರವಾದವರು.

ಈಗ ದಾವಣಗೆರೆಯಲ್ಲಿ ಇರುವ ಹಲವಾರು ಪ್ರತಿಷ್ಠಿತ ಸಂಘ-ಸಂಸ್ಥೆಗಳ ಸ್ಥಾಪನೆಯಲ್ಲಿ ಮಾಗನೂರು ಬಸಪ್ಪನವರ ಶ್ರಮ ಅವಿಸ್ಮರಣೀಯ. ಒಳ ಹೊರಗೊಂದಾದ, ಶರಣರಂತೆ ಬಾಳಿದ ಬಸಪ್ಪನವರು ತಮ್ಮ ಆತ್ಮಕಥೆಯಲ್ಲಿ ಯಾವ ಮುಚ್ಚು ಮರೆ ಇಲ್ಲದೆ ತಮ್ಮ ಬದುಕಿನ ಸಂಗತಿಗಳನ್ನು ದಾಖಲಿಸಿದ್ದಾರೆ. ಹೀಗೆ ತನ್ನನ್ನು ಸಮಾಜದ ಎದುರಿಗೆ ತೆರೆದುಕೊಳ್ಳಲು ಅಪಾರ ಎದೆಗಾರಿಕೆ ಮತ್ತು ನೈತಿಕತೆಬೇಕು. ನೈತಿಕ ಮಾರ್ಗದಲ್ಲಿ ನಡೆದು ಶ್ರೀಮಂತರಾಗ ಬಹುದು ಎಂದು ತೋರಿಸಿಕೊಟ್ಟದ್ದಲ್ಲದೆ ಮಾನವೀಯ ಮೌಲ್ಯಗಳು ಪ್ರಸ್ತುತ ಸಮಾಜಕ್ಕೆ ಸರ್ವತಾ ಅನುಕರಣೀಯ.

ಈ ಭೂಮಿಯಲ್ಲಿ ಸರಿಸುಮಾರು 95 ವರ್ಷಗಳು ಬೆಳಗಿದಂತಹ ಪುಣ್ಯಾತ್ಮ. ಇಂತಹ 'ಬಹುಜನ ಹಿತಾಯ ಬಹುಜನ ಸುಖಾಯ'ಕ್ಕೆ ತನ್ನ ಬೆಳಕನ್ನು ಹರಿಸಿದ ಒಂದು ದಿವ್ಯ ಆತ್ಮ ಜ್ಯೋತಿ ಎಂದರೆ ತಪ್ಪಾಗಲಾರದು. ಜಗದ ಬದುಕಿನ ಆರಂಭದಿಂದ ಹಲವಾರು ಲೌಕಿಕ ಅಡೆ-ತಡೆಗಳ ಮಧ್ಯ ಸಂಕಲ್ಪ ವಿಕಲ್ಪಗಳಿಂದ ಕೂಡಿದ ವಿವಿಧ ಮನೋಭಾವದ ಜನರೊಡನೆ ವಿಶಿಷ್ಟ ಕೊಡುಗೆಯನ್ನು ಕೊಟ್ಟ ಮಹಾನ್ ಚೇತನ. ಒಬ್ಬ ವ್ಯಕ್ತಿ ಸಾಧಾರಣ ಪರಿಸ್ಥಿತಿಯಿಂದ ಒಂದು ಅಸಾಧಾರಣ ಶಕ್ತಿಯಾಗಿ ಬೆಳೆದು ಹೆಮ್ಮರವಾದ ಉದಾಹರಣೆಗೆ ಇವರ ಜೀವನ ಕಳಸ ಪ್ರಾಯ ವಾಗಿದೆ. ತಮ್ಮ ಇಡೀ ಜೀವಿತಾವಧಿಯಲ್ಲಿ ಪಾದರಸದಂತೆ ಲವಲವಿಕೆಯಿಂದ ಸಮಾಜಮುಖಿ ಯಾಗಿ ಜನಸಾಮಾನ್ಯರ ಏಳಿಗೆಗೆ ದುಡಿದು ಎಲ್ಲಾ ಜಾತಿ ಮತದವರಿಗೂ ಸಮಾನ ಮಾನ್ಯತೆ ಯನ್ನು ಕಲ್ಪಿಸಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ಅವರವರ ಸಂಪ್ರದಾಯಗಳನ್ನು ಗೌರವಿಸುತ್ತಾ ಕೇವಲ ಸಮಾಜಕ್ಕೆ ದುಡಿದ ವ್ಯಕ್ತಿತ್ವ ಇವರದು. ಇವರ ಸೇವೆಯ ಪ್ರಕಾಶಮಾನವಾದ ಕೆಲಸಗಳು ಈಗಲೂ ದಾವಣಗೆರೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಹಚ್ಚ ಹಸಿರಾಗಿ ಬೆಳಗುತ್ತಿವೆ. ಈ ರೀತಿಯ ದಿವ್ಯಾತ್ಮಬಾಳಿ ಬೆಳಗಿದ ಭೂಮಿ ಇದಾಗಿದೆ. ಅವರ ಪುಣ್ಯಸ್ಮರಣೆಯ ಈ ದಿನದಂದು ಅವರ ಸ್ಮರಣೆಯಲ್ಲಿ ಹತ್ತಾರು ಇನ್ನೂ ಒಳ್ಳೊಳ್ಳೆಯ ಕೆಲಸಗಳು ಈ ನಾಡಿನಲ್ಲಿ ನಡೆಯುವಂತಾಗಲಿ. ಇಂತಹ ಶರಣರು ಮತ್ತೆ ಮತ್ತೆ ನಮ್ಮನಾಡಿನಲ್ಲಿ ಹುಟ್ಟುವಂತಾಗಲಿ .

***ದೇವನಗರಿ ಎಂಬ ಪ್ರಣತೆಯಲ್ಲಿ***
***ಕಾಯಕನಿಷ್ಠೆ ಎಂಬ ತೈಲವ ನೆರೆದು ಶಿಸ್ತು ಎಂಬ ಬತ್ತಿಗೆ***
***ಮಾಗನೂರು ಬಸಪ್ಪನವರೆಂಬ ಜ್ಯೋತಿಯ ಹೊತ್ತಿಸಲು***
***ತೊಳಗಿ ಬೆಳಗಿ ನಂದಾದೀಪವಾಗಿ ಈಗಲೂ***
***ಉರಿಯುತ್ತಿರುವ ಬಸಪ್ಪನವರ ಬದುಕು ಸರ್ವರಿಗೂ***
***ಆದರ್ಶಪ್ರಾಯ, ಅನುಕರಣೀಯ, ಅಭಿನಂದನಾರ್ಹ.***

(ಶರಣ ಸಂಸ್ಕೃತಿಯಲ್ಲಿ ಬದುಕಿ, ಶರಣ ಸಂಸ್ಕೃತಿಯನ್ನು ಉಳಿಸೋಣ, ಬೆಳೆಸೋಣ, ರಕ್ಷಿಸೋಣ.)

**- ಡಾ. ಅನಿತಾ ಹೆಚ್. ದೊಡ್ಡಗೌಡರ್,**
ಸಹಾಯಕ ಪ್ರಾಧ್ಯಾಪಕರು, ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಶಿಕ್ಷಣ ಮಹಾವಿದ್ಯಾಲಯ,
ದಾವಣಗೆರೆ. 99021 98655.



## ಕನ್ನಡ ಸುವರ್ಣ ಸಿರಿ ಪ್ರಶಸ್ತಿಗೆ ಆಹ್ವಾನ

ದಾವಣಗೆರೆ, ಅ. 29- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಸಂಗೀತ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಮೈಸೂರು ರಾಜ್ಯ ಕರ್ನಾಟಕ ರಾಜ್ಯವಾಗಿ ಮರು ನಾಮಕರಣವಾಗಿ ಐವತ್ತು ವರ್ಷಗಳು ಪೂರೈಸಿದ ಕರ್ನಾಟಕ ಸುವರ್ಣ ಮಹೋತ್ಸವದ ಅಂಗವಾಗಿ 'ಕನ್ನಡ ಸುವರ್ಣ ಸಿರಿ' ರಾಜ್ಯ ಪ್ರಶಸ್ತಿ ಘೋಷಿಸಿ ವಿತರಿಸಲಾಗುವುದು ಎಂದು ಕಲಾಕುಂಚ ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಸಾರ್ವಜನಿಕವಾಗಿ ಆಸಕ್ತ, ಕನ್ನಡಪರ ಸಾಧಕರು ನಾಡಿದ್ದು ದಿನಾಂಕ 31ರೊಳಗೆ ತಮ್ಮ ಸಾಧನೆ ಕುರಿತಂತೆ ವ್ಯಾಟ್ಸಾಪ್ ಸಂಖ್ಯೆಗೆ ಕಳುಹಿಸಬಹುದಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಕೆ.ಹೆಚ್. ಮಂಜುನಾಥ್ ತಿಳಿಸಿದ್ದಾರೆ. ವಿವರಕ್ಕೆ : 9538732777 ಈ ವ್ಯಾಟ್ಸಾಪ್ ಸಂಖ್ಯೆಗೆ ಸಂಪರ್ಕಿಸಬಹುದು ಎಂದು ದಾವಣಗೆರೆ ಕಲಾಕುಂಚ ಎಂ.ಸಿ.ಸಿ.ಶಾಖೆಯ ಅಧ್ಯಕ್ಷರಾದ ಶ್ರೀಮತಿ ಪ್ರಭಾ ರವೀಂದ್ರ ವಿನಂತಿಸಿದ್ದಾರೆ.

## ಜಯಂತಿ ಆಚರಣೆ ಜೊತೆಗೆ ತತ್ವಾದರ್ಶಗಳ ಅಳವಡಿಕೆ ಅವಶ್ಯ



ರಾಣೇಬೆನ್ನೂರು, ಅ.29- ಮಹಾತ್ಮರ ಜಯಂತಿ, ಪುಣ್ಯತಿಥಿ ಆಚರಿಸುವುದರ ಜೊತೆಗೆ ಅವರ ತತ್ವಾದರ್ಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡರೆ ಆಚರಣೆ ಗಳಿಗೆ ಮಹತ್ವ ಬರಲಿದೆ ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು. ತಾಲ್ಲೂಕು ಪಂಚಾಯ್ತಿ ಸಭಾಭವನದಲ್ಲಿ ನಿನ್ನೆ ಏರ್ಪಾಡಾಗಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ತನ್ನ ಬದುಕು ಕಟ್ಟಿಕೊಳ್ಳಲು ಹಿಂಸಾ ಮಾರ್ಗ ಹಿಡಿದಿದ್ದ ರತ್ನಾಕರ, ನಾರದರ ಬೋಧನೆಯಿಂದ ಸಾತ್ವಿಕ ಬದುಕಿಗೆ ಬದಲಾಗಿ, ಮಹತ್ತರವಾದ ರಾಮಾಯಣ ಗ್ರಂಥವನ್ನು ಮನುಕುಲಕ್ಕೆ ಅರ್ಪಿಸಿ, ವಾಲ್ಮೀಕಿ ಮಹರ್ಷಿಗಳಾದರು. ಅವರ ಹೆಸರು ಇಂದು ಚಿರಾಯು ಆಗಿದೆ ಎಂದು ಹೇಳಿದ ಶಾಸಕರು, ಅಪೂರ್ಣಗೊಂಡಿರುವ ವಾಲ್ಮೀಕಿ ಭವನ ಪೂರ್ಣಗೊಳಿಸುವ ಭರವಸೆ ನೀಡಿದರು. ನಗರಸಭೆ ಸದಸ್ಯರಾದ ಶಶಿ ಬಸೇನಾಯ್ಕರ, ಪ್ರಭಾವತಿ ತಿಳವಳ್ಳಿ, ಜಯಶ್ರೀ ಪಿಸೆ, ಗಂಗಮ್ಮ ಹಾವನೂರ, ಪ್ರಕಾಶ ಪೂಜಾರ ಮತ್ತು ಸಮಾಜದ ಮುಖಂಡರಾದ ಚಂದ್ರಪ್ಪ ಬೇಡರ, ರವಿ ಪಾಟೀಲ, ಸಣ್ಣ ತಮ್ಮಪ್ಪ ಬಾರ್ಕಿ, ಅಧಿಕಾರಿಗಳಾದ ಎಂ.ಎಚ್.ಪಾಟೀಲ, ಹನುಮಂತಪ್ಪ ಶಿರಹಟ್ಟಿ, ಸುಮಲತಾ, ದೇವಲಾನಾಯ್ಕ ಮತ್ತಿತರರಿದ್ದರು.

## ಶಾಲೆಯಲ್ಲಿ ಮಕ್ಕಳಂತೆ ಆಟವಾಡಿದ ತಾಯಂದಿರು





**ಸೋಮೇಶ್ವರ ವಿದ್ಯಾಲಯದಲ್ಲಿ ಪೋಷಕರ ಕ್ರೀಡಾಕೂಟ**

ದಾವಣಗೆರೆ, ಅ. 29 - ನಗರದ ಶ್ರೀ ಸೋಮೇಶ್ವರ ವಿದ್ಯಾಲಯದಲ್ಲಿ ಪೋಷಕರಿಗಾಗಿ ಕ್ರೀಡಾಕೂಟ ಏರ್ಪಡಿಸಲಾಗಿತ್ತು. ಮ್ಯೂಸಿಕಲ್ ಚೇರ್, ಥ್ರೋ ಬಾಲ್, ಕೇರಂ ಸೇರಿದಂತೆ ಹಲವು ಕ್ರೀಡೆಗಳನ್ನು ಅಯೋಜಿಸಲಾಗಿತ್ತು.

ಕ್ರೀಡಾಕೂಟವನ್ನು ಉದ್ದೇಶಿಸಿ ಮಾತನಾಡಿದ ಶಾಲಾ ಪ್ರಾಂಶುಪಾಲರಾದ ಪ್ರಭಾವತಿ, ಸದಾ ಮಕ್ಕಳ ಆರೈಕೆ, ಪೋಷಣೆಯಲ್ಲಿ ಪೋಷಕರು ಇರುತ್ತಾರೆ, ಈ ಕಾರಣಕ್ಕಾಗಿ ಪೋಷಕರಿಗೂ ಸಹ ಸ್ವಲ್ಪ ರಿಲ್ಯಾಕ್ಸ್ ಆಗಲು ಇಂಥ ಕಾರ್ಯಕ್ರಮ ಆಯೋಜನೆ ಮಾಡಬೇಕೆಂದು ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ. ಎಂ ಸುರೇಶ್ ಅವರು ನೀಡಿದ್ದ ಸಲಹೆಯಂತೆ ಈ ಕ್ರೀಡಾಕೂಟ ಏರ್ಪಡಿಸಲಾಗಿದೆ ಎಂದು ಹೇಳಿದರು. ಪೋಷಕರು ಶಾಲೆಯೊಂದಿಗೆ ಉತ್ತಮ ಒಡನಾಟ ಹೊಂದಲು ಇಂಥ ಕಾರ್ಯಕ್ರಮ ಅನುಕೂಲವಾಗುತ್ತದೆ ಎಂದರು.

ಕ್ರೀಡಾಕೂಟದ ಅಧ್ಯಕ್ಷತೆಯನ್ನು ಪೋಷಕ ರಂಜಿನಿ ರಮೇಶ್ ವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಮುಖ್ಯ ಶಿಕ್ಷಕಿ ಗಾಯತ್ರಿ ಮಾಡಿದರು. ದೈಹಿಕ ಶಿಕ್ಷಕ ನಾಗರಾಜ್, ರಾಹುಲ್ ಹಾಗೂ ಇಂದ್ರಮ್ಮ ಕ್ರೀಡಾಕೂಟದ ಮಾರ್ಗದರ್ಶನ ಮಾಡಿದ್ದರು.

ಈ ವೇಳೆ ಆಡಳಿತಾಧಿಕಾರಿ ಹರೀಶ್ ಬಾಬು, ಮುಖ್ಯೋಪಾಧ್ಯಾಯರಾದ ಮಾಲಾ, ಪ್ರಕಾಶ್, ಸೇರಿದಂತೆ ಶಿಕ್ಷಕರು, ಪೋಷಕರು ಉಪಸ್ಥಿತರಿದ್ದರು.

## ವಾಲ್ಮೀಕಿ ಸಮಾಜ ಕ್ಷೇಮಾಭಿವೃದ್ಧಿ ಸಮಿತಿಯಿಂದ ವಾಲ್ಮೀಕಿ ಜಯಂತಿ



ದಾವಣಗೆರೆ, ಅ. 29- ಶ್ರೀ ವಾಲ್ಮೀಕಿ ಸಮಾಜ ಕ್ಷೇಮಾಭಿವೃದ್ಧಿ ಸಮಿತಿ ವತಿಯಿಂದ ನಗರದ ಆರ್‌ಎಂಸಿ ರಸ್ತೆ ಗಣೇಶ್ ಹೋಟೆಲ್ ವೃತ್ತದಲ್ಲಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಅಧ್ಯಕ್ಷ ಎನ್.ಹೆಚ್. ಹಾಲೇಶ್ ಮಾತನಾಡಿದರು. ವಾಲ್ಮೀಕಿ ಘಟಕದ ಅಧ್ಯಕ್ಷ ಮಂಜುನಾಥ್ (ಚುಕ್ಕಿ) ಮತ್ತು ಪದಾಧಿಕಾರಿಗಳು ಹಾಗೂ ಸಮಾಜದ ಎಲ್ಲಾ ಬಾಂಧವರಿಗೂ ಅಭಿನಂದನೆ ಸಲ್ಲಿಸಿದರು.

ಪ್ರಧಾನ ಕಾರ್ಯದರ್ಶಿ ಜಗದೀಶ್, ಖಜಾಂಚಿ ಉಮೇಶ್, ಸಮಾಜದ ಮುಖಂಡ ಪ್ರಶಾಂತ್ ಪಚ್ಚಿ, ಬಿಂದು ,ವಿನಾಯಕ, ರಂಗಣ್ಣ, ಗಾಡಿ ಧರ್ಮಣ್ಣ, ಕೃಷ್ಣ, ಶ್ರೀನಿವಾಸ್, ನಿಂಗರಾಜ್, ರಮೇಶ್, ಬಸಾಪುರ ಪ್ರಕಾಶ್, ಆವರಗೆರೆ ಕಿರಣ್, ರಮೇಶ್, ವಿಷ್ಣು, ಕೊಟ್ರೇಶ್, ಆರ್.ಎಂ. ಶಿವಯ್ಯ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಸಂಕ್ಷಿಪ್ತ ಸುದ್ದಿ

**ಭಾರತದಲ್ಲಿ ಹೂಡಿಕೆ ಮುಂದುವರಿಕೆ : ಹೊಂಡಾ**
ಟೋಕಿಯೋ : ಭಾರತ ತನ್ನ ಭವಿಷ್ಯದ ಬೆಳವಣಿಗೆಗೆ ಉತ್ತಮ ಮಾರುಕಟ್ಟೆಯಾಗಿದೆ. ಇಲ್ಲಿ ಹೂಡಿಕೆ ಮುಂದುವರೆಸಲಾಗುವುದು ಎಂದು ಹೊಂಡಾ ಕಂಪನಿ ತಿಳಿಸಿದೆ. 2050ರ ವೇಳೆಗೆ ತಟಸ್ಥ ಇಂಗಾಲದ ಜಾಗತಿಕ ಯೋಜನೆಯ ಅನ್ವಯ ಎಲೆಕ್ಟ್ರಿಕ್ ವಾಹನಗಳಿಗೆ ಉತ್ತೇಜನ ನೀಡುವುದನ್ನು ಮುಂದುವರೆಸುವುದಾಗಿ ಕಂಪನಿ ಹೇಳಿದೆ.

**ಸೇವಾ ರಿವಾಲ್ವರ್‌ನಿಂದ ಗಡಿ ಭದ್ರತಾ ಪಡೆಯ ಸಿಬ್ಬಂದಿ ಆತ್ಮಹತ್ಯೆ**
ಕಂಕೇರ್ : ಗಡಿ ಭದ್ರತಾ ಪಡೆಯ ಪೇದೆ ಬಾಲ್ಮೀಕಿ ಸಿನ್ಹ ಅವರು ತಮ್ಮ ಸೇವಾ ರಿವಾಲ್ವರ್‌ನಿಂದ ಆತ್ಮಹತ್ಯೆ ಮಾಡಿಕೊಂಡ ಘಟನೆ ಛತ್ತೀಸ್ ಘಡದ ಕಂಕೇರ್ ಜಿಲ್ಲೆಯ ಸಾರಂಗಿಪಾಲ್ ಹಳ್ಳಿಯಲ್ಲಿ ನಡೆದಿದೆ. ಮೃತ ವ್ಯಕ್ತಿ ರಾಯಪುರ ಜಿಲ್ಲೆಯ ರಿವಾ ಹಳ್ಳಿಯವರು. ಕೌಟುಂಬಿಕ ಕಾರಣದಿಂದ ಸಾವು ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ.

**ಲಂಕಾ ನೌಕಾ ದಳದಿಂದ ಭಾರತದ 37 ಬೆಸ್ತರ ಬಂಧನ**
ಚೆನ್ನೈ : ಶ್ರೀಲಂಕಾ ಸೈನ್ಯ ಭಾರತದ 37 ಬೆಸ್ತರನ್ನು ಬಂಧಿಸಿದ್ದು, ಐದು ದೋಣಿಗಳನ್ನು ವಶಪಡಿಸಿಕೊಂಡಿದೆ. ಶ್ರೀಲಂಕಾ ಜಲ ನೆಲೆಗೆ ಪ್ರವೇಶಿಸಿದ ಆರೋಪದ ಮೇಲೆ ಈ ಕ್ರಮ ತೆಗೆದುಕೊಳ್ಳಲಾಗಿದೆ. ಈ ತಿಂಗಳಲ್ಲೇ 64 ಬೆಸ್ತರನ್ನು ಶ್ರೀಲಂಕಾ ನೌಕಾ ದಳ ಬಂಧಿಸಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಒತ್ತಾಯಿಸಿದ್ದಾರೆ.

**ಇನ್ಸ್‌ಪೆಕ್ಟರ್ ಮೇಲೆ ಉಗ್ರರಿಂದ ಗುಂಡು**
ಶ್ರೀನಗರ : ಶ್ರೀನಗರದಲ್ಲಿ ಕ್ರಿಕೆಟ್ ಮೈದಾನದಲ್ಲಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ಒಬ್ಬರ ಮೇಲೆ ಲಷ್ಕರ್ ಎ ತೊಯ್ಬಾ ಉಗ್ರರು ಗುಂಡು ಹಾರಿಸಿದ್ದಾರೆ. ಇನ್ಸ್‌ಪೆಕ್ಟರ್ ಸಾವು - ಬದುಕಿನ ಹೋರಾಟ ನಡೆಸುತ್ತಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

**ಈರುಳ್ಳಿ ಬೆಲೆ ಏರಿಕೆ : ಕೇಂದ್ರಕ್ಕೆ ಖರ್ಗೆ ತರಾಟೆ**
ನವದೆಹಲಿ : ಈರುಳ್ಳಿ ಬೆಲೆ ಏರುತ್ತಿರುವುದಕ್ಕೆ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಂಬರುವ ಐದು ರಾಜ್ಯಗಳ ಚುನಾವಣೆಯಲ್ಲಿ ಜನರು ಇದಕ್ಕೆ ಉತ್ತರ ಕೊಡಲಿದ್ದಾರೆ ಎಂದಿದ್ದಾರೆ.

**ಭದ್ರತಾ ಸಂಸ್ಥೆಗಳ ಟೀಕಿಸಿದ್ದಕ್ಕೆ ಕ್ಷಮೆ ಯಾಚಿಸಿದ ನೇತನ್ಯಾಹು**
ಜೆರುಸಲೇಂ : ಕಳೆದ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ಹಮಾಸ್ ನಡೆಸಿದ ದಾಳಿ ತಡೆಯಲು ಭದ್ರತಾ ಸಂಸ್ಥೆಗಳು ವಿಫಲವಾಗಿ ದ್ದವು ಎಂದು ಟೀಕಿಸಿದ್ದ ಇಸ್ರೋಲ್ ಅಧ್ಯಕ್ಷ ಬೆಂಜಮಿನ್ ನೇತನ್ಯಾಹು, ತಮ್ಮ ಹೇಳಿಕೆಗಳಿಗೆ ಕ್ಷಮೆ ಯಾಚಿಸಿದ್ದಾರೆ. ಅವರ ಹೇಳಿಕೆಗೆ ಮಿತ್ರ ಪಕ್ಷಗಳು ಹಾಗೂ ಪ್ರತಿಪಕ್ಷಗಳ ಸದಸ್ಯರಿಬ್ಬರೂ ಆಕ್ಷೇಪಿಸಿದ್ದರು.

## ಕಾಂ. ಶೇಖರಪ್ಪನವರ ಪತ್ನಿ ಗಂಗಮ್ಮ ನಿಧನಕ್ಕೆ ಕಮ್ಯುನಿಸ್ಟ್ ಪಕ್ಷದ ಸಂತಾಪ



ದಾವಣಗೆರೆ, ಅ. 29 - ಹಿರಿಯ ಕಾರ್ಮಿಕ ಮುಖಂಡರಾಗಿದ್ದ ದಿ. ಕಾಂ. ಶೇಖರಪ್ಪನವರ ಧರ್ಮಪತ್ನಿ ಶ್ರೀಮತಿ ಗಂಗಮ್ಮನವರ ನಿಧನಕ್ಕೆ ಭಾರತ ಕಮ್ಯುನಿಸ್ಟ್ ಪಕ್ಷದ ದಾವಣಗೆರೆ ಜಿಲ್ಲಾ ಮಂಡಳಿ ಸಂತಾಪ ಸೂಚಿಸಿದೆ.

ನಗರದ ಕಾಂ. ಪಂಪಾಪತಿ ಭವನದಲ್ಲಿ ನಿನ್ನೆ ನಡೆದ ಸಂತಾಪ ಸಭೆಯಲ್ಲಿ ಸಿಪಿಐ ಹಿರಿಯ ಮುಖಂಡ ಹಾಗೂ ಜಿಲ್ಲಾ ಮಂಡಳಿ ಖಜಾಂಚಿ ಆನಂದರಾಜ್ ಮಾತನಾಡಿ, ಕಾಂ. ಶೇಖರಪ್ಪನವರು 1970 ರಲ್ಲಿ ಹತ್ತಿ ಗಿರಣಿ ಕಾರ್ಮಿಕರ ಸಂಘಟನೆಯ ಹೋರಾಟದಲ್ಲಿ ಮಾಲೀಕರ ಕುತಂತ್ರದ ಷಡ್ಯಂತ್ರಕ್ಕೆ ಬಲಿಯಾಗಿ ಹುತಾತ್ಮರಾದರು. ಅಂದಿನಿಂದ ಗಂಗಮ್ಮನವರು ಎದೆಗುಂದದೆ ತಮ್ಮ ಸಂಸಾರದ ಜವಾಬ್ದಾರಿಯನ್ನು ಹೊತ್ತು ಐವರು (ಒಬ್ಬ ಪುತ್ರ ತೀರಿಕೊಂಡಿದ್ದಾರೆ) ಪುತ್ರರು, ಒಬ್ಬ ಪುತ್ರಿಯನ್ನು ಆವರಗೆರೆ ತಮ್ಮ ಗೌಡರ ರೈತ ಮನೆತನದ ಅವಿಭಕ್ತ ಕುಟುಂಬದಲ್ಲಿ ಯಶಸ್ವಿಯಾಗಿ ಜೀವನ ನಿರ್ವಹಿಸಿ ದೀರ್ಘಾಯುಷಿಗಳಾಗಿ ತಮ್ಮ 89 ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ ಎಂದರು.

ಪಕ್ಷದ ಸಿಪಿಐ ಜಿಲ್ಲಾ ಮಂಡಳಿ ಕಾರ್ಯದರ್ಶಿ ಆವರಗೆರೆ ಚಂದ್ರು, ಸಹ ಕಾರ್ಯದರ್ಶಿಗಳಾದ ಹೆಚ್. ಜಿ. ಉಮೇಶ್, ಆವರಗೆರೆ ವಾಸು, ಮುಖಂಡ ಟಿ. ಎಸ್. ನಾಗರಾಜ್, ಎಂ. ಬಿ. ಶಾರದಮ್ಮ ಮಾತನಾಡಿದರು.

ಪಕ್ಷದ ಮುಖಂಡರುಗಳಾದ ಐರಣಿ ಚಂದ್ರು, ಕೆ. ಬಾನಪ್ಪ, ಪಿ. ಷಣ್ಮುಖ ಸ್ವಾಮಿ, ಕೆ. ಜಿ. ಶಿವಮೂರ್ತಿ, ಸರೋಜಾ, ವಿ. ಲಕ್ಷ್ಮಣ, ಎಚ್. ಎಸ್. ಚಂದ್ರು, ಎ. ಮರಿಯಪ್ಪ, ಜಿ. ಎಲ್ಲಪ್ಪ, ಸಿ. ರಮೇಶ್, ನಿಟುವಳ್ಳಿ ಬಸವರಾಜ್, ಕೆರನಹಳ್ಳಿ ರಾಜು, ಎ. ತಿಪ್ಪೇಶ್, ಯರಗುಂಟೆ ಸುರೇಶ್ ಸೇರಿದಂತೆ ಇತರರು ಸಂತಾಪ ಸಭೆಯಲ್ಲಿ ಉಪಸ್ಥಿತರಿದ್ದರು.

## ರಾಷ್ಟ್ರಮಟ್ಟದ ಯೋಗಾಸನ ಸ್ಪರ್ಧೆ ಜಿಎಂಐಟಿ ವಿದ್ಯಾರ್ಥಿನಿಗೆ ನಾಲ್ಕನೇ ಸ್ಥಾನ



ದಾವಣಗೆರೆ, ಅ. 29- ಸಪ್ತರ್ಷಿ ಯೋಗಧರ ಸ್ಪೋರ್ಟ್ಸ್ ಅಕಾಡೆಮಿ ಈಚೆಗೆ ನಗರದ ಶಿವ ಪಾರ್ವತಿ ಸಮುದಾಯ ಭವನದಲ್ಲಿ ಆಯೋಜಿಸಿದ್ದ ರಾಷ್ಟ್ರಮಟ್ಟದ 'ಯೋಗಾಸನ' ಸ್ಪರ್ಧೆಯಲ್ಲಿ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ ಪ್ರಥಮ ವರ್ಷದ ಎ ಐ ಎಂ ಎಲ್ ವಿಭಾಗದ ವಿದ್ಯಾರ್ಥಿನಿ ಸೋನಿಯಾ ಶೇಟ್ ಅವರು ನಾಲ್ಕನೇ ಸ್ಥಾನ ಪಡೆದಿರುತ್ತಾರೆ ಹಾಗೂ ವಿಯೆಟ್ನಾಂನಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಈ ಕ್ರೀಡಾಪಟುವಿಗೆ ಕಾಲೇಜಿನ ನಿರ್ವಹಣಾ ಪ್ರತಿನಿಧಿ ವೈ.ಯು. ಸುಭಾಷ್ಚಂದ್ರ, ಪ್ರಾಂಶುಪಾಲ ಡಾ. ಎಂ.ಬಿ. ಸಂಜಯ್ ಪಾಂಡೆ, ಎ ಐ ಎಂ ಎಲ್ ವಿಭಾಗದ ಮುಖ್ಯಸ್ಥ ಜಿ. ಕೀರ್ತಿಪ್ರಸಾದ್ ಹಾಗೂ ಕ್ರೀಡಾ ಸಂಯೋಜಕ ಡಾ. ಹೆಚ್.ಎಸ್. ಕಿರಣ್‌ಕುಮಾರ್ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರಾದ ಜಿ.ಬಿ. ಅಜ್ಜಯ್ಯ ಮತ್ತು ವೈ. ಹನುಮಂತಪ್ಪ, ಯೋಗ ತರಬೇತುದಾರ ಸಿ.ಎಂ. ಪ್ರದೀಪ್ ಕುಮಾರ್ ಅಭಿನಂದಿಸಿದ್ದಾರೆ.

## ಆಟೋ ಚಾಲಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ ಅ. 29- ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಶೇ.70 ಕ್ಕೂ ಹೆಚ್ಚು ಅಂಕ ಪಡೆದ ನಗರದ ಆಟೋ ಮತ್ತು ಗೂಡ್ಸ್ ಗಾಡಿ ಚಾಲಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು ನಾಳೆ ದಿನಾಂಕ 30 ರೊಳಗಾಗಿ ಜಿ. ಬಿ. ವಿನಯ್ ಕುಮಾರ್ ಕಕ್ಕರಗೊಳ್ಳ ಇನ್‌ಸೈಟ್ಸ್ ಐಎಎಸ್ ಸಂಸ್ಥೆ ಸ್ಥಾಪಕರು, # 2415/45,10 ನೇ ಕ್ರಾಸ್, ಅಥಣಿ ಕಾಲೇಜಿನ ಕೊನೆಯ ತುದಿ, ಎಸ್. ಎಸ್. ಲೇ- ಔಟ್, 'ಎ' ಬ್ಲಾಕ್, ದಾವಣಗೆರೆ. ವಿವರಕ್ಕೆ ಸಂಪರ್ಕಿಸಿ : 7676680136, 9353452348.

**ಬೇಕಾಗಿದ್ದಾರೆ**
ದಾವಣಗೆರೆ ಹಾಗೂ ಸುತ್ತಮುತ್ತ ಸೆಕ್ಯೂರಿಟಿ ಗಾರ್ಡ್ಸ್ ಕೆಲಸ ಮಾಡಲು ಆಸಕ್ತಿವುಳ್ಳವರು ಬೇಕಾಗಿದ್ದಾರೆ.
ಆಕರ್ಷಕ ಸಂಬಳ ಮತ್ತು ESI, EPF ಸೌಲಭ್ಯವಿರುತ್ತದೆ.
91102 03348, 83173 35325

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಡೆಲಿವರಿ ಮಾಡಲು ಟಾಟಾ ಏಸ್ ಓಡಿಸಲು ಬರುವ ಡ್ರೈವರ್ ಗಳು ಬೇಕಾಗಿದ್ದಾರೆ.
ಕೂಡಲೇ ಸಂಪರ್ಕಿಸಿ.
ವಾಟ್ಸಾಪ್ ನಂಬರ್ : 89711 19130
Call - 9880042597

**ಗೋಡೌನ್ ಬಾಡಿಗೆಗೆ ಇದೆ**
ಎ.ಪಿ.ಎಂ.ಸಿ ಯಾರ್ಡ್ 'ಬಿ' ಬ್ಲಾಕ್‌ನಲ್ಲಿ 1000 ಅಡಿ ಇರುವ ಆರ್.ಸಿ.ಸಿ. ಬಿಲ್ಡಿಂಗ್ ಗೋಡೌನ್ ಬಾಡಿಗೆಗೆ ಇದೆ. ಆಫೀಸ್‌ಗೆ ಸೂಕ್ತವಾಗಿದೆ. ಸಂಪರ್ಕಿಸಿ.
98444 42650

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು / ಹುಡುಗಿಯರು ಬೇಕಾಗಿದ್ದಾರೆ. ಪಿಯುಸಿ ಅಥವಾ ಯಾವುದೇ ಪದವಿ ಆಗಿರಬೇಕು.
ಕಾವೇರಿ ಮೆಡಿಹೌಸ್ ಪ್ರೈ.ಲಿ.,
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 2.

**12 A & 80G ರಿಜಿಸ್ಟ್ರೇಶನ್**
GST ರಿಜಿಸ್ಟ್ರೇಶನ್, MSME ರಿಜಿಸ್ಟ್ರೇಶನ್ ಕಂಪನಿ, LLP, PVT, LTD ರಿಜಿಸ್ಟ್ರೇಶನ್ CA Approved project Reportಗಳನ್ನು ಕಡಿಮೆ ಬೆಲೆಗೆ ಮಾಡಲಾಗುತ್ತದೆ.
98457 62630, 80889 42659

**EC / ಇಸಿ, E-swathu, Khatha Change Building Licence & Property Documents, Loans-All banks**
96118-66449

**ಸೈಟುಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆ 30x50 (ಪಶ್ಚಿಮ) ಡಾಲರ್ಸ್ ಕಾಲೋನಿ 30x52 (ದಕ್ಷಿಣ) ಕೆಹೆಚ್‌ಬಿ ಲೇಔಟ್ 40x60 (ಉತ್ತರ) ಬನಶಂಕರಿ ಬಡಾವಣೆ 30x60 (ಉತ್ತರ) ಜಯನಗರ 30x40 ಪೂರ್ವ
95385 65909

**ಕೆಲಸಕ್ಕೆ ಬೇಕಾಗಿದ್ದಾರೆ**
Tally ಅನುಭವ ಇರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಕಿಸಾನ್ ವರ್ಲ್ಡ್
ವಾಣಿ ರೈಸ್ ಮಿಲ್ ಎದುರು, ಹದಡಿ ರೋಡ್ ದಾವಣಗೆರೆ.
97433 83672

**ಮನೆ ಮಾರಾಟಕ್ಕಿದೆ**
ಹರಿಹರ ಪಟ್ಟಣದ ಹೈಸ್ಕೂಲ್ ಬಡಾವಣೆಯ 4ನೇ ಮೇನ್, 1ನೇ ಕ್ರಾಸ್‌ನಲ್ಲಿ ಶ್ರೀ ಗಿರಿಯಮ್ಮ ಕಾಲೇಜು ಎದುರು, 50X40 ಅಳತೆಯಲ್ಲಿರುವ ಎರಡು ಆರ್‌ಸಿಸಿ ಮನೆಗಳು, ಮನೆ ನಂ. 64 ಮತ್ತು 65 ಮಾರಾಟಕ್ಕಿರುತ್ತವೆ.
ಆಸಕ್ತಿಯುಳ್ಳವರು ಶ್ರೀ ಜಿ.ಹೆಚ್. ಮಂಜುನಾಥ,
88849 62111

**ಮೇಕ್ ಓವರ್ ಕ್ಲಾಸ್**
ಒಂದು ತಿಂಗಳ ತರಬೇತಿ. ಮೇಕಪ್, ಸ್ಯಾರಿ ಡ್ರೇಪಿಂಗ್ ಮತ್ತು ಹೇರ್ ಸ್ಟೈಲ್. ಮೇಕಪ್ ಕಲಿಕೆಗೆ ಪ್ರಾಡಕ್ಟ್ಸ್ ಗಳನ್ನು ಕೊಡಲಾಗುತ್ತದೆ, ಎರಡು portfolio ಫೋಟೋ ಶೂಟ್ ಗಳು ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.
ಸಂಪರ್ಕಿಸಿ: Glamorous Studio
Girija make up artist
9481776305

**ಬೇಕಾಗಿದ್ದಾರೆ**
1) ಡಿಲೆವರಿ ಬಾಯ್ಸ್
SSLC or PUC
ಎ.ಕೆ.ಟ್ರೇಡರ್ಸ್
ಆಶೀರ್ವಾದ್, ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ- 577004

**WE ARE HIRING**
Opening In Back Office Work, No Of Post -2, Good Communication Skill And Excel Knowledge Female Candidates Only. Davanagere.
94822 57570

**ಸೇಲ್ಸ್ ಬಾಯ್ಸ್/ಗರ್ಲ್ಸ್ ಅಸಿಸ್ಟೆಂಟ್ ಸೇಲ್ಸ್ ಬಾಯ್ಸ್/ಗರ್ಲ್ಸ್ ಹೆಲ್ಪರ್ಸ್ ಬೇಕಾಗಿದ್ದಾರೆ**
ಶ್ರೀ ಮಾರುತಿ ಟೆಕ್ಸ್‌ಟೈಲ್ಸ್ & ಗಾರ್ಮೆಂಟ್ಸ್
ಡೋ.ನಂ. 1212, ರಿಂಗ್ ರೋಡ್ ಹತ್ತಿರ, ಶಾರದಾಂಬ ದೇವಸ್ಥಾನ ವೃತ್ತ, ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ - 04
86603 81629
98449 76176

**BEST COOK ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಸ್ಪೇಷಲ್ ಆಗಿ ಉದ್ದಿನ ವಡೆ ಮತ್ತು ಉಪಹಾರ ತಯಾರಿಸಲು ಬೇಕಾಗಿದ್ದಾರೆ.
81475 47421

**ಬೇಕಾಗಿದ್ದಾರೆ**
ಪಿಯುಸಿವರೆಗೆ ಓದಿದ ಅಭ್ಯರ್ಥಿಗಳು ಅಂಗಡಿಯಲ್ಲಿ ಸೇಲ್ಸ್ ಮಾಡಲು ಬೇಕಾಗಿದ್ದಾರೆ.
ಸಂಪರ್ಕಿಸಿರಿ :
ಆನಂದ ಹಾರ್ಡ್‌ವೇರ್ಸ್ & ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕ್ಲಿನಿಂಗ್ ಮಾಡಲು ಮಹಿಳೆ ಬೇಕಾಗಿದ್ದಾರೆ.
ಸಂಪರ್ಕಿಸಿ :
99453 66847

**ತಕ್ಷಣ ಬೇಕಾಗಿದ್ದಾರೆ**
ಎಲೆಕ್ಟ್ರಾನಿಕ್ ಸರ್ವೀಸ್ ಸೆಂಟರ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸ್ಥಳ- ದಾವಣಗೆರೆ, ಹರಿಹರ, ರಾಣೇಬೆನ್ನೂರು.
PUC, ITI, Diploma ಆಗಿರುವ, 2 Wheeler Mandatory
94822 57570

**ರಕ್ತ ದಾನ ಶ್ರೇಷ್ಠ ದಾನ**

**URGENT REQUIREMENT**
We Are Hiring For Experience Candidate For Water Purifier Service Engineer. Davanagere.
94822 57570

**WANTED**
Boys required for sales Executive Job at Food Mart Supermarket.
Quli : PUC, Any degree
M : 98864 63531

**ಸೈಟ್ ಮಾರಾಟಕ್ಕಿದೆ**
ಪಿ.ಬಿ. ರೋಡ್, Hyundai Car Showroom ಹಿಂಭಾಗ ಬಸವನಗೌಡ ಬಡಾವಣೆ, ಆವರಗೆರೆ. 30x46 ಉತ್ತರ, 30x46 ದಕ್ಷಿಣ Rs. 2000/- per sq ft.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ACHARYA REALTORS
826 826 7878

**ಸೈಟುಗಳು ಮಾರಾಟಕ್ಕೆ**
ಬನಶಂಕರಿ ಬಡಾವಣೆ ಡಾಲರ್ಸ್ ಕಾಲೋನಿ ಶಿವ-ಪಾರ್ವತಿ ಸಿದ್ದವೀರಪ್ಪ ಹಾಗೂ ದಾವಣಗೆರೆಯ ಎಲ್ಲಾ ಬಡಾವಣೆಯಲ್ಲಿ 30x40, 30x50, 40x60, 50x80, ಸೈಟುಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ ಹಾಗೂ ಹೊಲಗಳಿಗೆ ವಿಚಾರಿಸಿ :
97315 12365

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಉದ್ಯೋಗವಿಲ್ಲವೇ, ನಿರುದ್ಯೋಗಿಗಳಾಗಿದ್ದೀರಾ ?**
ಚಿಂತೆ ಏಕೆ ? ನಿಮಗಾಗಿ ದಾವಣಗೆರೆಯ ಮುಖ್ಯ ಶಾಖೆಯಾದ 'SBI LIFE' ನಲ್ಲಿ Financial Advisor ಕೆಲಸಕ್ಕೆ ಒಂದು ಸುವರ್ಣಾವಕಾಶವನ್ನು ಕಲ್ಪಿಸಲಾಗಿದೆ. ವಿದ್ಯಾರ್ಹತೆ SSLC/ PUC/Degree ಪಾಸ್, ಆಗಿರುವ ಅಭ್ಯರ್ಥಿಗಳಿಗೆ, ಯಾವುದೇ ರಂಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು, ತೆರಿಗೆ ಸಲಹೆಗಾರರು, ನಿವೃತ್ತ ನೌಕರರು, ಖಾಸಗಿ ಕಂಪನಿಗಳಲ್ಲಿ ಕೆಲಸ ಹುಡುಕುತ್ತಿರುವವರು ಹಾಗೂ ಸರ್ಕಾರಿ ನೌಕರರನ್ನು ಹೊರತು ಪಡಿಸಿ, ಎಲ್ಲಾ ಆಸಕ್ತರಿಗೂ ಮುಕ್ತ ಅವಕಾಶವಿದೆ.
ಮಾಸಿಕ ಆದಾಯ ಕನಿಷ್ಠ 30000 ರಿಂದ ಅನಿಯಮಿತವಾಗಿ ಗಳಿಸಬಹುದಾಗಿದೆ. ಕನಿಷ್ಠ ವಯಸ್ಸು 30 ವರ್ಷ, ಗರಿಷ್ಠ 65 ವರ್ಷ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
87626 24248

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**FOR RENT**
1st Floor Hall Size = 28x43, Commercial Office Space. MCC 'B' Block, Boys Hostel Road, 7th Cross, 9th Main. Contact :
82177 72482

**JOB OPPORTUNITIES REQUIRED**
Sales and Marketing Executive (Male only) for software industries (Only BBA, MBA, M.Com, & B.Com Candidates Can Apply)
Contact : 97312 18567
Mail ID : hardsoftdvg@gmail.com

**HOUSE FOR RENT**
1st floor-3 BHK & Having solar water & borewel water fecility available for rent.
# 1982/2, 6th cross, siddaveerappa layout, DVG.
94806 93506
82777 97633

# ‘ಕರುನಾಡ ರತ್ನ’ ಅಪ್ಪು ಆದರ್ಶಗಳು ಸಮಾಜಸೇವೆಗೆ ದಾರಿದೀಪ

### ಪುನಿತ್ ರಾಜಕುಮಾರ್ 2ನೇ ಪುಣ್ಯಸ್ಮರಣೆಯಲ್ಲಿ ಗಡಿಗುಡಾಳ್ ಮಂಜುನಾಥ್



ದಾವಣಗೆರೆ, ಅ.29- ನಗರದ ಎಂಸಿಸಿ ಬಿ ಬ್ಲಾಕ್‌ನಲ್ಲಿನ ಉದ್ಯಾನವನದಲ್ಲಿರುವ ಪುನಿತ್ ಆನಂದವನದಲ್ಲಿ ಪವರ್ ಸ್ಟಾರ್ ದಿ. ಪುನಿತ್ ರಾಜಕುಮಾರ್ ಅವರ ಎರಡನೇ ವರ್ಷದ ಪುಣ್ಯಸ್ಮರಣೆ ಮಾಡಲಾಯಿತು.

ಪೌರ ಕಾರ್ಮಿಕರೊಂದಿಗೆ ಮಹಾನಗರ ಪಾಲಿಕೆಯ ಆಡಳಿತ ಪಕ್ಷದ ನಾಯಕ ಗಡಿಗುಡಾಳ್ ಮಂಜುನಾಥ್ ಅವರು ಪುಣ್ಯಸ್ಮರಣೆ ಮಾಡಿದ್ದು ವಿಶೇಷ. ಪೌರ ಕಾರ್ಮಿಕರು ಹಾಗೂ ಗಡಿಗುಡಾಳ್ ಮಂಜುನಾಥ್ ಅವರು ಪುನಿತ್ ರಾಜಕುಮಾರ್ ಅವರ ಪ್ರತಿಮೆಗೆ ಹೂವಿನ ಹಾರ ಹಾಕಿ ಪೂಜೆ ಸಲ್ಲಿಸುವ ಮೂಲಕ ಸ್ಮರಿಸಿದರು.

ಈ ವೇಳೆ ಮಾತನಾಡಿದ ಅವರು, ಪುನಿತ್ ರಾಜಕುಮಾರ್ ಅವರು ನಮ್ಮನ್ನೆಲ್ಲ ಅಗಲಿ ಇಂದಿಗೆ ಎರಡು ವರ್ಷ. ಆದರೂ ಕರ್ನಾಟಕ ಮಾತ್ರವಲ್ಲ ದೇಶದ ಕೋಟ್ಯಂತರ ಅಭಿಮಾನಿಗಳ ಹೃದಯದಲ್ಲಿ ಈಗಲೂ ನೆಲೆಸಿದ್ದಾರೆ. ಎರಡೂ ವರ್ಷವಾದರೂ ಅಭಿಮಾನಿಗಳು ಮಾತ್ರ ಸ್ಮರಣೆ ನಿಲ್ಲಿಸಿಲ್ಲ. ಕೋಟ್ಯಾನುಕೋಟಿ ಫ್ಯಾನ್ಸ್‌ಗೆ ಅವರು ಇಂದಿಗೂ ಆದರ್ಶ. ಅವರ ಬದುಕು, ಜೀವನಶೈಲಿ, ಮಾಡಿದ ಸಮಾಜ ಸೇವೆ ಎಲ್ಲರಿಗೂ ಪ್ರೇರಣೆ ಎಂದು ಹೇಳಿದರು.

ಪುನಿತ್ ರಾಜಕುಮಾರ್ ಅವರ ವಿನಯತೆ ಈಗಲೂ ಎಲ್ಲರೂ ನೆನಪು ಮಾಡಿಕೊಳ್ಳುತ್ತಿದ್ದಾರೆ. ಪುನಿತ್ ರಾಜಕುಮಾರ್ ಅವರ ಸಮಾಧಿಗೆ ಈಗಲೂ ಬರುತ್ತಿರುವ ಕೋಟ್ಯಾಂತರ ಅಭಿಮಾನಿಗಳೇ ಸಾಕ್ಷಿ. ಇಂತಹ ನಟನ ಜೀವನ ಶೈಲಿಯನ್ನು ನಾವು ಕೇವಲ ಮಾತಿನಲ್ಲಿ ಹೇಳದೇ, ನಿಜ ಜೀವನದಲ್ಲಿಯೂ ಅಳವಡಿಸಿಕೊಳ್ಳೋಣ ಎಂದು ಕರೆ ನೀಡಿದರು.

## ನಗರದಲ್ಲಿಂದು ರೈತರ ಪ್ರತಿಭಟನೆ

ಕರ್ನಾಟಕ ರಾಜ್ಯ ರೈತ ಸಂಘದಿಂದ ಕೋಟ್ಯಕ್ ಮಹೀಂದ್ರಾ ಬ್ಯಾಂಕ್ ಎದುರು ಇಂದು ಬೆಳಿಗ್ಗೆ 11.30ಕ್ಕೆ ಪ್ರತಿಭಟನೆ ನಡೆಸಲಾಗುವುದು ಎಂದು ಸಂಘದ ಜಿಲ್ಲಾಧ್ಯಕ್ಷ ಬಳ್ಳಾಪುರದ ಹನುಮಂತಪ್ಪ ತಿಳಿಸಿದ್ದಾರೆ.

# ಸಮಾಜ ಸ್ಮರಿಸುವಂತಹ ಕಾಯಕವನ್ನು ಮಾಡಬೇಕು



**ಎ.ಹೆಚ್. ಶಿವಮೂರ್ತಿಸ್ವಾಮಿ ಅವರ ಭಾವನಮನ ಕಾರ್ಯಕ್ರಮದಲ್ಲಿ ಹುಬ್ಬಳ್ಳಿ ಮೂರುಸಾವಿರ ಮಠದ ಡಾ. ಗುರುಸಿದ್ಧರಾಜ ಯೋಗೇಂದ್ರ ಸ್ವಾಮೀಜಿ**

ದಾವಣಗೆರೆ, ಅ. 29- ಮಣ್ಣಿಗೂ ದೇಹಕ್ಕೂ ಸಾಕಷ್ಟು ಸಂಬಂಧವಿದೆ. ಈ ರೀತಿ ಇದ್ದಾಗಲೇ ಜೀವನ ವೈವಿಧ್ಯಮಯವಾಗಿರುತ್ತದೆ. ಚೈತನ್ಯ ಹಾರಿ ಹೋದ ಮೇಲೆ ಜಡವಸ್ತುವಾಗುತ್ತದೆ. ಈ ಮಧ್ಯೆ ಸಮಾಜ ಸ್ಮರಿಸುವಂತಹ ಕಾಯಕವನ್ನು ಮಾಡಬೇಕು. ಅಂತಹ ಕಾಯಕವನ್ನು ಲಿಂ.ಎ.ಹೆಚ್. ಶಿವಮೂರ್ತಿ ಸ್ವಾಮಿ ಅವರು ಮಾಡಿದ್ದಾರೆ ಎಂದು ಹುಬ್ಬಳ್ಳಿ ಮೂರುಸಾವಿರ ಮಠದ ಡಾ. ಗುರುಸಿದ್ಧ ರಾಜ ಯೋಗೇಂದ್ರ ಮಹಾಸ್ವಾಮೀಜಿ ಶ್ಲಾಘಿಸಿದರು.

ನಗರದ ಅಭಿನವ ರೇಣುಕ ಮಂದಿರದಲ್ಲಿ ಇಂದು ಏರ್ಪಾಡಾಗಿದ್ದ ಹಿರಿಯ ನ್ಯಾಯವಾದಿಗಳೂ, ಶ್ರೀ ವೀರೇಶ್ವರ ಪುಣ್ಯಾಶ್ರಮದ ಸಂಸ್ಥಾಪಕ ಕಾರ್ಯದರ್ಶಿಗಳಾಗಿದ್ದ ಎ.ಹೆಚ್. ಶಿವಮೂರ್ತಿಸ್ವಾಮಿ ಅವರ ಭಾವನಮನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಪ್ರಕೃತಿಯಲ್ಲಿ ಕಾಣುವ ವಸ್ತು ಮಾಯವಾಗುತ್ತದೆ. ದೇಹ ದಾರಿ ಈ ಚೈತನ್ಯ ಹೋದ ಮೇಲೆ ಜಡ ವಸ್ತುವಾಗುತ್ತದೆ. ಪಂಚಭೂತಗಳಿಂದ ನಿರ್ಮಾಣವಾದ ಈ ದೇಹ ಅದರೊಂದಿಗೆ ಜೀವಿಸಿ ಕೊನೆಗೆ ಅದರಲ್ಲೇ ಲೀನವಾಗುತ್ತದೆ ಎಂದರು.

ಎರೆಕುಪ್ಪಿ ಮಠದ ತಿಪ್ಪಯ್ಯನವರ ಕುಟುಂಬದವರ ಶಿಸ್ತು, ಆದರ್ಶ ಸಮಾಜಕ್ಕೆ ಮಾದರಿಯಾಗಿದೆ. ಶಿವಮೂರ್ತಿ ಸ್ವಾಮಿ ಅವರು ಸಮಾಜ ಸ್ಮರಿಸುವಂತಹ ಕೆಲಸ ಮಾಡಿರುವುದಕ್ಕೆ ಸಾಕ್ಷಿ ಇಲ್ಲಿ ನೆರೆದಿರುವ ಜನಸ್ತೋಮ ಎಂದ ಶ್ರೀಗಳು, ಭೂಮಿಗೆ ಬರುವ ಮೊದಲೇ ಮನುಷ್ಯನ ಆಯುಷ್ಯದ ದಿನ, ತಾಸು ನಿಗದಿಯಾಗಿರುತ್ತದೆ. ಅಷ್ಟೇ ದಿನಗಳು ವ್ಯಕ್ತಿ ಭೂಮಿ ಮೇಲೆ ಬದುಕಲು ಸಾಧ್ಯ ಎಂದು ಶ್ರೀಗಳು ಹೇಳಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ವ್ಯಕ್ತಿ ಶಾಶ್ವತವಲ್ಲ. ಆತ ಮಾಡಿದ ಕೆಲಸ ಶಾಶ್ವತವಾಗಿರಲು ಸಾಧ್ಯ. ಶಿವಮೂರ್ತಿಸ್ವಾಮಿ ಅವರು ಡಾ.ಪುಟ್ಟರಾಜ ಕವಿ ಗವಾಯಿಗಳವರ 150 ತುಲಾಭಾರಗಳನ್ನು ಮಾಡಿಸಿ ದಾಖಲೆ ನಿರ್ಮಿಸಿ, ಅವರಿಗೊಂದು ಆಶ್ರಮ ನಿರ್ಮಾಣ ಮಾಡಿದ ಕಾರ್ಯ ಶಾಶ್ವತ. ಅವರ ಸೇವೆ ಅನನ್ಯವಾದುದು ಎಂದರು.

ಮಾಜಿ ಶಾಸಕ ಎಂ. ಬಸವರಾಜನಾಯ್ಕ ಮಾತನಾಡಿ, ಹುಟ್ಟು ಆಕಸ್ಮಿಕ, ಸಾವು ನಿಶ್ಚಿತ ಮಧ್ಯದ ಜೀವಿತಾವಧಿಯಲ್ಲಿ ಮನುಕುಲಕ್ಕೆ ಉತ್ತಮ ಮಾರ್ಗ ಹಾಕಿ ಕೊಡಬೇಕು. ಈ ನಿಟ್ಟಿನಲ್ಲಿ ಶಿವಮೂರ್ತಿಸ್ವಾಮಿ ಅವರ ಕೊಡುಗೆ ಅಪಾರವಾದುದು ಎಂದು ಹೇಳಿದರು.

ಪ್ರವಚನಕಾರ ಮಹಾಂತೇಶ ಶಾಸ್ತ್ರಿ ಅವರು, ಸಂಸ್ಕೃತಿ, ಸಂಸ್ಕಾರ ಮತ್ತು ಸಂಸ್ಕೃತ ಈ ಮೂರು ನಮ್ಮ ದೇಶದ ಆಸ್ತಿಗಳು. ಇವುಗಳನ್ನು ಜೀವನದಲ್ಲಿ ಚಾಚೂ ತಪ್ಪದೇ ಅಳವಡಿಸಿಕೊಂಡಿದ್ದ ಲಿಂ. ಶಿವಮೂರ್ತಿಸ್ವಾಮಿಯವರ ಶಿಸ್ತುಬದ್ಧ ಜೀವನ. ಇದು ಮನೆತನದಿಂದಲೇ ಬಂದಿದೆ ಎಂದರು.

ಹಿರಿಯ ವ್ಯಂಗ್ಯಚಿತ್ರಕಾರ ಹೆಚ್.ಬಿ.ಮಂಜುನಾಥ ಮಾತನಾಡಿ, ಲಿಂ. ಎ.ಹೆಚ್. ಶಿವಮೂರ್ತಿಸ್ವಾಮಿ ಅವರು ಭೌತಿಕವಾಗಿ ನಮ್ಮೊಂದಿಗೆ ಇಲ್ಲದಿರಬಹುದು. ಆದರೆ ಅವರಿಲ್ಲ ಎಂದು ದು:ಖ ಪಡುವುದಕ್ಕಿಂತ ಅವರು ಸಮಾಜಕ್ಕೆ ಏನು ಕೊಡುಗೆ ನೀಡಿದ್ದಾರೆಂಬುದನ್ನು ಸ್ಮರಿಸಬೇಕು. ಶರಣರು ಮರಣವೇ ಮಹಾನವಮಿ ಎಂದು ಹೇಳಿದ್ದಾರೆ. ಅವರಿಗೆ ಗೌರವ ಸಮರ್ಪಿಸುವ ಸಮಾರಂಭವಾಗಬೇಕೆಂದು ಹಿತ ನುಡಿದರು.

ಸಾಹಿತಿ ಮೃತ್ಯುಂಜಯ ರುಮಾಲೆ ಅವರು ಮಾತನಾಡಿ, ಶಿವಮೂರ್ತಿ ಸ್ವಾಮಿಯವರು ಗುರು-ವಿರಕ್ತ ಮಠಗಳೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದರು. ಅವರ ಚಿಂತನೆ, ಆದರ್ಶ ಎಲ್ಲರಿಗೂ ಮಾರ್ಗದರ್ಶನವಾಗಿದೆ ಎಂದರು.

ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ವಿಜಯಪುರದ ಕಿರೀಟ ಮಠದ ಶ್ರೀ ಸ್ವಾಮಿನಾಥ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.

ಶಿವಮೊಗ್ಗದ ಸಂಗಮೇಶ ಗವಾಯಿಗಳು, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ವಿಧಾನಪರಿಷತ್ ಮಾಜಿ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಶಾಸಕ ಬಿ.ಪಿ. ಹರೀಶ್, ಜಾನಪದ ವಿದ್ವಾಂಸ ಡಾ.ಎಂ.ಜಿ. ಈಶ್ವರಪ್ಪ, ನಿವೃತ್ತ ನೌಕರ ಅಬ್ದುಲ್ ಮಜೀದ್ ಮುಂತಾದವರು ಭಾಗವಹಿಸಿದ್ದರು.

ವೀರೇಶ್ವರ ಪುಣ್ಯಾಶ್ರಮದ ಮಕ್ಕಳು ವಚನ ಗಾಯನ ನಡೆಸಿಕೊಟ್ಟರು. ಶ್ರೀಮತಿ ಸುಗ್ಲಾದೇವಿ ಕಾರ್ಯಕ್ರಮ ನಿರೂಪಿಸಿದರು. ಶಿವಮೂರ್ತಿ ಸ್ವಾಮಿಯವರ ಪುತ್ರ ಎ.ಎಸ್. ಸಿದ್ದೇಶ್, ಬಸವರಾಜ್ ಮತ್ತಿತರರಿದ್ದರು.

# ಸದೃಢ ದೇಹದಿಂದ ಸದೃಢ ಮನಸ್ಸು : ಪೊಲೀಸ್ ಅಧಿಕಾರಿ ಸೋಮಶೇಖರ್



ದಾವಣಗೆರೆ, ಅ. 29- ಸದೃಢವಾದ ದೇಹವಿದ್ದಲ್ಲಿ ಸದೃಢ ಮನಸ್ಸು ಇರುತ್ತದೆ. ಮಾನಸಿಕ ಸದೃಢತೆಗಾಗಿ ಯಾವುದಾದರೊಂದು ಕ್ರೀಡೆಯಲ್ಲಿ ಸದಾ ಕ್ರಿಯಾಶೀಲರಾಗಿ ತೊಡಗಿಸಿಕೊಳ್ಳುವ ಅಗತ್ಯವಿದೆ ಎಂದು ಪೊಲೀಸ್ ಅಧಿಕಾರಿ ಸೋಮಶೇಖರ್ ಹೇಳಿದರು.

ನಗರದ ರೋಟರಿ ಬಾಲಭವನದಲ್ಲಿ ಗ್ರೂಪ್ ಆಫ್ ಐರನ್ ಗೇಮ್ಸ್ (ಉಕ್ಕಿನ ಕ್ರೀಡೆಗಳ ಒಕ್ಕೂಟ) ವತಿಯಿಂದ ಜೀವ ಮಾನ ಸಾಧನಾ ಪ್ರಶಸ್ತಿ ಪಡೆದ ಪವರ್ ಲಿಫ್ಟರ್ ಮಹೇಶ್ವರಯ್ಯ ಅವರ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

ಸಾಧಿಸುವ ಛಲ, ಗೆಲ್ಲುವ ಗುರಿ ಇದ್ದರೆ ಸಾಧನೆ ಸುಲಭ ಎನ್ನುವುದಕ್ಕೆ ಮಹೇಶ್ವರಯ್ಯ ಅವರೇ ತಾಜಾ ಉದಾಹರಣೆ. ಇಂದಿನ ಯುವಕರಿಗೆ ಅವರು ಸ್ಫೂರ್ತಿಯಾಗಿದ್ದಾರೆ. ಅವರಲ್ಲಿ ಛಲ ಇರುವ ಕಾರಣ ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದ ಕ್ರೀಡೆಯಲ್ಲಿ ವಿಜೇತರಾಗಿ ಭಾರತದ ಕೀರ್ತಿಯನ್ನು ಹೆಚ್ಚಿಸಿದ್ದಾರೆಂದು ಪ್ರಶಂಸಿಸಿದರು.

ಭವ್ಯ ಭಾರತದ ಪ್ರಜೆಗಳನ್ನು ನಿರ್ಮಾಣ ಮಾಡಲು ಕ್ರೀಡಾ ಕ್ಷೇತ್ರ ಸಹಕಾರಿಯಾಗಲಿದೆ. ದೇಶಕ್ಕೆ ಕೀರ್ತಿ ತರುವಂತಹ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಿ, ಬೆಳಸಬೇಕಾಗಿದೆ ಎಂದು ಹೇಳಿದರು.

ಪಿಎಸ್ಐ ಕೆ.ಎನ್. ಶೈಲಜಾ ಮಾತನಾಡಿ, ಕ್ರೀಡಾ ಕ್ಷೇತ್ರಕ್ಕೆ ಮಹಿಳೆಯರು ಹೆಚ್ಚು ಹೆಚ್ಚು ಪಾದರ್ಪಣೆ ಮಾಡಬೇಕು. ಮಹಿಳಾ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಅವಶ್ಯವಿದೆ ಎಂದರು.

ಹೆಚ್ಚಾಗಿ ಮಧ್ಯದ ವರ್ಗದವರೇ ಕ್ರೀಡೆಗಳಲ್ಲಿ ಭಾಗವಹಿಸುತ್ತಾರೆ. ಅವರಿಗೆ ಕ್ರೀಡಾಭಿಮಾನಿಗಳ, ಕ್ರೀಡಾ ಪ್ರೋತ್ಸಾಹಕರ, ದಾನಿಗಳ ಸಹಕಾರ ಅತ್ಯಗತ್ಯ. ಶೇ. 5 ಕ್ರೀಡಾ ಮೀಸಲಾತಿ ಇರುವ ಕಾರಣದಿಂದ ಹಾಗೂ ಕ್ರೀಡೆಯಲ್ಲಿ ಸಾಧನೆ ಮಾಡಿದ್ದರಿಂದಲೇ ಪೊಲೀಸ್ ಅಧಿಕಾರಿಯಾಗಿ ಉನ್ನತ ಸ್ಥಾನ ಗಳಿಸಲು ಸಾಧ್ಯವಾಗಿದೆ ಎಂದು ಹೇಳಿದರು.

ಬೇರೆ ಬೇರೆ ಹಾದಿಗಳನ್ನು ಹಿಡಿಯದೇ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಬದುಕನ್ನು ಕಟ್ಟಿಕೊಳ್ಳುವತ್ತ ಎಲ್ಲರ ಪ್ರಯತ್ನ ಇರಬೇಕು ಎಂದರು.

ಯುವ ರಾಜಕಾರಣಿ, ಉದ್ಯಮಿ ಸಮರ್ಥ ಶಾಮನೂರು ಮಾತನಾಡಿ, ಮನೆಯಿಂದ ಹೊರಬಂದಾಗ ಮನೆ, ಊರು, ರಾಜ್ಯ, ದೇಶದ ಗೌರವ ಕಾಪಾಡುವ ನಿಟ್ಟಿನಲ್ಲಿ ಎಲ್ಲರೂ ಕಾರ್ಯೋನ್ಮುಖರಾಗಬೇಕು. ಕ್ರೀಡೆಗಳಿಗೆ ಎಲ್ಲರ ಪ್ರೋತ್ಸಾಹ ಅಗತ್ಯ ಎಂದರು.

ಇದೇ ವೇಳೆ ಅಂತರಾಷ್ಟ್ರೀಯ ಪವರ್ ಲಿಫ್ಟರ್, ‘ಜೀವಮಾನ ಸಾಧನಾ’ ಪ್ರಶಸ್ತಿ ಪುರಸ್ಕೃತ ಮಹೇಶ್ವಯ್ಯ ಅವರನ್ನು ಗೌರವಿಸಲಾಯಿತು.

ಉದ್ಯಮಿ ದಾದಾಪೀರ್ ಕ್ರೀಡೆಗಳ ಮಹತ್ವ ಕುರಿತು ಮಾತನಾಡಿದರು. ಅಂತರಾಷ್ಟ್ರೀಯ ಕ್ರೀಡಾಪಟುಗಳಾದ ಹೆಚ್. ದಾದಾಪೀರ್, ಜೆ.ಎನ್. ಶ್ರೀನಿವಾಸ್, ಪ್ರಕಾಶ್ ಕಾರಂತ್ ಶಿವಮೊಗ್ಗ, ನಟರಾಜ್, ಮಹೇಶ್ವರಯ್ಯ, ಎಂ.ಹೆಚ್. ಷಣ್ಮುಖ, ನಂದೀಶ್, ರಜ್ವಿಖಾನ್ ಮತ್ತಿತರರಿದ್ದರು.

## ನಗರದಲ್ಲಿ ಆರ್‌ಜಿ ಕಾಲೇಜಿನ ಘಟಿಕೋತ್ಸವ

ದಾವಣಗೆರೆ, ಅ. 29- ಆರ್.ಜಿ. ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್ ಕಾಲೇಜಿನ 6ನೇ ಘಟಿಕೋತ್ಸವ ಕಾರ್ಯಕ್ರಮ ನಾಳೆ ದಿನಾಂಕ 30ರಂದು ಬೆಳಿಗ್ಗೆ 9 ಗಂಟೆಗೆ ಭಂಟರ ಭವನದಲ್ಲಿ ನಡೆಯಲಿದೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾಲೇಜಿನ ಕನ್ನಡ ಉಪನ್ಯಾಸಕ ಶರಣ ಕುಮಾರ್ ಎಲ್.ಎಂ., ಮುಖ್ಯ ಅತಿಥಿಗಳಾಗಿ ದಾವಣಗೆರೆ ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ. ಬಿ.ಡಿ. ಕುಂಬಾರ್ ಹಾಗೂ ಹೊನ್ನಾವರದ ಎಸ್.ಡಿ.ಎಂ. ಕಾಲೇಜು ವಾಣಿಜ್ಯ ಶಾಸ್ತ್ರ ವಿಭಾಗದ ನಿವೃತ್ತ ಮುಖ್ಯಸ್ಥ ಡಾ.ವಿನಾಯಕ ಎಂ.ಭಂಡಾರಿ ಆಗಮಿಸಲಿದ್ದಾರೆ. ಕಾಲೇಜು ಮುಖ್ಯಸ್ಥರಾದ ಶ್ವೇತಾ ಗಾಂಧಿ, ಜಿ.ಕೆ. ಗೀತಾ, ಪಿ.ಎಸ್. ಶಿವಪ್ರಕಾಶ್ ಉಪಸ್ಥಿತರಿರಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ವಿದ್ಯಾರ್ಥಿಗಳಾದ ಬಿ.ಎಸ್. ಸ್ವಪ್ನ, ನರೇಶ್ ಸಂಕೋಳ್, ರಕ್ಷಿತಾ ರೆಡ್ಡಿ, ಸಿರಿ ಸಾವಂತ್ ಇತರರು ಉಪಸ್ಥಿತರಿದ್ದರು.

## ಚಿಕ್ಕ ಕುರುಬರಹಳ್ಳಿಯಲ್ಲಿ ಇಂದು ನೇತ್ರ ಚಿಕಿತ್ಸೆ

ಗ್ರೇಸ್ ಗಾಸ್‌ಪಲ್ ಮಿನಿಸ್ಟ್ರೀಸ್ ಚಾರಿಟೇಬಲ್ ಟ್ರಸ್ಟ್ ಚಿಕ್ಕಕುರುಬರಹಳ್ಳಿ ಹಾಗೂ ಎಸ್.ಎಸ್. ಕೇರ್ ಟ್ರಸ್ಟ್, ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಚನ್ನಗಿರಿ ತಾಲ್ಲೂಕು ಚಿಕ್ಕಕುರುಬರಹಳ್ಳಿಯ ಯೇಸು ಪ್ರಾರ್ಥನಾ ಮಂದಿರದಲ್ಲಿ ಇಂದು ಉಚಿತ ನೇತ್ರ ತಪಾಸಣೆ ಶಿಬಿರ ನಡೆಯಲಿದೆ ಎಂದು ಟ್ರಸ್ಟ್‌ನ ಕಾರ್ಯದರ್ಶಿ ಟಿ. ಕಿಶೋರ್ ಕುಮಾರ್ ತಿಳಿಸಿದ್ದಾರೆ.



## ಬಿಎಸ್‌ಸಿ ಪ್ರಥಮ ದರ್ಜೆ ಕಾಲೇಜಿನಿಂದ ಎನ್ನೆಸ್ಸೆಸ್ ಶಿಬಿರ

ದಾವಣಗೆರೆ, ಅ. 29 - ದಾವಣಗೆರೆ ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ ಘಟಕ, ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜು ರಾಷ್ಟ್ರೀಯ ಸೇವಾ ಯೋಜನೆ ಘಟಕದ ಜಂಟಿ ಆಶ್ರಯದಲ್ಲಿ ಹಳೆಬಿಸಲೇರಿ ಗ್ರಾಮದಲ್ಲಿ ಏರ್ಪಾಡಾಗಿದ್ದ ವಿಶೇಷ ವಾರ್ಷಿಕ ಶಿಬಿರವನ್ನು ಕಾಲೇಜಿನ ಅಧ್ಯಕ್ಷ ಬಿ.ಸಿ. ಶಿವಕುಮಾರ್ ಉದ್ಘಾಟಿಸಿದರು.

ದಾವಣಗೆರೆ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜನಾಧಿಕಾರಿ ಡಾ. ಅಶೋಕ್ ವಿ. ಪಾಳ್ಯದ್, ಎಸ್.ಬಿ.ಸಿ. ಕಾಲೇಜಿನ ಪ್ರಾಂಶುಪಾಲ ಡಾ.ಕೆ ಷಣ್ಮುಖ ಮತ್ತಿತರರು ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಪ್ರಾಂಶುಪಾಲ ಎಂ.ಸಿ. ಗುರು ವಹಿಸಿದ್ದರು.

# ರಾಮನ ಚರಿತ್ರೆ ಇಡೀ ಜಗತ್ತಿಗೇ ಪರಿಚಯಿಸಿದ ಕೀರ್ತಿ ಮಹರ್ಷಿ ವಾಲ್ಮೀಕಿಗೆ ಸಲ್ಲುತ್ತದೆ



**ಹರಪನಹಳ್ಳಿ ಶಾಸಕರಾದ ಲತಾ ಮಲ್ಲಿಕಾರ್ಜುನ್ ಶ್ಲಾಘನೆ**

ಹರಪನಹಳ್ಳಿ, ಅ.29- ಮಹರ್ಷಿ ವಾಲ್ಮೀಕಿ, ಬಸವಣ್ಣ, ಕನಕದಾಸರು, ಪುರಂದರದಾಸರು, ಅಂಬೇಡ್ಕರ್ ಸೇರಿದಂತೆ ಇತರ ಮಹನೀಯರ ಬಗ್ಗೆ ವಿದ್ಯಾರ್ಥಿಗಳು ಅರಿತುಕೊಳ್ಳಬೇಕು. ರಾಮನ ಚರಿತ್ರೆ ಇಡೀ ಜಗತ್ತಿಗೆ ಪರಿಚಯಿಸಿದ ಕೀರ್ತಿ ಮಹರ್ಷಿ ವಾಲ್ಮೀಕಿ ಅವರಿಗೆ ಸಲ್ಲುತ್ತದೆ ಎಂದು ಶಾಸಕರಾದ ಶ್ರೀಮತಿ ಲತಾ ಮಲ್ಲಿಕಾರ್ಜುನ್ ಹೇಳಿದರು.

ತಾಲ್ಲೂಕಿನ ಹಾರಕನಾಳು ಗ್ರಾಮದ ವಾಲ್ಮೀಕಿ ಸಮುದಾಯದ ಸಂಯುಕ್ತಾಶ್ರಯದಲ್ಲಿ ಇಂದು ಆಯೋಜಿಸಿದ್ದ ಆದಿಕವಿ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದ ಉದ್ಘಾಟನೆ ಮಾಡಿ ಅವರು ಮಾತನಾಡಿದರು.

ಮುಂದಿನ ಪೀಳಿಗೆಗೆ ಹಬ್ಬ-ಹರಿದಿನ ಸೇರಿದಂತೆ ವಿವಿಧ ಆಚರಣೆಗಳನ್ನು ಬಳುವಳಿಯಾಗಿ ನೀಡಬೇಕಿದೆ. ಮಹಾನಾಯಕರನ್ನು ಒಂದೇ ಜಾತಿಗೆ ಸೀಮಿತಗೊಳಿಸಬಾರದು. ಸಂವಿಧಾನದ ಅಡಿಯಲ್ಲಿ ಎಲ್ಲರೂ ಸಹಬಾಳ್ವೆಯಿಂದ ಜೀವನ ಸಾಗಿಸಬೇಕು ಎಂದರು.

ಹಾರಕನಾಳು ಗ್ರಾಮ ಪಂಚಾಯತಿ ಅಧ್ಯಕ್ಷ ಭಾಗ್ಯ ಕೆ. ಅಶೋಕ್ ಮಾತನಾಡಿ, ‘ಸರ್ವರಿಗೂ ಸಮಬಾಳು, ಸಮಪಾಲು’ ಎಂಬ ಸಂದೇಶ ಸಾರಿದ ಮಹನೀಯರು ಮಹರ್ಷಿ ವಾಲ್ಮೀಕಿ. ಎಲ್ಲಾ ಸಮಾಜದವರು ಸೇರಿ ಜಯಂತಿ ಆಚರಿಸಬೇಕಿದೆ. ಮನುಕುಲಕ್ಕೆ ಅಮೂಲ್ಯ ಗ್ರಂಥವಾದ ರಾಮಾಯಣ ನೀಡಿದ್ದಾರೆ. ಅವರ ಸಂದೇಶದ ಮಾರ್ಗದಲ್ಲಿ ನಾವೆಲ್ಲರೂ ನಡೆಯಬೇಕು ಎಂದು ತಿಳಿಸಿದರು.

ತಾಲ್ಲೂಕು ವಾಲ್ಮೀಕಿ ಸಮಾಜದ ಅಧ್ಯಕ್ಷ ಕೆ. ಹುಚ್ಚೆಂಗಪ್ಪ ಮಾತನಾಡಿ, ತಾಲ್ಲೂಕಿನ ಕಟ್ಟಕಡೆಯ ಹಳ್ಳಿಗಳಲ್ಲಿ ಇಂತಹ ನಾಯಕರ ಜಯಂತಿ ಆಚರಿಸುವುದರಿಂದ ಜನರಿಗೆ ಅರಿವಿನ ಜಾಗೃತಿ ಮತ್ತು ಸಮಾಜದ ಅಂಕು ಡೊಂಕುಗಳನ್ನು ತಿದ್ದಲು ಸಹಕಾರಿಯಾಗುತ್ತದೆ. ಜೊತೆಗೆ ಇಂದಿನ ಮಕ್ಕಳಿಗೆ ಶಿಕ್ಷಣದ ಅರಿವು ಮೂಡಿಸುವ ಪ್ರಯತ್ನ ಇಂತಹ ಕಾರ್ಯಕ್ರಮಗಳಿಂದ ಸಾಧ್ಯ ಎಂದು ಹೇಳಿದರು.

ಬಸವರಾಜಯ್ಯ ಮಾತನಾಡಿ, ವಾಲ್ಮೀಕಿ ಮಹಾನ್ ನಾಯಕನ ಸಾಧನೆ ಕುರಿತು ಜಾಗೃತಿ ಮೂಡಿಸುವ ಪ್ರಯತ್ನ ಮಾಡಬೇಕಿದೆ.ಇಂತಹ ನಾಯಕರ ಜಯಂತಿ ಕೇವಲ ಸಮುದಾಯಕ್ಕೆ ಸಮೀತವಾಗದಿರಲಿ ಎಲ್ಲಾ ಸಮುದಾಯದವರು ಅವರ ಜಯಂತಿ ಆಚರಣೆ ಮಾಡುವಂತೆ ಆಗಬೇಕು ಎಂದರು.

ಸಮಾಜದ ಮುಖಂಡ ಮನೋಜ್ ತಳವಾರ ಮಾತನಾಡಿದರು. ಹಾರಿಕಾ ಮಂಜುನಾಥ್, ವಾಲ್ಮೀಕಿ ಮತ್ತು ರಾಮಾಯಣ ಕುರಿತಾದ ಮಾಹಿತಿ ನೀಡಿದರು.ಕನ್ನಡ ಕೋಗಿಲೆ ಖ್ಯಾತಿ ಮಹಾನ್ಯ ಪಾಟೀಲ್ ಗಾಯಕಿಯಿಂದ ಸಂಗೀತ ಕಾರ್ಯಕ್ರಮ ನೀಡಿದರು. ಕೊಣ್ಣೂರು ಜಾನಪದ ಕಲಾಮೇಳದಿಂದ ಜನಪದ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ನೀಡಲಾಯಿತು.

ಸಮಾಜದ ಮುಖಂಡರಾದ ಸಣ್ಣ ಹಾಲಪ್ಪ, ಪಕ್ಕಿರಪ್ಪ ಕರವಸೂಲಿಗ ದುರಗದಯ್ಯ, ಬೆಲದ ಶಿವು, ಬಜ್ಜಿ ರಾಜಪ್ಪ, ಶಂಕರ್, ಡಿ.ಜಿ.ಪ್ರಕಾಶ್ ಗೌಡರು, ಶೃತಿ ಪಂಪಾನಾಯ್ಕ, ಚೂರಿ ಬಸವರಾಜ್ ಮೋತಿನಾಯ್ಕ, ಕೃಷ್ಣಾನಾಯ್ಕ, ಇಮಾಮ್ ಸಾಬ್, ಹಾಲೇಶ್ ನಾಯ್ಕ, ರಾಜಶೇಖರ್, ಓಮ್ಯಾಪ್ಪ, ಶಿವುನಾಯ್ಕ, ಕೆ.ದುರ್ಗಮ್ಮ, ಪ್ರಭು ಮಜ್ಜಿಗೆರೆ, ಮಾಂತೇಶ್, ಸ್ವಾಮಿನಾಯ್ಕ, ಹರೀಶ್ ನಾಯ್ಕ, ಬಸವರಾಜ್, ಜೋಗಪ್ಪನವರ ಪರಸಪ್ಪ, ಹಾಲೇಶಪ್ಪ, ಪೀಕಾನಾಯ್ಕ, ವೀರೇಶ್, ನಿಂಗನಗೌಡ, ದುರ್ಗಾನಾಯ್ಕ, ಪೂಜಾರ್ ಮಂಜಪ್ಪ, ಗೋಣಿ ಸ್ವಾಮಿ, ಚೋರಿ ಬಸಣ್ಣ, ಏಕಲವ್ಯ, ಮತ್ತೂರು ಬಸವರಾಜ್, ಶಿವಮೂರ್ತಿ, ಬಣಕಾರ್ ಶಂಕ್ರಪ್ಪ, ಮಜ್ಜಿಗೇರೆ ಬೀರಪ್ಪ, ಪೂಜಾರ್ ವೀರಣ್ಣ, ಗೋಣಿ ಸ್ವಾಮಿ, ಪೂಜಾರ್ ಬಸವರಾಜ್, ಕೂರ್ಕೋಟಿ ರೇವಣಪ್ಪ, ಹಾವನೂರು ಕರಿಯಪ್ಪ, ಇತರರು ಭಾಗಿಯಾಗಿದ್ದರು.




ಆರೂಢ ದಾಸೋಹಿ, ಧರ್ಮ ಚಿಂತಾಮಣಿ

**ಮಹಾಶರಣ ಲಿಂ॥ ಮಾಗನೂರು ಬಸಪ್ಪನವರ**

28ನೇ ವಾರ್ಷಿಕ ಪುಣ್ಯಸ್ಮರಣೆ ಮತ್ತು ಶಿವಭಕ್ತಿ ಸಂಪನ್ನೆ

**ಶರಣೆ ಲಿಂ॥ ಸರ್ವಮಂಗಳಮ್ಮ ಮಾಗನೂರು ಬಸಪ್ಪನವರ**

15ನೇ ವಾರ್ಷಿಕ ಪುಣ್ಯಸ್ಮರಣೆ ಹಾಗೂ ಸರ್ವಶರಣ ಸಮ್ಮೇಳನ

**ದಿನಾಂಕ : 30.10.2023ರ ಸೋಮವಾರ, ಸಮಯ : ಸಂಜೆ 6.00 ಗಂಟೆಗೆ**

**ಸ್ಥಳ : ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪ ತರಳಬಾಳು ಬಡಾವಣೆ, ದಾವಣಗೆರೆ-5.**

ದಿವ್ಯ ಸಾನ್ನಿಧ್ಯ : **ಪರಮಪೂಜ್ಯ ಶ್ರೀ ಫಕೀರ ದಿಂಗಾಲೇಶ್ವರ ಮಹಾಸ್ವಾಮಿಗಳು**
ಉತ್ತರಾಧಿಕಾರಿಗಳು, ಭಾವೈಕ್ಯತಾ ಸಂಸ್ಥಾನ ಮಠ, ಶಿರಹಟ್ಟಿ-ಬಾಳೆಹೊಸೂರು.

ಅಧ್ಯಕ್ಷತೆ : **ಶರಣ ಹೆಚ್.ಆರ್. ಬಸವರಾಜಪ್ಪನವರು**
ಅಧ್ಯಕ್ಷರು, ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘ (ರಿ) ಸಿರಿಗೆರೆ,
ಅಧ್ಯಕ್ಷರು, ರಾಜ್ಯ ರೈತ ಸಂಘ, ಬೆಂಗಳೂರು

ಮುಖ್ಯ ಅತಿಥಿಗಳು : **ಶರಣ ಜಿ.ಎಂ. ಸಿದ್ದೇಶ್ವರರವರು**
ಸಂಸದರು, ಮಾಜಿ ಕೇಂದ್ರ ಸಚಿವರು, ಬೆಂಗಳೂರು.

ಸನ್ಮಾನಿತರು : ಪರಿಸರ ಪ್ರೇಮಿ **ಶರಣ ಕೆ. ಅಮರನಾರಾಯಣರವರು**
ನಿವೃತ್ತ ಐಎಎಸ್ ಅಧಿಕಾರಿಗಳು ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಬೆಂಗಳೂರು.
**ಶರಣ ಎನ್.ಟಿ. ಎರ್ರಿಸ್ವಾಮಿಯವರು**
ಸಾಹಿತಿಗಳು ಹಾಗೂ ನಿವೃತ್ತ ಡಿವಿಸನಲ್ ಮ್ಯಾನೇಜರ್, ಕೆನರಾ ಬ್ಯಾಂಕ್, ಜಗಳೂರು.
**ಶರಣ ಡಾ. ಉಮೇಶ್‌ರವರು**
ಖ್ಯಾತ ನೇತ್ರ ತಜ್ಞರು, ದಾವಣಗೆರೆ.
**ಶರಣ ಡಾ. ಎಸ್. ಶಿಶುಪಾಲರವರು**
ಹವ್ಯಾಸಿ ಪಕ್ಷಿ ವೀಕ್ಷಕರು ಹಾಗೂ ಪ್ರಾಧ್ಯಾಪಕರು, ಮೈಕ್ರೋ ಬಯಾಲಜಿ ವಿಭಾಗ, ದಾ.ವಿ.ವಿ., ದಾವಣಗೆರೆ.
**ಶರಣ ಬಲಭದ್ದರ್ ಜೈನ್‌ರವರು,** ವಾಣಿಜ್ಯೋದ್ಯಮಿಗಳು, ದಾವಣಗೆರೆ.
**ಶರಣ ಹೆಚ್.ಎಂ. ನಾಗರಾಜರವರು**
ಪ್ರಗತಿಪರ ರೈತರು, ಹಳೇಬಾತಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ

ನುಡಿ ನಮನ : **ಶರಣ ಗಂಗಾಧರಯ್ಯ ಹಿರೇಮಠ,** ನಿವೃತ್ತ ಪ್ರಾಧ್ಯಾಪಕರು, ದಾವಣಗೆರೆ.

ಆದರದ ಸ್ವಾಗತ ಬಯಸುವವರು

**ಶರಣ ಎಂ.ಬಿ. ಚನ್ನಬಸವನಗೌಡ ಮತ್ತು ಸಹೋದರರು ಹಾಗೂ ವಂಶಸ್ಥರು**
**ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನ, ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್, ದಾವಣಗೆರೆ.**

ವಿ.ಸೂ. : ಸಾರ್ವಜನಿಕರು ಈ ಕೆಳಗಿನ ಲಿಂಕನ್ನು ಬಳಸಿ ಶರಣ ಲಿಂ॥ ಮಾಗನೂರು ಬಸಪ್ಪನವರ ಕಿರು ಸಾಕ್ಷ್ಯಚಿತ್ರವನ್ನು ವೀಕ್ಷಿಸಬಹುದು.
https : //www/youtube.com/watch?v=R_8nRoV5ryE&t=24s

# ವಕೀಲರು ಸದಾ ಅಧ್ಯಯನ ನಿರತರಾಗಿರಬೇಕು

## 'ವಕೀಲ ಸಂರಕ್ಷಣಾ ಮಸೂದೆ' ಕರಡಿನ ರೂವಾರಿ ಕೆ. ಕೋಟೇಶ್ವರರಾವ್ ಆಶಯ



ದಾವಣಗೆರೆ, ಅ. 29- 'ವಿದ್ವತ್‌ಪೂರ್ಣ' ಎಂಬ ವಿಶೇಷಣದ ಗೌರವಕ್ಕೆ ಪಾತ್ರರಾಗಿರುವ ವಕೀಲರು ಸದಾ ಅಧ್ಯಯನ ನಿರತ ವಿದ್ಯಾರ್ಥಿಗಳಾಗಿರಬೇಕು. ನ್ಯಾಯವಾದಿ ಅಧ್ಯಯನವನ್ನು ನಿಲ್ಲಿಸಿದ ದಿನವೇ ಆತನಲ್ಲಿರುವ 'ವಕೀಲ' ಸತ್ತು ಹೋಗುತ್ತಾನೆ ಎಂದು ಕರ್ನಾಟಕ ರಾಜ್ಯ ವಕೀಲರ ಪರಿಷತ್‌ನ ಸದಸ್ಯ, ಹಿರಿಯ ವಕೀಲ ಹಾಗೂ 'ವಕೀಲ ಸಂರಕ್ಷಣಾ ಮಸೂದೆ' ಕರಡಿನ ರೂವಾರಿ ಕೆ. ಕೋಟೇಶ್ವರರಾವ್ ಪುನರ್ ಪ್ರತಿಪಾದಿಸಿದರು.

ನಗರದ ವಕೀಲರ ಸಂಘದಲ್ಲಿ ನಿನ್ನೆ ಏರ್ಪಡಿಸಿದ್ದ ಸಿಓಪಿ ಮತ್ತು ವಕೀಲ ಸಂರಕ್ಷಣಾ ಕಾಯ್ದೆಯ ಕುರಿತು ನಡೆದ ಸಮಾಲೋಚನಾ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಕಾನೂನು ಕಾಲೇಜಿನಲ್ಲಿ ಸಂಪಾದಿಸುವ ಜ್ಞಾನ ಶೇ. ಒಂದು ಮಾತ್ರ. ಉಳಿದ ಶೇ. 99ನ್ನು ವಕೀಲರ ವೃತ್ತಿಯಲ್ಲಿ ನಿರತರಾಗಬೇಕಾದಾಗ ಕಲಿಯಬೇಕಾಗುತ್ತದೆ. ಪ್ರಾಮಾಣಿಕತೆಯನ್ನು ರೂಢಿಸಿಕೊಂಡು ಸತತ ಓದಿನಿಂದ ಕಾನೂನುಗಳ ಮೇಲೆ ಹಿಡಿತ ಮತ್ತು ಪ್ರಭುತ್ವ ಸಾಧಿಸಿ, ಪ್ರತಿಭೆ-ಪಾಂಡಿತ್ಯಗಳ ಮೂಲಕ ನ್ಯಾಯಾಲಯದಲ್ಲಿ ವಾದಿಸಿ, ತಮ್ಮ ಕಕ್ಷಿದಾರರಾಗಿ ಅನುಕೂಲವಾಗುವ ಆದೇಶವನ್ನು ನ್ಯಾಯಾಲಯಗಳಲ್ಲಿ ಪಡೆಯಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ದೇಶಾದ್ಯಂತ ವಕೀಲರ ಮೇಲೆ ಹಲ್ಲೆಯ ಪ್ರಕರಣಗಳು ಹಾಗೂ ಪೊಲೀಸ್ ದೌರ್ಜನ್ಯದ ಪ್ರಕರಣಗಳು ನಡೆಯುತ್ತಿದ್ದು, ಅವುಗಳಿಂದ ವಕೀಲರನ್ನು ರಕ್ಷಿಸುವುದೇ, ವಕೀಲರ ಸಂರಕ್ಷಣಾ ಕಾಯಿದೆಯ ಉದ್ದೇಶ. ತಾವು ಸರ್ಕಾರಕ್ಕೆ ಸಲ್ಲಿಸಿರುವ ಕರಡು ಪ್ರತಿಯ ಕನ್ನಡ ಭಾಷಾಂತರ ನಡೆಯುತ್ತಿದ್ದು, ಮುಂದಿನ ವಿಧಾನ ಮಂಡಲದ ಅಧಿವೇಶನದಲ್ಲಿ ಮಸೂದೆ ಮಂಡನೆಯಾಗಲಿರುವ ಭರವಸೆ ಇದೆ. ಮುಖ್ಯಮಂತ್ರಿಯವರು ಈ ಮಸೂದೆಗೆ ಬೆಂಬಲ ವ್ಯಕ್ತಪಡಿಸಿರುವುದನ್ನು ಅವರು ಸಭೆಯ ಗಮನಕ್ಕೆ ತಂದರು.

ವಕೀಲರನ್ನು ಹಲ್ಲೆಗಳಿಂದ ರಕ್ಷಿಸುವ ಕಾನೂನುಗಳು ಅಮೇರಿಕಾ ಸೇರಿದಂತೆ ಹಲವು ದೇಶಗಳಲ್ಲಿ ಜಾರಿಯಲ್ಲಿವೆ. ರಾಜಸ್ಥಾನ ರಾಜ್ಯದಲ್ಲಿ ಈ ಬಗೆಯ ಕಾಯ್ದೆ ಈಗಾಗಲೇ ಅಸ್ತಿತ್ವದಲ್ಲಿದೆ ಎಂದವರು ವಿವರಿಸಿದರು.

ದೇಶದ ವಿವಿಧ ನ್ಯಾಯಾಲಯಗಳಲ್ಲಿ ಈಗ ಸುಮಾರು 17 ಲಕ್ಷ ವಕೀಲರು ವೃತ್ತಿ ನಿರತರಾಗಿದ್ದು, ಇವರಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮಹಿಳಾ ವಕೀಲರು ಇದ್ದಾರೆ ಎಂದು ಕೋಟೇಶ್ವರರಾವ್ ಮಾಹಿತಿ ನೀಡಿದರು.

ಕೊರೊನಾ ಮಾರಿಯ ಸಂದರ್ಭದಲ್ಲಿ ಮೃತರಾದ ಸುಮಾರು 320 ವಕೀಲರಿಗೆ ಪರಿಷತ್ತು ಧನ ಸಹಾಯ ನೀಡಿತ್ತು ಎಂದರು.

ವಕೀಲರ ಸಂಘಗಳಿಗೆ ಸರ್ಕಾರ ನೀಡುತ್ತಿದ್ದ ವಾರ್ಷಿಕ ಪುಸ್ತಕ ಹಾಗೂ ಪೀಠೋಪಕರಣ ಅನುದಾನ ಈಚಿನ ವರ್ಷಗಳಲ್ಲಿ ನಿಲ್ಲಿಸಿರುವ ಬಗ್ಗೆ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್ ಮಾತನಾಡಿ, ವಕೀಲರ ಪರಿಷತ್ತಿನ ಹಲವಾರು ಪಾರದರ್ಶಕ ಕಾರ್ಯಗಳಿಗೆ ಸಾಕ್ಷಿಯಾಗಿರುವ ಕೋಟೇಶ್ವರರಾವ್ ಅವರು ವಕೀಲರ ಸಂರಕ್ಷಣಾ ಕಾಯ್ದೆಯನ್ನು ರೂಪಿಸಿದವರು ಮತ್ತು ರಾಜ್ಯದ ಯಾವುದೇ ಭಾಗದಲ್ಲಿ ವಕೀಲರಿಗೆ ನಡೆಯುವ ಅನ್ಯಾಯದ ವಿರುದ್ಧ ಧ್ವನಿ ಎತ್ತಿ ಹೋರಾಡುವ ವ್ಯಕ್ತಿಯಾಗಿದ್ದಾರೆ ಎಂದು ಶ್ಲಾಘಿಸಿದರು.

ವೇದಿಕೆಯಲ್ಲಿ ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಜಿ.ಕೆ. ಬಸವರಾಜ್ ಗೋಪನಾಳ್, ಕಾರ್ಯದರ್ಶಿ ಎಸ್. ಬಸವರಾಜ್, ಸಹಕಾರ್ಯದರ್ಶಿ ಎ.ಎಸ್. ಮಂಜುನಾಥ್, ಜಗಳೂರು ವಕೀಲರ ಸಂಘದ ಅಧ್ಯಕ್ಷ ಓಂಕಾರೇಶ್ವರ, ಕಾರ್ಯಕಾರಿ ಸಮಿತಿ ಸದಸ್ಯರಾದ ಸಂತೋಷ್‌ಕುಮಾರ್ ಜಿ.ಜೆ., ಚೌಡಪ್ಪ, ನೀಲಕಂಠಯ್ಯ ಕೆ.ಎಂ., ಆರ್. ಭಾಗ್ಯಲಕ್ಷ್ಮಿ, ನಾಗರಾಜ್ ಎಲ್., ಚೌಡಪ್ಪ ಎಂ., ರಾಘವೇಂದ್ರ ಎಂ. ಮತ್ತು ಇತರರು ಉಪಸ್ಥಿತರಿದ್ದರು.

# ಹರಪನಹಳ್ಳಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷರಾಗಿ ಅರಸೀಕೆರೆ ವೈ.ಡಿ.ಅಣ್ಣಪ್ಪ





**ಮಹಿಳಾ ಘಟಕದ ಅಧ್ಯಕ್ಷರಾಗಿ ನಿಟ್ಟೂರು ವನಜಾಕ್ಷಿ**

ಹರಪನಹಳ್ಳಿ, ಅ.29- ವಾಲ್ಮೀಕಿ ನಾಯಕ ಸಮಾಜದ ತಾಲ್ಲೂಕು ಅಧ್ಯಕ್ಷರಾಗಿ ಅರಸೀಕೆರೆ ವೈ.ಡಿ. ಅಣ್ಣಪ್ಪ ಹಾಗೂ ಮಹಿಳಾ ಘಟಕದ ಅಧ್ಯಕ್ಷರಾಗಿ ನಿಟ್ಟೂರು ವನಜಾಕ್ಷಿ ಆಯ್ಕೆಯಾಗಿದ್ದಾರೆ.

ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ಭಾನುವಾರ ಕರೆದಿದ್ದ ಸಮಾಜದ ಮುಖಂಡರ ಸಭೆಯಲ್ಲಿ ಆಯ್ಕೆ ಮಾಡಲಾಯಿತು ಎಂದು ಸಮಾಜದ ನಿಕಟ ಪೂರ್ವ ತಾಲ್ಲೂಕು ಅಧ್ಯಕ್ಷ ಕೆ.ಉಚ್ಚಂಗೆಪ್ಪ ತಿಳಿಸಿದರು. ಸಭೆಯಲ್ಲಿ ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷ ಎಚ್. ಟಿ.ಗಿರೀಶಪ್ಪ, ಶಿರಹಟ್ಟಿ ದಂಡೆಪ್ಪ, ಮುಖಂಡರಾದ ಎಚ್.ಕೆ.ಹಾಲೇಶ, ಬಸವರಾಜ ಸಂಗಪ್ಪನವರ್, ನಿಟ್ಟೂರು ಸಣ್ಣಹಾಲಪ್ಪ, ಬಾಣದ ಅಂಜಿನಪ್ಪ, ರೋಕ್ಕಪ್ಪ, ಆರ್.ಲೋಕೇಶ, ಪ್ರಾಣೇಶ, ವಾಗೀಶ, ಗಿಡ್ಡಳ್ಳಿ ನಾಗರಾಜ, ಬಾಲೇನಹಳ್ಳಿ ರೇವಣಸಿದ್ದಪ್ಪ, ಕೆಂಚನಗೌಡ, ಮಂಡಕ್ಕಿ ಸುರೇಶ, ವೆಂಕಟೇಶ, ಮಂಜುನಾಥ, ಶಿವರಾಜ, ಯೋಗೇಶ್, ಪ್ರಕಾಶ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆ ಜಿಲ್ಲಾ ಗಂಗಾಮತ ಸಮಾಜದ ಮಾಜಿ ಅಧ್ಯಕ್ಷರು,
ಹರಿಹರ ತಾ.ಪಂ. ಮಾಜಿ ಅಧ್ಯಕ್ಷರು, ಕುಂಬಳೂರು ಗ್ರಾ.ಪಂ.ಮಾಜಿ ಸದಸ್ಯರೂ ಆದ

**ಶ್ರೀ ಮಾಗಾನಹಳ್ಳಿ ಹಾಲಪ್ಪ**

ಇವರು ದಿನಾಂಕ 28-10-2023ರ ಶನಿವಾರ ನಿಧನರಾಗಿದ್ದು,
ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ, ಅವರ ಅಗಲಿಕೆಯ ದು:ಖ ಭರಿಸುವ ಶಕ್ತಿ ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಪದಾಧಿಕಾರಿಗಳು ಹಾಗೂ ಸದಸ್ಯರು**
**ದಾವಣಗೆರೆ ಜಿಲ್ಲಾ ಗಂಗಾಮತಸ್ಥರ (ಬೆಸ್ತರ) ಸಂಘ ಮತ್ತು ಸಮಾಜದ ಬಂಧುಗಳು, ದಾವಣಗೆರೆ**

# ಆಂಧ್ರದಲ್ಲಿ ಎರಡು ರೈಲುಗಳ ಡಿಕ್ಕಿ 8 ಜನ ಸಾವು, 20 ಜನರಿಗೆ ಗಾಯ

ನವದೆಹಲಿ, ಅ. 29 – ಆಂಧ್ರ ಪ್ರದೇಶದ ವಿಜಯನಗರಂ ಜಿಲ್ಲೆಯ ಹೌರಾ - ಚೆನ್ನೈ ರೈಲ್ವೆ ಮಾರ್ಗದಲ್ಲಿ ಎರಡು ರೈಲುಗಳು ಡಿಕ್ಕಿಯಾಗಿ ಎಂಟು ಜನ ಸಾವನ್ನಪ್ಪಿದ್ದಾರೆ ಹಾಗೂ 20 ಜನ ಗಾಯಗೊಂಡಿದ್ದಾರೆ.

ರಾಯಗಡ ಪ್ಯಾಸೆಂಜರ್ ರೈಲಿನ ಹಿಂಬದಿಗೆ ಪಲಸ ಪ್ಯಾಸೆಂಜರ್ ರೈಲು ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ. ಅಪಘಾತದಿಂದ ಮೂರು ಬೋಗಿಗಳು ಹಳಿ ತಪ್ಪಿವೆ ಎಂದು ಪೂರ್ವ ಕರಾವಳಿ ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ. ಈ ಅಪಘಾತದಲ್ಲಿ 18-20 ಜನ ಗಾಯಗೊಂಡಿದ್ದಾರೆ. ಅವರನ್ನು ವಿಶಾಖಪಟ್ಟಣಂ ಹಾಗೂ ವಿಜಯನಗರಂ ಜಿಲ್ಲೆಗಳ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಇವರಲ್ಲಿ ಮೂವರ ಸ್ಥಿತಿ ಚಿಂತಾಜನಕವಾಗಿದೆ.

ಸಂಜೆ ಸಮಯದಲ್ಲಿ ಅಪಘಾತ ಸಂಭವಿಸಿದೆ. ಮಾನವ ಲೋಪದ ಕಾರಣದಿಂದ ಈ ಅಪ ಘಾತ ಸಂಭ ವಿಸಿದೆ ಎಂದು ಶಂಕಿಸಿದ್ದು, ರಾಯಗಡ ಪ್ಯಾಸೆಂಜರ್ ರೈಲು ಸಿಗ್ನಲ್ ಮೀರಿ ಸಾಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.


**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು
**Rheumatologist**
(ರುಮಟಾಯ್ಡ್ ಆರ್ಥರೈಟಿಸ್)
ಬೆಂಗಳೂರು ಇವರು
ದಿ.1.11.2023ರ ಬುಧವಾರ
ದಿ.2.11.2023ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
**ಅನುಗ್ರಹ ಆಸ್ಪತ್ರೆ,**
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
**08192-222292**



ssims SPARSH
ORTHOPAEDICS • PLASTIC • NEURO SCIENCES
CENTRE FOR ACCIDENTS BONE & JOINT CARE

**ಸ್ಪರ್ಶ್ ಆಸ್ಪತ್ರೆ – ಬೆಂಗಳೂರು,** ಇಲ್ಲಿನ ಪ್ರಮುಖ ವೈದ್ಯ ಮತ್ತು ಮಧುಮೇಹ ತಜ್ಞರು
ದಾವಣಗೆರೆ ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕಿನಲ್ಲಿ ಲಭ್ಯರಿರುತ್ತಾರೆ
**ಪ್ರತೀ ಹದಿನೈದು ದಿನಗಳಿಗೊಮ್ಮೆ**
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

**ಡಾ|| ಸಮಿತ್ ಎ ಶೆಟ್ಟಿ**
MBBS, MDRC, PGDD (UK) (Cambridge University)
Consultant Diabetologist

ಇದಕ್ಕಾಗಿ ಸಮಾಲೋಚಿಸಿ:
- ಗರ್ಭಾವಸ್ಥೆಯ ಮಧುಮೇಹ
- ಥೈರೊಯ್ಡ್ ಸಮಸ್ಯೆಗಳು
- ಮಧುಮೇಹದಲ್ಲಿ ಮೂತ್ರಪಿಂಡದ ಕಾಯಿಲೆ
- ಹೃದ್ರೋಗಿಗಳಲ್ಲಿ ಮಧುಮೇಹ
- ನರಮಂಡದ ತೊಂದರೆಗಳು
- ಮಧುಮೇಹಕ್ಕೆ ಸಂಬಂಧಿಸಿದ ನರಗಳ ತೊಂದರೆಗಳು
- ಮಧುಮೇಹಕ್ಕೆ ಸಂಬಂಧಿಸಿದ ಕಣ್ಣಿನ ತೊಂದರೆಗಳು

ದಿನಾಂಕ: ಮಂಗಳವಾರ, 31ನೇ ಅಕ್ಟೋಬರ್ 2023 | ಸಮಯ: ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: **96869 29090 / 99800 33277**
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ



ಶ್ರೀಶೈಲ ಎಜ್ಯುಕೇಷನಲ್ ಟ್ರಸ್ಟ್ (ರಿ.) ಭೀಮಸಮುದ್ರ
GM GROUP
GM UNIVERSITY



**ಶ್ರೀ ಜಿ.ಮಲ್ಲಿಕಾರ್ಜುನಪ್ಪ ಶ್ರೀಮತಿ ಹಾಲಮ್ಮ ಚಾರಿಟಿ ಫೌಂಡೇಷನ್ (ರಿ) ಭೀಮಸಮುದ್ರ.**

**ಶ್ರೀ ಜಿ.ಮಲ್ಲಿಕಾರ್ಜುನಪ್ಪ ಇವರ**
**20ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ**

ತರಬೇತಿ ಮತ್ತು ಉದ್ಯೋಗ ವಿಭಾಗ ಜಿ.ಎಂ. ವಿಶ್ವವಿದ್ಯಾಲಯ, ದಾವಣಗೆರೆ ವಿಶ್ವವಿದ್ಯಾಲಯ
ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇವರ ಸಹಯೋಗದೊಂದಿಗೆ

**ಉದ್ಯೋಗ ಮೇಳ 2023**

ಉದ್ಯೋಗ ಮೇಳದ ಸಮಯ ಬೆಳಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ

**50+ ಕಂಪನಿಗಳು ಮತ್ತು 6000+ ಉದ್ಯೋಗ ಅವಕಾಶಗಳು**

| ಹರಿಹರ | ಚನ್ನಗಿರಿ | ಜಗಳೂರು |
|---|---|---|
| ದಿನಾಂಕ: 30–10–2023 | ದಿನಾಂಕ: 29–11–2023 | ದಿನಾಂಕ: 18–12–2023 |

ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ. / ಪಿ.ಯು.ಸಿ. / ಐ.ಟಿ.ಐ. / ಡಿಪ್ಲೋಮ / ಪದವಿ / ಸ್ನಾತಕೋತ್ತರ ಪದವಿ.


ಸಿಟಿ ಸೆಂಟ್ರಲ್ ಹಾಸ್ಪಿಟಲ್ಸ್ ಪ್ರೈ ಲಿ., ದಾವಣಗೆರೆ ನೇತ್ರಾಲಯ, ಡಾಕ್ಟರ್ ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆ,
ಜಿ.ಎಂ.ಆಸ್ಪತ್ರೆ, ಬೆಂಗಳೂರು ಮತ್ತು ಲಯನ್ಸ್ ಕ್ಲಬ್ ಇವರ ಸಹಯೋಗದೊಂದಿಗೆ

**ಉಚಿತ ಆರೋಗ್ಯ ಮತ್ತು ರಕ್ತದಾನ ಶಿಬಿರ**

ಉಚಿತ ವೈದ್ಯಕೀಯ ಶಿಬಿರದ ಸಮಯ ಬೆಳಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ

| ನ್ಯಾಮತಿ | ಹರಪನಹಳ್ಳಿ | ಸಂತೇಬೆನ್ನೂರು |
|---|---|---|
| ದಿನಾಂಕ: 17–11–2023 | ದಿನಾಂಕ: 22–11–2023 | ದಿನಾಂಕ: 02–12–2023 |

ಉಚಿತ ಸೇವೆಗಳು: ಸಮಾಲೋಚನೆ, ದೇಹ ತಪಾಸಣೆ, ಆರೋಗ್ಯ ಜಾಗೃತಿ, ರಕ್ತ ತಪಾಸಣೆ, ರಕ್ತದ ಒತ್ತಡ ತಪಾಸಣೆ, ಕಣ್ಣಿನ ಪರೀಕ್ಷೆ ಹಾಗೂ ಇ.ಸಿ.ಜಿ. ಪರೀಕ್ಷೆ.




ಡಾ. ಶ್ರೀ ಜಿ.ಎಂ.ಸಿದ್ದೇಶ್ವರ
ಮಾನ್ಯ ಲೋಕಸಭಾ ಸದಸ್ಯರು, ದಾವಣಗೆರೆ.



ಶ್ರೀ ಜಿ.ಎಂ.ಪ್ರಸನ್ನ ಕುಮಾರ್
ಟ್ರಸ್ಟಿ.



ಶ್ರೀ ಜಿ.ಎಂ.ಲಿಂಗರಾಜು
ಟ್ರಸ್ಟಿ.



ಶ್ರೀ ಜಿ.ಎಸ್.ಅನಿತ್ ಕುಮಾರ್
ಟ್ರಸ್ಟಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: **82965-02393, 78929-56667.**
Website: http//www.gmgroup.in/charity.html, E-mail: placement@gmit.ac.in


|| ಶ್ರೀ ರೇವಣಸಿದ್ದೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಜನನ 24.09.1954

ನಿಧನ 26.10.2023

ದಾವಣಗೆರೆ ಸಿಟಿ ವಾಸಿ
**ಶ್ರೀ ಎಸ್. ರಾಜಣ್ಣ ಮತ್ತು ಮಕ್ಕಳು** ಇವರು ಮಾಡುವ ವಿಜ್ಞಾಪನೆಗಳು.
ಆತ್ಮೀಯ ಬಂಧುಗಳೇ, ದಿನಾಂಕ 26.10.2023ನೇ ಗುರುವಾರ ಬೆಳಿಗ್ಗೆ 8.45 ಕ್ಕೆ
ನನ್ನ ಧರ್ಮಪತ್ನಿಯಾದ

**ಶ್ರೀಮತಿ ಎಂ.ಎನ್. ಜಯಶ್ರೀ ರಾಜಣ್ಣ**

ಇವರು ಲಿಂಗೈಕ್ಯರಾದ ತತ್ಸಬಂಧ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 30.10.2023ನೇ ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಈಶ್ವರ ಪಾರ್ವತಿ ಸಮುದಾಯ ಭವನ, 8ನೇ ಕ್ರಾಸ್, ವಿದ್ಯಾನಗರ ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ :
❖ ಶ್ರೀಮತಿ ವೀಣಾ ಜೋಳದ್ ಮತ್ತು ಶ್ರೀ ಸಚ್ಚಿದಾನಂದ ಜೋಳದ್
❖ ಸ್ಮೃತಿ ಜೋಳದ್ ❖ ಶ್ರೀ ಎಂ.ಆರ್. ವಿವೇಕ್ ಮತ್ತು ಶ್ರೀಮತಿ ಅಶ್ವಿನಿ ವಿವೇಕ್
ಹಾಗೂ ಬಂಧು ಮಿತ್ರರು.

ಇಂದ : **ಶ್ರೀ ಎಸ್. ರಾಜಣ್ಣ ಮತ್ತು ಮಕ್ಕಳು**
ಎಫ್/3, 3ನೇ ಮೇನ್, 7ನೇ ಕ್ರಾಸ್, ವಿದ್ಯಾನಗರ, ದಾವಣಗೆರೆ.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.